ಕರ್ನಾಟಕ ವಿಧಾನಸಭೆ
ಬುಧವಾರ 21ನೇ ಫೆಬ್ರವರಿ 2007 ರಂದು
ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ
ಸಭಾಂಗಣದಲ್ಲಿ ಬೆಳಿಗ್ಗೆ 11-15 ಗಂಟೆಗೆ ಸಮಾವೇಶಗೊಂಡಿತು.
ಅಧ್ಯಕ್ಷರು (ಶ್ರೀ: ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು.

1. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು

ವಿಷಯ: ವಿಧಾನ ಪರಿಷತ್ತಿನ ಸಭಾಪತಿ ಚುನಾವಣೆ ಬಗ್ಗೆ ಘನತೆವೆತ್ತ ರಾಜ್ಯಪಾಲರ ಸಂದೇಶ ಕುರಿತು.

ಶ್ರೀ ಎನ್. ಧರ್ಮಸಿಂಗ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧ್ಯಕ್ಷರೇ, ತಾವು ಐದಾರು ದಿವಸಗಳಿಂಧ ಸದನದಲ್ಲಿ ಇರಲಿಲ್ಲ. ಅದಕ್ಕೆ ಕಾರಣ ನಮಗೆಲ್ಲಾ ಗೊತ್ತಿದೆ. ಇವತ್ತು ತಾವು ಬಂದಿದ್ದೀರಿ. ನಾವು ವೆಲ್‌ನಲ್ಲಿ ಇದ್ದೆವು. ಸದನ ನಡೆಸಲಿಕ್ಕೆ ತಾವು ಬಂದ ಮೇಲೆ ನಾವು ಮಾತನಾಡುತ್ತಿದ್ದೇವೆ. ಮಾನ್ಯ ಅಧ್ಯಕ್ಷರೇ, ಇವತ್ತು ಕಾಂಗ್ರೆಸ್ ಪಕ್ಷದ ಪರವಾಗಿ ನಾವೆಲ್ಲರೂ ಕೂಡ ಪ್ರತಿಭಟನೆ ಮಾಡುತ್ತಿದ್ದೆವು ಇದಕ್ಕೆ ಕಾರಣ ವಿಧಾನ ಪರಿಷತ್ತಿನಲ್ಲಿ ನಲವತ್ತು ಜನ ಕಾಂಗ್ರೆಸ್ ಸದಸ್ಯರನ್ನು ಮಾನ್ಯ ತಿಪ್ಪಣ್ಣನವರು ಸಸ್ಪೆಂಡ್ ಮಾಡಿದರು. ಯಾರಿಗೆ ಸಭೆ ನಡೆಸುವುದಕ್ಕೆ ಹಕ್ಕು ಇಲ್ಲವೋ ಅವರು ಸಸ್ಪೆಂಡ್ ಮಾಡಿದ್ದಾರೆ. ಕಾರ್ಯಕಲಾಪಗಳನ್ನು ನಡೆಸಿದ್ದಾರೆ. ಇವತ್ತು ಆ ಮನೆಯಲ್ಲಿ ಒಂದು ರೀತಿಯಾದ ಏನು ಧೋರಣೆ ಅನುಸರಿಸಿದ್ದಾರೆ, ನಮ್ಮ ಗೃಹ ಸಚಿವರಿಗೆ ಗೊತ್ತು, ಸಾಕಷ್ಟು ಸುತ್ತಿನ ಮಾತುಕತೆ ಆಗಿದೆ, ಮಾನ್ಯ ಮುಖ್ಯಮಂತ್ರಿಗಳ ಜೊತೆ ಮಾತನಾಡಿದೆವು. ಅಂತಿಮವಾಗಿ ಗೃಹ ಸಚಿವರು, ಮಾನ್ಯ ಚೆಲುವರಾಯಸ್ವಾಮಿಯವರ ಜೊತೆಯಲ್ಲಿಯೂ ಸಹ ಮಾತನಾಡಿದೆವು. ಅದು ಎಲ್ಲಿಯವರೆಗೆ ಸಮಸ್ಯೆ ಇತ್ಯರ್ಥವಾಗುವುದಿಲ್ಲವೋ ಅಲ್ಲಿಯವರೆಗೂ ಪ್ರತಿಭಟನೆ ಮಾಡುತ್ತೇವೆ ಎನ್ನುವುದು ನಮ್ಮ ವಾದ. ಏಕೆಂದರೆ ತಮಗೆ ಗೊತ್ತಿರುವ ಹಾಗೆ ಬಿಲ್ಲುಗಳು ಪಾಸಾಗಬೇಕಾಗಿದೆ. ಆ ಸದನದಲ್ಲೂ ಬಿಲ್ಲುಗಳು ಪಾಸಾಗಬೇಕಾಗಿದೆ. ಇವತ್ತು ನಾವು ಸಭಾಪತಿಗೆ question ಮಾಡಿದ್ದೇವೆ, ಅವರು ಆ ಪೀಠದಲ್ಲಿ ಕುಳಿತು 40 ಜನ ಕಾಂಗ್ರೆಸ್ ಸದಸ್ಯರನ್ನು ಅಮಾನತ್ತುಗೊಳಿಸತಕ್ಕಂಥ ಕೃತ್ಯ ಏನಿದೆ ಇವತ್ತು ವಿಧಾನಪರಿಷತ್ತಿನಲ್ಲಿ ಮತ್ತು ಈ ಸದನದಲ್ಲಿ ಯಾವತ್ತೂ ಕೂಡ ನಡೆದಿಲ್ಲ. ಇಂಥಾ ಒಂದು ಘಟನೆಯ ಬಗ್ಗೆ ಪ್ರಸ್ತಾಪ ಮಾಡಿದೆವು. ಆ ವಿಷಯದ ಬಗ್ಗೆ ಘನತೆವೆತ್ತ ರಾಜ್ಯಪಾಲರ ಬಳಿ ಹೋಗಿದ್ದೆವು. ಒಂದು ಗಂಟೆ

ಕಾಲ ಅವರೊಂದಿಗೆ ನಾವು ನಮ್ಮ ವಾದವನ್ನು ಪ್ರತಿಪಾದನೆ ಮಾಡಿದ್ದೇವೆ. ಕಾನೂನಿನ ಪ್ರಕಾರ ಯಾವ ರೀತಿಯಲ್ಲಿ ಕ್ರಮ ತೆಗೆದುಕೊಳ್ಳಬೇಕು ಇಂಥ ಪರಿಸ್ಥಿತಿಯಲ್ಲಿ, ಎನ್ನುವುದನ್ನು ಹೇಳಿದ್ದೇವೆ. ತದನಂತರ ಗೃಹ ಸಚಿವರು, ಮಾನ್ಯ ಮುಖ್ಯಮಂತ್ರಿಗಳು ಸಹ ಹೋಗಿ ಮಾತನಾಡಿದ್ದಾರೆ. ನಿನ್ನೆ ಕೂಡ ನಾವು ತಮ್ಮ ವಿರುದ್ಧವೂ ಸಹ ಅವಿಶ್ವಾಸ ನಿರ್ಣಯ ತಂದಿದ್ದೆವು. ಅದು ತಮ್ಮ ವಿರುದ್ಧವಲ್ಲ. ತಮ್ಮ ಬಗ್ಗೆ ನಮಗೆ ಘನತೆ ಗೌರವ ಇದೆ. ಆದರೆ ತಾವು ನಡೆದುಕೊಳ್ಳತಕ್ಕಂಥ ನಡವಳಿಕೆ ಎಂದು ಈ ಸರ್ಕಾರ ಅಸ್ತಿತ್ವಕ್ಕೆ ಬಂತು, 20 ತಿಂಗಳುಗಳ ಕಾಲ ರಾಜ್ಯದ ಮುಖ್ಯಮಂತ್ರಿಯಾಗಿ ನನಗೂ ಕೆಲಸ ಮಾಡಲಿಕ್ಕೆ ಅವಕಾಶ ಕಲ್ಪಿಸಿ ಕೊಟ್ಟಿರಿ. ಸಾಕಷ್ಟು ಮಾತುಗಳು ಇದೆ, ಇವತ್ತು ಸುಪ್ರೀಂಕೋರ್ಟ್ ಕೂಡ ಉತ್ತರಪ್ರದೇಶದಲ್ಲಿ ಆಗಿರತಕ್ಕಂಥ ಘಟನೆಗಳ ಬಗ್ಗೆ ಅಲ್ಲಿ 13 ಜನ ಶಾಸಕರನ್ನು ಯಾವರೀತಿ ಅಮಾನತ್ತುಗೊಳಿಸಿದ್ದಾರೆ. ಈ ಎಲ್ಲಾ ವಿಷಯಗಳ ಬಗ್ಗೆ ಪ್ರಸ್ತಾಪ ಮಾಡುವುದಿತ್ತು. ನಾವು ವೆಲ್‌ನಲ್ಲಿ ಇದ್ದೆವು. Motion move ಮಾಡಿ ಎಂದು ಹೇಳಿದರು. ಹೌಸ್ ಆರ್ಡರ್‌ನಲ್ಲಿದ್ದರೆ ನಾವು ಮಾಡುತ್ತೇವೆಂದು ಹೇಳಿದೆವು, ಸಾಕಷ್ಟು ನಡೆದು ಹೋಯಿತು. ತಾವು ಇವತ್ತು ಬಂದಿದ್ದೀರಿ, ಸಂತೋಷ. ಇವತ್ತೇನಾಗಿದೆ, ನಿನ್ನೆ, ಘನತೆವೆತ್ತ ರಾಜ್ಯಪಾಲರ ಭಾಷಣಕ್ಕೆ ವಂದನಾ ನಿರ್ಣಯವನ್ನು ಗಲಾಟೆಯಲ್ಲಿ ಪಾಸ್ ಮಾಡಿಕೊಂಡಿದ್ದೀರಿ. ಬಹಳಷ್ಟು ವಿಷಯಗಳು ಪ್ರಸ್ತಾಪವಾದಾಗ ಯಾವಾಗಲೂ ಸದನದಲ್ಲಿ, ನಮ್ಮ ಮಾನ್ಯ ಪ್ರಕಾಶ್‌ರವರಿಗೆ ಗೊತ್ತಿದೆ, ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕೆಲವು ಸಲ ನಿಯಮಗಳ ಪ್ರಕಾರ ನಡೆಯಬೇಕಾಗುತ್ತದೆ. ನಾವು ಎಂದೂ ಈ ಸದನದಲ್ಲಿ ನಿಯಮ ಬಾಹಿರವಾಗಿ ಕೆಲಸಕಾರ್ಯಗಳನ್ನು ಮಾಡಲಿಲ್ಲ. ಇವತ್ತು ನಾವೆಲ್ಲಾ ಸಾರ್ವಜನಿಕ ಪ್ರತಿನಿಧಿಗಳು..

(ಗೊಂದಲ)

ಶ್ರೀ ಎಂ.ಪಿ. ವೆಂಕಟೇಶ್: ಸದನದ ಇತಿಹಾಸದಲ್ಲಿಯೇ ಈ ರೀತಿ ಆಗಿರಲಿಲ್ಲ. ಆ ರೀತಿ ತಾವು ನಿನ್ನೆ ನಡೆದುಕೊಂಡಿರಿ. ಮಾನ್ಯ ಡಿ.ಕೆ. ಶಿವಕುಮಾರ್‌ರವರು ಮಂತ್ರಿಯಾಗಿದ್ದವರು. ಅವರು, ಮೇಲೆ ಹೋಗಿ ಮೈಕ್ ಎಲ್ಲಾ ಕಿತ್ತುಕೊಂಡರು. ಈ ಸದನದ ಇತಿಹಾಸದಲ್ಲಿ ಮಾಡದೇ ಇರುವಂಥ ಕೆಲಸವನ್ನು ಮಾಡಿದರು. ಇತಿಹಾಸದಲ್ಲಿ, ಒಬ್ಬ ಸಚಿವರಾಗಿದ್ದವರು ಈ ತರಹ ಯಾರೂ ಮಾಡಿರಲಿಲ್ಲ.

ಅಧ್ಯಕ್ಷರು: ವಿರೋಧ ಪಕ್ಷದ ನಾಯಕರು ಮಾತನಾಡುತ್ತಿದ್ದಾರೆ. ಅವರು ಏನು ಮಾತನಾಡುತ್ತಾರೆ ಕೇಳಿ, ಅದಕ್ಕೆ ಪಾರ್ಲಿಮೆಂಟರಿ ಮಿನಿಸ್ಟರ್ ತಾವು

ಉತ್ತರ ಹೇಳುವುದಕ್ಕೆ ಅವಕಾಶವಿದೆ. ಆಗ ತಾವು ಉತ್ತರ ಹೇಳಿ. ನಿಮಗೆ ಅವಕಾಶ ಮಾಡಿಕೊಡುತ್ತೇನೆ.

ಶ್ರೀ ಧರ್ಮಸಿಂಗ್ : 1983ರಲ್ಲಿ ಗುಲ್ಬರ್ಗದಲ್ಲಿ 'ಕ್ರಾಂತಿ' ಸಂಪಾದಕರ ಕೊಲೆಯಾಯಿತು. ಆಗ ವಿರೋಧ ಪಕ್ಷದಲ್ಲಿದ್ದ ನಾವೆಲ್ಲರೂ ಪ್ರತಿಭಟನೆ ನಡೆಸಿದ್ದೆವು. ಮಾನ್ಯ ಚಂದ್ರೇಗೌಡರು, ತಮ್ಮ ಪೀಠದಲ್ಲಿದ್ದರು. ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದರು. ನ್ಯಾಯ ಸಿಗಲಿ ಎಂದು ನಾವೆಲ್ಲರೂ ಉದ್ರಿಕ್ತವಾಗಿ ಹೇಳಬೇಕಾಗುತ್ತದೆ. ಅದು ನಮ್ಮನ್ನು ಒತ್ತಾಯಿಸುತ್ತದೆ. ಅಂತಹ ಸಂದರ್ಭ ಬಂದಿತ್ತು. ಈ ಸದನದಲ್ಲೇ ಗೋಪಾಲಗೌಡರು ಇಲ್ಲಿ ಕೂತಿದ್ದರು. ಕೊಠಾವಳೆ ಸ್ಪೀಕರಾಗಿದ್ದರು. ಆಗ ಅಜೀಜ್ ಸೇಠ್‌ರದು ಘಟನೆ ಯಾವರೀತಿ ನಡೆಯಿತು ಎಂದು ನಿಮಗೆಲ್ಲ ಗೊತ್ತಿದೆ. ಆಗಿರುವಂಥ ಘಟನೆ ಬಗ್ಗೆ, ನಾವು ಏನು ಬಹಳ ಪುರುಷಾರ್ಥ ಮಾಡಿದ್ದೇವೆಂದು ಹೇಳುತ್ತಿಲ್ಲ. ನಮ್ಮ ಅನಿಸಿಕೆಗಳನ್ನು ವ್ಯಕ್ತಪಡಿಸುವಾಗ ಆ ರೀತಿ ಆಗಿದೆ. ಲೋಕಸಭೆಯಲ್ಲಿ ಬೇರೆ ಸದನಗಳಲ್ಲೂ ಹೀಗೆಲ್ಲ ನಡೆದಿದೆ.

ಶ್ರೀ ಚಲುವರಾಯಸ್ವಾಮಿ: ಮಾನ್ಯ ವಿರೋಧ ಪಕ್ಷದ ನಾಯಕರು ಎಲ್ಲ ಕಡೆ ನಡೆದಂತೆಯೇ ಇಲ್ಲೂ ನಡೆಯಿತು ಎಂಬಂತೆ ಹೆಳುತ್ತಿದ್ದೀರಲ್ಲ. ಅಂದರೆ ನಿನ್ನೆ ನಡೆದದ್ದು ತಮಗೆ ಸಮಾಧಾನವಾಗಿದೆಯಾ?

ಅಧ್ಯಕ್ಷರು: ಏನು ಘಟನೆ ನಡೆದಿವೆ, ಅದಕ್ಕಾಗಿ ವಿಷಾದ ವ್ಯಕ್ತಪಡಿಸುತ್ತಿದ್ದೀರಾ, ವಿರೋಧ ಪಕ್ಷದ ನಾಯಕರೇ? ಈಗ ಏನಾಗಿದೆ ಅಂದರೆ ವಿರೋಧ ಪಕ್ಷದ ನಾಯಕರು ಅನೇಕ ಘಟನಾವಳಿಗಳನ್ನು ಪ್ರಸ್ತಾಪಿಸುತ್ತಿದ್ದಾರೆ. ಅದರ ಬಗ್ಗೆಯೆಲ್ಲ ವಿಷಾದ ವ್ಯಕ್ತಪಡಿಸುತ್ತಿದ್ದಾರೆ ಎಂದು ನಾನು ಭಾವಿಸುತ್ತೇನೆ. ಇಲ್ಲಿ ಆ ಕಡೆಯವರಾಗಲಿ ಈ ಕಡೆಯವರಾಗಲಿ ಚರ್ಚೆ ಮಾಡಿ, ನಿಮ್ಮ ಅನಿಸಿಕೆಗಳನ್ನು ಹೇಳಿ, ಉತ್ತರ ಪಡೆಯಿರಿ. ಆ ರೀತಿ ತೀರ್ಮಾನ ಮಾಡಿಕೊಂಡು ಜನರ ಹಿತಕ್ಕಾಗಿ ಹೋಗಬೇಕು. ಅದು ಬಿಟ್ಟು ಭಾವೋದ್ರೇಕಕ್ಕೆ ಒಳಗಾದರೆ ಅದು ಕಷ್ಟವಾಗುತ್ತದೆ.

ಶ್ರೀ ಧರ್ಮಸಿಂಗ್: ನಾನು ಏಕೆ ಇದನ್ನು ಹೇಳುತ್ತಿದ್ದೇನೆ ಅಂದರೆ, ನಾವು ಪ್ರತಿಭಟನೆ ಮಾಡಿಕೊಂಡೂ ಈ ಸ್ಥಾನದಲ್ಲಿ ಕೂತಿದ್ದೇವೆ ಎಂದು ಹೇಳಬೇಕಾಗುತ್ತದೆ. ಈ ರಾಜ್ಯದ Constitutional Head, ಘನತೆವೆತ್ತ, ಸರ್ಕಾರಕ್ಕೆ ಪತ್ರ ಬರೆದಿದ್ದಾರೆ. ಆ ಪತ್ರವನ್ನು ವಿಧಾನಪರಿಷತ್ತಿನಲ್ಲಿ ಇವತ್ತು ಓದಬೇಕು ಅಂತ.. ಈ ಪತ್ರ ನೆನ್ನೆ 5 ಗಂಟೆಗೆ ತಲುಪಿದೆ. ಅವರು ಕಾನೂನಿನ ಪ್ರಕಾರ ಸಭಾಪತಿ ಚುನಾವಣೆ ಆಗಬೇಕು ಅಂತ ಹೇಳಿದ್ದಾರೆ. ಆ ಚುನಾವಣೆ

ನಡೆಸಬೇಕು ಅಂತ ಬಹಳ ತೀವ್ರವಾಗಿ ಬರೆದಿದ್ದಾರೆ. ರಾಜ್ಯಪಾಲರು ಈ ರೀತಿ ಆದೇಶ ನೀಡಿದ್ದಕ್ಕಾಗಿ ವಿರೋಧ ಪಕ್ಷದವರಾದ ನಾವೆಲ್ಲ ಧನ್ಯವಾದ ಹೇಳುತ್ತಿದ್ದೇವೆ. ಪತ್ರ ಬರುವ ದಿವಸವೇ ಸಭಾಪತಿ ತಿಪ್ಪಣ್ಣನವರು ಸದನವನ್ನು 16ನೇ ತಾರೀಖಿಗೆ ಮುಂದೂಡಿದ್ದಾರೆ. ಯಾವಕಾರಣಕ್ಕಾಗಿ ವೆಲ್‌ನಲ್ಲಿ ಕೂತಿದ್ದು ಇವತ್ತು ಸೀಟಿಗೆ ಬಂದು ಹೇಳುತ್ತಿದ್ದೇವೆ ಅಂದರೆ ವಿರೋಧ ಪಕ್ಷದವರಿಗೆ ಕರ್ನಾಟಕದಲ್ಲಿ ಜಯಸಿಕ್ಕಿದೆ. ರಾಜ್ಯಪಾಲರು ಹೀಗೆ ಪತ್ರ ಬರೆದಿದ್ದಾರೆ.

"Article 182 of the Constitution: The Chairman and Deputy Chairman of the Legislative Council.

The Legislative Council of every state, having such Council, shall, as soon as may be, choose two members of the Council to be respectively Chairman and Deputy Chairman thereof and so often as the office of Chairman or Deputy Chairman becomes vacant, the Council shall choose another member to be Chairman or Deputy Chairman as the case may be."

The Constitutional implication is that the office of the Chairman cannot remain vacant for any extraneous reason for long. It is mandatory for council to elect its chairman.

Clause 7(6) of the rules as approved by the House defines and delimits as to how early or soon "Not later than immediate next session" election to the post of the Chairman is to be held.

I urge upon the Hon'ble members of the House to choose the Chairman so as to fill the vacancy as per Constitution.

I hope that the machinery for election is set in motion for free, impartial and fair election to the Office of the Chairman in consonance with the Constitutional requirements.".. ಇಂತಹ ವಾದಗಳು ಬಂದಾಗ ನಾವು ಹೋಗಿ ಪದೇಪದೇ ಹೇಳಿ ಸಂವಿಧಾನದ ವಿಧಿಗಳನ್ನೆಲ್ಲ ಅವರಿಗೆ ಉದ್ಧರಿಸಿ ಘನತೆವೆತ್ತ ರಾಜ್ಯಪಾಲರಿಗೆ ಮಾತನಾಡಿದಾಗ ಅವರ ಮನಸಿಗೆ ಬಂದು, ಇಂದು ನಮ್ಮ ಹೋರಾಟಕ್ಕೆ ಜಯ ಸಿಕ್ಕಿದೆ. ಅದಕ್ಕೆ ನಾವು ಘನತೆವೆತ್ತ ರಾಜ್ಯಪಾಲರಿಗೆ ವಂದನೆ ಸಲ್ಲಿಸಿ ಇಲ್ಲಿ ಬಂದು ಕೂತಿದ್ದೇವೆ

ಅಧ್ಯಕ್ಷರು: ನೆನ್ನೆ ಘಟನೆಗಳನ್ನು ನಾನು T.V. ಯಲ್ಲಿ ನೋಡಿದೆ. ವಿರೋಧ ಪಕ್ಷದ ನಾಯಕರು ಅದನ್ನು ಪ್ರಸ್ತಾಪ ಮಾಡುತ್ತಾರೆ ಅಂತ ಭಾವಿಸಿದ್ದೆ. ಅದರಿಂದ ಈ ಮನೆಗೆ ಭೂಷಣ ಬರುವುದಿಲ್ಲ. ಆ ಕಡೆಯವರದು ಈ ಕಡೆಯವರ ರಾಜಕೀಯ ಮಾಡಿಕೊಳ್ಳುವುದಕ್ಕೆ ಬೇಕಾದಷ್ಟು ಜಾಗವಿದೆ. ಆದರೆ ಅಮಾನವೀಯವಾಗಿ ನಡೆದುಕೊಳ್ಳುವುದು ಸರಿಯಲ್ಲ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ: ಇವರು ರಾಜಕೀಯವಾಗಿ ಇಷ್ಟು ಅಧಃಪತನಕ್ಕಿಳಿದಿರುವುದಕ್ಕೆ ರಾಜ್ಯದ ಜನರೇ ಉತ್ತರ ಹೇಳುತ್ತಾರೆ.

(ಗೊಂದಲ)

ಅಧ್ಯಕ್ಷರು: ಮಾನ್ಯ ಖರ್ಗೆಯವರು ಅದರ ಬಗ್ಗೆ ಪ್ರಸ್ತಾಪಿಸುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೇ, ಮೊದಲನೆಯದಾಗಿ ತಾವು ಸುಮಾರು 3–4 ದಿವಸಗಳಿಂದ ಇರಲಿಲ್ಲ. ಸದನದಲ್ಲಿ ಏನು ನಡೆದಿದೆ ಎನ್ನತಕ್ಕಂಥದ್ದರ ಬಗ್ಗೆ ಈಗಾಗಲೇ ಅದರ ಮಾಹಿತಿ ಕೂಡ ಇದೆ. ಮತ್ತು ಅದರ ಬಗ್ಗೆ ತಾವು ಈಗಾಗಲೇ ಸಾಕಷ್ಟು ತಿಳಿದುಕೊಂಡಿದ್ದೀರಿ. ನಿನ್ನೆ ಏನೊಂದು ಘಟನೆ ನಡೆಯಿತು, ಅದು ಏಕೆ ನಡೆಯಿತು ಎನ್ನುವುದಕ್ಕೆ ಒಂದು ಇತಿಹಾಸ ಇದೆ. ನಾವು ಅದರ ಬಗ್ಗೆ ಬಹಳ ಸಂತೋಷಪಟ್ಟಿದ್ದೇವೆ, ಹೆಮ್ಮೆ ಪಡುತ್ತೇವೆಂದು ಇಲ್ಲ. ಆದಂಥ ಘಟನೆ ಬಗ್ಗೆ ನಾನು ವಿಷಾದವನ್ನು ವ್ಯಕ್ತಪಡಿಸುತ್ತೇನೆ. ಆದರೆ, ಯಾವ ಕಾರಣಕ್ಕಾಗಿ ಆ ನಡವಳಿಕೆ ಬಂತು, ಯಾವ ದೃಷ್ಟಿಯಿಂದ ಬಂತು, ಎನ್ನತಕ್ಕಂಥದ್ದೂ ಕೂಡ ಪ್ರಜಾಪ್ರಭುತ್ವದಲ್ಲಿ ನಾವು ತಿಳಿದುಕೊಳ್ಳಬೇಕು. ಆ ಒಂದು ಪರಿಸ್ಥಿತಿಯಲ್ಲಿ ಉದ್ರೇಕವಾಗಿ..

ಅಧ್ಯಕ್ಷರು: ಖರ್ಗೆ ಸಾಹೇಬರೆ, ಪ್ರಚೋದನೆಗಳು ಏನಿದ್ದರೂ ಈಗ ಧರಣಿ ಮಾಡಿದಿರಿ, ಹೇಳಿದಿರಿ, ಅನೇಕ ಸಂದರ್ಭದಲ್ಲಿ ನನ್ನನ್ನು ಬಾಯಿಗೆ ಬಂದ ಹಾಗೆ ಬಯ್ದಿದ್ದೀರಿ. ಆದರೆ ನಿನ್ನೆ ಈ Podium ಗೆ ಹತ್ತಿದ ಘಟನೆ ಇದೆಯಲ್ಲ, ಅದು ಆಗಬಾರದಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನಾನು ಹೇಳಿದೆನಲ್ಲ, ಆ ಘಟನೆ ನಮಗೆ ಸಂತೋಷ ತಂದಿಲ್ಲವೆಂದು ನಾನು ಹೇಳಿದ್ದೇನೆ. ಅದಕ್ಕಾಗಿ ನಾನು ಸ್ವತಃ ವಿಷಾದವನ್ನು ವ್ಯಕ್ತಪಡಿಸುತ್ತೇನೆಂದು ಹೇಳಿದ್ದೇನೆ. ಆದರೆ ಈ ಘಟನೆ ಪ್ರಜಾಪ್ರಭುತ್ವದಲ್ಲಿ ಹೇಗೆ ಬೆಳವಣಿಗೆ ಆಯಿತು ಎನ್ನತಕ್ಕಂಥದ್ದರ ಬಗ್ಗೆ ತಮ್ಮ ಗಮನಕ್ಕೆ ತರುವುದು ಏಕೆ ಮುಖ್ಯವೆಂದರೆ ನಾವು ಈ well ನಲ್ಲಿ ಕುಳಿತಿದ್ದೆವು. ಸುಮಾರು ಎರಡು ದಿವಸದಿಂದ ಅದು ನಡೆದಿದೆ. ಮೇಲ್ಮನೆಯಲ್ಲಿ ತಮಗೆ ಗೊತ್ತಿರುವ ಹಾಗೆ ಕಾಂಗ್ರೆಸ್ ಪಕ್ಷಕ್ಕೆ ಬಹುಮತ ಇದೆ. ಸುಮಾರು 40 ಸದಸ್ಯರು

ಮೇಲ್ಮನೆಯಲ್ಲಿ ಕಾಂಗ್ರೆಸ್ ಪಕ್ಷದ ವತಿಯಿಂದ ಇದ್ದಾರೆ. ವಿರೋಧ ಪಕ್ಷದಲ್ಲಿರತಕ್ಕಂಥವರು, ಅಂದರೆ, ಸರ್ಕಾರದಲ್ಲಿರತಕ್ಕಂಥವರು ಮತ್ತು ಇವತ್ತು ಅಲ್ಲಿ ಅಲ್ಪಸಂಖ್ಯಾತರಾಗಿರತಕ್ಕ 28 ಜನ ಸದಸ್ಯರು ಸೇರಿ ಕಾನೂನು ಬಾಹಿರವಾದ ಅಧ್ಯಕ್ಷರನ್ನು ನೇಮಿಸಿ ಆ 40 ಜನರನ್ನು ಹೊರಗೆ ಹಾಕಿ ಸದನವನ್ನು ನಡೆಸತಕ್ಕಂಥದ್ದನ್ನು ಮಾಡಿದರು. ಇದು ಯಾವ democracy ಎಂದು ತಾವು ಹೇಳಬೇಕು.

ಶ್ರೀ ಡಿ.ಹೆಚ್. ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): ಮಾನ್ಯ ಅಧ್ಯಕ್ಷರೇ, ನಾನು ಮೂರು ದಿವಸದಿಂದ ಸುಮ್ಮನೆ ಕುಳಿತಿದ್ದೇನೆ. ನನಗೆ ಒಂದು ನಿಮಿಷ ಅವಕಾಶವನ್ನು ಕೊಡಬೇಕು. ಅವರು ಮಾತನಾಡಲಿ. ಅವರು ಹಿರಿಯರಿದ್ದಾರೆ. ಆ ಸದನದ ಸಭಾ ನಾಯಕರಾಗಿ ಕಾನೂನು ಬಾಹಿರವಾಗಿ ಕೆಲಸ ಮಾಡಿದವರು. ಅವರು ಮಾತನಾಡಲಿ. ಆದರೆ ಅವರು ಮಾತನಾಡುವಾಗ...

ಅಧ್ಯಕ್ಷರು: Are you on a point of order? ಅವರು ಮಾತನಾಡಲಿ. ಆಮೇಲೆ ಉತ್ತರವನ್ನು ಕೊಡುವಿರಂತೆ. ಮಾನ್ಯ ಶಂಕರಮೂರ್ತಿಯವರು, ಅವರು ಮಾತನಾಡಲಿ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ತಾವು ನನಗೆ ಒಂದು ಅವಕಾಶವನ್ನು ಕೊಡಬೇಕು.

ಅಧ್ಯಕ್ಷರು: ನಿಮಗೆ ಅವಕಾಶ ಕೊಡುತ್ತೇನೆ. ಅಲ್ಲಿ ನೀವು ಸಭಾನಾಯಕರಾಗಿದ್ದೀರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ನಾನೇನು controversy ಆಗಿ ಮಾತನಾಡಿಲ್ಲ.

(ಗೊಂದಲ)

ಶ್ರೀ ಡಿ.ಹೆಚ್. ಶಂಕರಮೂರ್ತಿ: ಸತ್ಯ ಸಂಗತಿಗಳನ್ನು ಮಾತ್ರ ಹೇಳಬೇಕು. ಸುಳ್ಳುಗಳನ್ನು ಹೇಳಬಾರದು. ಸತ್ಯ ಹೇಳಬೇಕು. ಸರಿಯಾದ ಮಾಹಿತಿಯನ್ನು ಕೊಡಬೇಕು. ಕಾನೂನು ಬಾಹಿರವಾಗಿ 20 ತಿಂಗಳು ಇದ್ದರು. ಅದನ್ನು ಇಲ್ಲಿ ಹೇಳುತ್ತಾರಾ?

ಅಧ್ಯಕ್ಷರು: ಅದೇನು ಹೇಳಬೇಕೊ ಹೇಳುವಿರಂತೆ. ಅವರು ಮಾತನಾಡಲಿ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ: ಅವತ್ತೇ ಕೇಳಬೇಕಾಗಿತ್ತು. ನಿಮಗೆ ಪ್ರತಿಭಟನೆ ಮಾಡುವ ಶಕ್ತಿ ಇದ್ದರೆ ಮಾಡಬಹುದಾಗಿತ್ತು.

(ಗೊಂದಲ)

ಡಾ:ಶರಣಪ್ರಕಾಶ್‌ಪಾಟೀಲ್: ನಿಮಗೆ ಈಗ ಜ್ಞಾನೋದಯವಾಗಿದೆಯೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ: ಅದಕ್ಕಾಗಿ ಆ ಒಂದು ಘಟನೆ ಏನಾಯಿತು, ಬಹುಮತ ಇರತಕ್ಕ ಸದಸ್ಯರಿಗೆ ಹೊರಗೆ ಹಾಕಿ ಸದನವನ್ನು ನಡೆಸತಕ್ಕ ಕೆಲಸವನ್ನು ಮಾಡಿದರೆ ಇದು ನಿಜವಾಗಲೂ un-democratic. ಮತ್ತು ನಾವು ಯಾವುದೇ ಒಂದು ಕಾನೂನುಗಳನ್ನು ಮೇಲ್ಮನೆಯಲ್ಲಿ ಪಾಸು ಮಾಡಿದರೂ ಕೂಡ ಅದು ಕೇವಲ ಅಲ್ಪ ಸಂಖ್ಯಾತ ಸದಸ್ಯರಿಂದ ಮಾಡಿದ ಹಾಗೆ ಆಗುತ್ತದೆ, ಬಹು ಸಂಖ್ಯಾತ ಸದಸ್ಯರನ್ನು ನೀವು ಹೊರಗಿಟ್ಟು ಈ ಕೆಲಸವನ್ನು ಮಾಡುವುದು ಬೇಡವೆಂದು ಹೇಳಿ ನಾವು ಮನವಿಯನ್ನು ಮಾಡಿಕೊಂಡೆವು. ಅಲ್ಲಿ ಮೇಲ್ಮನೆ ನಾಯಕರಿಗೂ ಮಾಡಿಕೊಂಡಿದ್ದೇವೆ. ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ಮಾಡಿಕೊಂಡಿದ್ದೇವೆ. ಕೊನೆಗೆ ಪ್ರಜಾಪ್ರಭುತ್ವದಲ್ಲಿ ಬೇರೆ ದಾರಿಯೇ ಇರಲಿಲ್ಲ. Governor ಹತ್ತಿರ ಕೂಡ ಸಂವಿಧಾನ ಬದ್ಧವಾಗಿ ಹೋಗಿ ಅವರಿಗೂ ಕೂಡ ಮನವಿಯನ್ನು ಕೊಟ್ಟೆವು. ಕೊಟ್ಟಮೇಲೆ ಅವರು, ಕಾನೂನಿನ ಪ್ರಕಾರ ನಾನು ಕ್ರಮವನ್ನು ಜರುಗಿಸುತ್ತೇನೆಂದು ಹೇಳಿದರು. ಅವರು ಕೂಡ ತಕ್ಷಣ ತೆಗೆದುಕೊಳ್ಳಲಿಲ್ಲ. ಅವರು ಅದನ್ನು 3–4 ದಿವಸ ಲಂಬಿಸಿದರು. ಈ ಮಧ್ಯದಲ್ಲಿ ಆ ಚುನಾಯಿತ ಪ್ರತಿನಿಧಿಗಳನ್ನು ಹೊರಗೆ ಇಟ್ಟು ಮೇಲ್ಮನೆ ಸದಸ್ಯರು ಸದನವನ್ನು ನಡೆಸುವಾಗ ನಾವು ಪ್ರಜಾಪ್ರಭುತ್ವದಲ್ಲಿರುವ ಎಲ್ಲಾ forum ಗೆ ಕೂಡ ಹೋಗಿ ಮಾತನಾಡಿದರೂ ಕೂಡ ನಮಗೆ ಯಾರು ಕೂಡ ಕಾನೂನಿನ ಪ್ರಕಾರವಾಗಿ, ಸಂವಿಧಾನ ಪ್ರಕಾರವಾಗಿ, ರೂಲ್ಸ್ ಪ್ರಕಾರವಾಗಿ ಸ್ಪಂದಿಸದೇ ಇದ್ದಾಗ, ನಾವು ಎಲ್ಲಿ ಹೋಗಿ ನಮ್ಮ ಮಾತನ್ನು ಹೇಳಿಕೊಳ್ಳಬೇಕು, ತೋಡಿಕೊಳ್ಳಬೇಕೆಂದು ತಾವೇ ಹೇಳಬೇಕು. ನಾವು ಮಾಧ್ಯಮದ ಮುಖಾಂತರ ಹೇಳಿಕೊಂಡಿದ್ದೇವೆ. Governor ಹತ್ತಿರವೂ ಹೇಳಿಕೊಂಡಿದ್ದೇವೆ. ಅದಕ್ಕೆ ಅನಿವಾರ್ಯವಾಗಿ inevitably ನಾವು ಧರಣಿಯನ್ನು ಮಾಡಿದ್ದೇವೆ. ಈ ಧರಣಿಯನ್ನು ಶಾಂತ ರೀತಿಯಿಂದ ಅದು ನಡೆಯಬೇಕಾಗಿತ್ತು. ಒಂದೆರಡು ದಿವಸ ನಡೆಯಿತು. ಆದರೆ ಧರಣಿ ನಡೆದಾಗ ಬಿಲ್‌ಗಳೂ ಕೂಡ suo motu ಅವರು ಹಾಗೆ ಕೂಡುತ್ತಾರೆ, ನಾವು ಹಾಗೆ ಮಾಡುತ್ತೇವೆ ಎಂದು ಹೇಳಿ ಇವರು ಅದೇ ರೀತಿ ಮಾಡಲು ಶುರು ಮಾಡಿದರು.

ಅಧ್ಯಕ್ಷರು: ಅದೇನು ಹೊಸದಲ್ಲ ಮಾನ್ಯ ಖರ್ಗೆಯವರೇ, ಅನೇಕ ಸಾರಿ ಇಷ್ಟೆಲ್ಲ ಆಗಿ ಹೋಗಿ ಬಿಟ್ಟಿವೆ. It has become the order of the day.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಆ ಮನೆಯಲ್ಲಿ ಆ ರೀತಿಯಾಗಿ ನಡೆಯಿತು. ಈ ಮನೆಯಲ್ಲಿ ವಿರೋಧ ಪಕ್ಷದವರು ಧರಣಿ ಮಾಡಿದರೂ ಕೂಡ ಹೌಸ್ ಆರ್ಡರ್‌ನಲ್ಲಿ ಇಲ್ಲದಿದ್ದರೂ ಕೂಡ precedent ಗಳನ್ನು ಹೇಳಿ ಹೌಸ್ ಆರ್ಡರ್ ನಲ್ಲಿದೆ ಎಂದು ತಿಳಿದುಕೊಂಡೇ ನಾವು ಮಾಡುತ್ತೇವೆಂದು ಹೇಳಿ, ಚರ್ಚೆ ಇಲ್ಲದೆ ಅವರು ಪಾಸು ಮಾಡುವುದಕ್ಕೆ ಪ್ರಾರಂಭ ಮಾಡಿದರು. ಇದಕ್ಕೆ ನಾವೇನು ಕೇಳಿದ್ದೇವೆ. ಕೇಳಿದ್ದಕ್ಕಾದರೂ ಸ್ಪಂದಿಸಬೇಕಾಗಿತ್ತು. ಇಲ್ಲ. ಹೌಸ್‌ಗೆ ಮಾನ್ಯ ಮುಖ್ಯಮಂತ್ರಿಗಳೂ ಬರಲಿಲ್ಲ. ಮಾನ್ಯ ಉಪ ಮುಖ್ಯಮಂತ್ರಿಗಳೂ ಬರಲಿಲ್ಲ. ಅವರೇನು ಮಾಡಿದರು ಎಂದರೆ ಬೆಸ್ಟ್ ಅಡ್ವೋಕೇಟ್ ಅವರನ್ನು ಕೊಟ್ಟುಬಿಟ್ಟರು, ಮಾನ್ಯ ಹೋಂ ಮಿನಿಸ್ಟರ್ ಅವರೇನೆಂದರೆ ಪಾಪ, ನನಗೆ ಒಂದೊಂದು ಸಾರಿ ಅವರ ಬಗ್ಗೆ ಕರುಣೆ, sympathy ಕೂಡ ಇದೆ. ಏಕೆಂದರೆ ಅಂಥ Senior ಒಬ್ಬ ರಾಜಕಾರಣಿಯನ್ನು ಹೇಗೆ ಅವರು ಬಳಸಿಕೊಳ್ಳುತ್ತಿದ್ದಾರೆಂದು ನೋಡಿ ನನಗೆ ದುಃಖವಾಗುತ್ತಿದೆ. ಇಂಥ ಸಂದರ್ಭ ಬಂದಾಗ ಎಲ್ಲರೂ ಓಡಿ ಹೋಗುವುದು. ಅವರಿಗೆ ಹೇಳಿಕೊಡುವುದು. ಅವರು ನೀವು ಮಾಡಿಲ್ಲವೇನು? ಈ ಹಿಂದೆ ಇದು ಆಗಿರಲಿಲ್ಲವೇನು? ಎಂದರೆ ಇದು ಏನು ಪ್ರಜಾಪ್ರಭುತ್ವ? ಅದನ್ನೇ ಅವರು ಹೇಳಿಕೊಂಡು ಸಮರ್ಥನೆ ಮಾಡಿಕೊಳ್ಳಬೇಕಾಗಿದ್ದರೆ, ನಾವು ನೀವು ಸೇರಬೇಕಾಗಿಲ್ಲ. precedent ನೋಡುವುದು, ಮುಂದೆ ಬರೆದುಕೊಂಡು ಹೋಗುವುದು ನಾನು ಹೇಳತಕ್ಕಂಥದ್ದು, ಅದು ಒಂದು ಪ್ರಚೋದನೆಗೆ ಕಾರಣವಾಯಿತು. ಎಲ್ಲ ಬಿಲ್‌ಗಳನ್ನು ಪಾಸು ಮಾಡಿಕೊಂಡು, ಇಲ್ಲದೇ ಇರುವುದನ್ನು ಹೇಳಿಕೊಂಡು, ರಾಜ್ಯಪಾಲರ ಭಾಷಣಕ್ಕೆ ಕೂಡ vote of thanks ಹೇಳಿ ಅದನ್ನು ಮುಗಿಸತಕ್ಕಂಥದ್ದು ಮಾಡಿದರು. ಅದಕ್ಕೆ ಅದು ಒಂದು ಕಾರಣವಾಯಿತೇ ಹೊರತಾಗಿ ಉದ್ದೇಶಪೂರ್ವಕವಾಗಿ ಅವಮಾನ ಮಾಡಬೇಕು, ತೊಂದರೆ ಮಾಡಬೇಕು, ಅಥವಾ ಕೆಟ್ಟಹೆಸರು ತರಬೇಕೆನ್ನುವ ದೃಷ್ಟಿಯಿಂದ ಇದನ್ನು ಮಾಡಿಲ್ಲ. ಅದು emotional ಆಗಿ outburst ಆಯಿತೇ ಹೊರತಾಗಿ ಬೇರೆ ಯಾವುದೂ ಕೂಡ ಅದರಲ್ಲಿ ಇಲ್ಲವೆಂದು ನಾನು ಸ್ಪಷ್ಟಪಡಿಸುತ್ತೇನೆ. ಅದಕ್ಕೆ ಮಾಧ್ಯಮದಲ್ಲೂ ನಮ್ಮ ಮೇಲೆ ಬಂತು. ನೀವು ನಮ್ಮ ಮೇಲೆ ಹೇಳಿದಿರಿ. ಎಲ್ಲಿಯವರೆಗೆ ಹೇಳಿದಿರಿ ಎಂದರೆ ಯಾವುದೊ ಒಂದು ಭೂ ಹಗರಣದ ಬಗ್ಗೆ ಕಾನೂನು ಬಂದಿತ್ತು, ಅದು ನಮ್ಮ ಮೇಲೆ ಬರುತ್ತದೆ ಎಂದು ಹೇಳಿ ಹೇಳಿದರು. ಅದು ಯಾವುದೂ ಅಜೆಂಡಾದಲ್ಲಿ ಇಲ್ಲ ಕಾನೂನಿನ ಬಗ್ಗೆ ನೀವು ಹೊರಗಡೆ ಹೋಗಿ ಮಾತನಾಡಿ, Governor ಹತ್ತಿರ ಹೋಗಿ ದೂರು ಕೊಟ್ಟು ಅದಕ್ಕೋಸ್ಕರ ಇಲ್ಲಿ ಅವರು ಈ ರೀತಿಯಾಗಿ mis-behave ಮಾಡಿದ್ದಾರೆ ಎಂದು ಹೇಳಿದರೆ

ನಾವೇನು ಹೇಳಬೇಕು ಅಧ್ಯಕ್ಷರೇ? ಅಂದರೆ ನಿಮಗೆ ಎಲ್ಲೆಲ್ಲಿ ಸಿಗುತ್ತದೋ hit and run. ಹೊಡೆಯುವುದು, ಮುಂದಕ್ಕೆ ಓಡಿಹೋಗುವುದು. ಪೊಲೀಸರ ಕೈಗೂ ಸಿಗುವ ಹಾಗೆ ಇಲ್ಲ ಕಳ್ಳರು. ಆ ರೀತಿಯಾಗಿ ಇವತ್ತು ಏನಾಗುತ್ತಿದೆ, ಮಾಡುವುದು, ಓಡಿ ಹೋಗುವುದು. ಹೇಳುವುದು, ಆಮೇಲೆ ವಿಷಾದವನ್ನು ವ್ಯಕ್ತಪಡಿಸುವುದು. ಮತ್ತೊಂದು ಹೇಳುವುದು, ಇದು ಇವತ್ತಿನ ದಿವಸ ನಡೆದಿದೆ. ಅದಕ್ಕೇ ನಾನು ಹೇಳುತ್ತೇನೆ, ಯಾರೇ ಮತನಾಡಿದರೂ ಕೂಡ ಜವಾಬ್ದಾರಿಯುತವಾಗಿ ಮಾತನಾಡಬೇಕು. ಒಂದು, ಆಮೇಲೆ, ಈ ಮನೆಯಾಗಲಿ, ಆ ಮನೆಯಾಗಲಿ, ಇವೆರಡೂ ಕೂಡ ಅಷ್ಟೇ ಮಹತ್ವದ್ದು. ಆ ಮೇಲ್ಮನೆ, ಕೆಳಮನೆಯ creation ಇದ್ದರೂ ಕೂಡ ನಾವು ಒಪ್ಪಿಕೊಂಡಿದ್ದೇವೆ. ಆ ಮನೆ ಇರಬೇಕು. ಆ ಮನೆ ನಡೆಯಬೇಕು. ಅವರ advise ಇರಬೇಕು ಎನ್ನತಕ್ಕಂಥದ್ದನ್ನೇ ನಾವು ಒಪ್ಪಿಕೊಂಡೇ ಆ ಮನೆಗೆ ಗೌರವ ಕೊಟ್ಟು ನಡೆಸುತ್ತಿದ್ದೇವೆ. ಈಗ ಆ ಮನೆಯೇ ಇಲ್ಲದ ಹಾಗೆ ನಾವೆಲ್ಲರೂ ಕೂಡ ಮಾಡಿದರೆ, ಅಥವಾ ನಮಗೆ majority ಇಲ್ಲ ಎಂದು ಹೇಳಿ ತೆಗೆದು ನಾವು ಅದನ್ನು ನಡೆಸಿಕೊಂಡು ಹೋದರೆ ಖಂಡಿತವಾಗಿಯೂ ಅದರಿಂದ ಯಾರಿಗೂ ಕೂಡ ಗೌರವ ಬರುವುದಿಲ್ಲ ಎನ್ನುವ ದೃಷ್ಟಿಯಿಂದ ನಾವು ಮಾಡಿದ್ದೇವೆ. ನಮ್ಮ ಮಾತು ಸರಿ ಇದೆ, ನಮ್ಮ ವಾದ ಸರಿ ಇದೆ ಎಂದು ಹೇಳಿ ನಾವು ಸತತವಾಗಿ ಅಸೆಂಬ್ಲಿ ಯಾವ ದಿವಸ ಪ್ರಾರಂಭವಾಗಿದೆ....

ಕೌನ್ಸಿಲ್ ಯಾವ ದಿವಸ ಪ್ರಾರಂಭ ಆಗಿದೆ? ಅಂದಿನಿಂದ ಇಂದಿನವರೆಗೆ ಹೇಳಿಕೊಂಡು ಬಂದಿದ್ದೇವೆ. ಆದರೆ ನಿಮ್ಮ ವಾದ ಸರಿ ಇಲ್ಲ ಎಂದು ಸರ್ಕಾರ ಹೇಳಿಕೊಂಡು ಬಂದಿದೆ. ನಿಮ್ಮ ವಾದ ಸರಿಯಿಲ್ಲ ಎಂದು ಹೇಳಿ ಅಧ್ಯಕ್ಷರನ್ನೂ convince ಮಾಡಿದರು. ನಿಮ್ಮ ವಾದ ಸರಿಯಿಲ್ಲ ಎಂದು ಹೇಳಿ ಮೇಲ್ಮನೆಯಲ್ಲಿ ಕೂಡ ಪ್ಯಾನಲ್‌ನಲ್ಲಿರತಕ್ಕಂಥವರು ಇಲ್ಲಿ ಬಂದು ನೀವು ಆ ರೀತಿಯಾಗಿ ಕೆಲಸ ಮಾಡಿದ್ದೀರಿ, ಕೊನೆಗೆ ನಮ್ಮ ವಾದ ಸರಿ ಇದೆ ಎಂದು ಹೇಳಿ ಸಂವಿಧಾನದ ರಕ್ಷಣೆ ಮಾಡತಕ್ಕ ಘನತೆವೆತ್ತ ರಾಜ್ಯಪಾಲರು ಇವತ್ತು ನಿಮಗೆ ಪತ್ರವನ್ನು ಬರೆದಿದ್ದಾರೆ. ಇದಕ್ಕೆ ಏನು ಹೇಳುತ್ತೀರಿ? ಈ ಪತ್ರದಲ್ಲಿ ಏನು ಬರೆದಿದ್ದಾರೆ? ಇದರಿಂದ ನಿಮಗೆ ಗೌರವ ಸಿಕ್ಕಿತಾ? ನಾವು ಹೇಳತಕ್ಕದ್ದು ಇವತ್ತು uphold ಆಯಿತು. ಹೊರತಾಗಿ, ನೀವು ಹೇಳಿ ಏನು defense ತೆಗೆದುಕೊಳ್ಳುತ್ತಿದ್ದೀರಿ? ಅದಕ್ಕೆ ಮಾನ್ಯತೆ ಇಲ್ಲ ಎನ್ನತಕ್ಕಂಥದ್ದು ಆಯಿತು. ಇದೊಂದು ಮತ್ತು ಕಾಂಗ್ರೆಸ್ ಪಕ್ಷದವರು ಇವರು ಸಮಯವನ್ನು ವ್ಯರ್ಥ ಮಾಡುತ್ತಿದ್ದಾರೆ. ಕ್ಷುಲ್ಲಕ ಕಾರಣಕ್ಕಾಗಿ ಇವರೆಲ್ಲರೂ ಕೂಡ ಈ ಕೆಲಸವನ್ನು ಮಾಡುತ್ತಿದ್ದಾರೆಂದು ಹೇಳಿ ನಮ್ಮ ಮೇಲೆ

ಗೂಬೆ ಕೂರಿಸಿ, ಆ ಮನೆಯ ಸದಸ್ಯರ ಮೇಲೆ ಗೂಬೆ ಕೂರಿಸಿ, ಕೆಳ ಮನೆಯ ಸದಸ್ಯರು ಸಹ ಅದೇ ರೀತಿ ಮಾಡುತ್ತಿದ್ದಾರೆ ಎಂದು ಗೂಬೆ ಕೂರಿಸಿ, ನಮಗೆ ಅವಮಾನ ಮಾಡತಕ್ಕದ್ದು ಅಷ್ಟೇ ಅಲ್ಲ., ಮಾಧ್ಯಮದ ಮೂಲಕ ನಮ್ಮನ್ನು ಹರಾಜು ಹಾಕತಕ್ಕಂಥ ಕೆಲಸ ಮಾಡಿದಿರಿ. ಇದಕ್ಕೆ ಯಾರು responsible?

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಸ್ವಲ್ಪ ಇರಿ. ನಮಗೂ ಮಾತನಾಡುವುದಕ್ಕೆ ಬರುತ್ತದೆ. ಇವತ್ತು ಗವರ್ನರ್ ಬರೆದಿದ್ದಾರೆ. ಈಗಾಗಲೇ ಪತ್ರವನ್ನು ಓದಿದ್ದಾರೆ. ನಾನು ಆ ಪೋರ್ಷನ್ ಓದುವುದಿಲ್ಲ. ಇವತ್ತು, 'The Constitutional implications...'

ಅಧ್ಯಕ್ಷರು:-ಈಗ... (ಗೊಂದಲ) Are you insinuating the press?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಆ ಪೋರ್ಷನ್ ಓದುವುದಿಲ್ಲ. Operative portion...

ಶ್ರೀ ಎನ್. ಧರ್ಮಸಿಂಗ್:- ರಾಜ್ಯಪಾಲರು ಬರೆದಿರುವ ಪತ್ರವನ್ನು ಓದಿ ಹೇಳಬೇಕು ಎಂದರೆ ನೀವು ನಗುತ್ತೀರಲ್ಲ.

ಅಧ್ಯಕ್ಷರು:- ಏನು ಅಳಬೇಕಾ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನೀವು ಅಳಬೇಡಿ.

ಅಧ್ಯಕ್ಷರು:- ನೀವು ಏನು ಹೇಳುವುದು? ಮಾನ್ಯ ವಿರೋಧ ಪಕ್ಷದ ನಾಯಕರು ಆ ರೀತಿ ಮಾತನಾಡಬಾರದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ತಮ್ಮ ಗಮನಕ್ಕೆ ತರುತ್ತೇನೆ. ತಾವು ಇದನ್ನು ಗಮನಿಸಿರಬಹುದು ಎಂದು ನನಗೆ ಗೊತ್ತಿದೆ ಅಥವಾ ಬರುವ ಮುಂಚೆ ಓದಿಕೊಂಡು ತಾವೇ ಹೇಳಬೇಕೆಂದು ಮಾಡಿರಬಹುದು. ಆದರೆ ನಿಮಗೂ ಕೂಡ ಬರೆದಿಲ್ಲ. ಸದಸ್ಯರಿಗೆ ಬರೆದಿದ್ದಾರೆ. 'My dear members, my greetings to you. You convey the message...'

ಅಧ್ಯಕ್ಷರು:- ಅದನ್ನು ನನಗೆ ಬರೆದಿಲ್ಲ. ನನಗೆ ಬರೆದಿದ್ದಾರೆಂದು ಹೇಳಿದಿರಿ. ನನಗೆ ಬರೆದಿಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ತಾವು ಸ್ವಲ್ಪ ಕೇಳಿ. Members ಎಂದು ಹೇಳಿ ಬರೆದು ಅವರು ಏನು ಹೇಳಿದ್ದಾರೆ ಎಂದರೆ. 'The Constitutional implication is that the Office of the Chairman can not remain vacant for any extraneous reason for long. It is mandatory for council to elect its chairman.

ಶ್ರೀ ಡಿ.ಹೆಚ್. ಶಂಕರಮೂರ್ತಿ:-ಆವಾಗ ಇದನ್ನು ಓದಲಿಲ್ಲವಾ? ತಾವು 20-30 ತಿಂಗಳು ಖಾಲಿ ಇಟ್ಟಿದ್ದಿರಲ್ಲ ಅವತ್ತು ಹೇಳಬೇಕಾಗಿತ್ತು.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಅದಕ್ಕೆ ಉತ್ತರ ಹೇಳುತ್ತೇನೆ.

ಶ್ರೀ ಡಿ.ಹೆಚ್.ಶಂಕರಮೂರ್ತಿ:- 20-30 ತಿಂಗಳು, 4 ಬಾರಿ 5 ಬಾರಿ ಖಾಲಿ ಇಟ್ಟಿದ್ದಿರಲ್ಲ, ಆವಾಗ ಏಕೆ ಇದನ್ನು ಓದಲಿಲ್ಲ?

ಶ್ರೀ ಮಲ್ಲಿಕಾರ್ಜುನ ಖರ್ಗೆ:- ನಾನು ಹೇಳುತ್ತೇನೆ. ಅದಕ್ಕೆ ಉತ್ತರ ನಾನೂ ಹೇಳಬೇಕು. ಮಾನ್ಯ ಎಂ.ಪಿ.ಪ್ರಕಾಶ್ ಅವರೂ ಹೇಳುತ್ತಾರೆ. ಎಲ್ಲರೂ ಹೇಳುತ್ತಾರೆ.

ಶ್ರೀ ಡಿ.ಹೆಚ್.ಶಂಕರಮೂರ್ತಿ:- Constitutional obligation ಬಹಳ ಜೋರಾಗಿ ಓದುತ್ತೀರಲ್ಲ, ಆವಾಗ ಓದುವುದಕ್ಕೆ ಬರಲಿಲ್ಲವಾ? ಆವಾಗ ನಿಮಗೆ ಓದುವುದಕ್ಕೆ ಆಗುತ್ತಿರಲಿಲ್ಲವಾ.

ಶ್ರೀ ಮಲ್ಲಿಕಾರ್ಜುನ ಖರ್ಗೆ:-ಈಗ 'Clause 7(6) of the rules as approved by the house defines and delimits as to how early or soon...' the wording is, '...as to how early or soon "Not later than immediate next session" election to the post of the Chairman is to be held.' ಅದಕ್ಕೆ ಸೆಷನ್ ಆಗುವ ಮುಂಚೆ ನಾವು ಕಾಗದ ಪತ್ರವನ್ನು ಮಾಡಿದ್ದು, ನಿಮಗೆ ಬರೆದಿದ್ದು ಎಲ್ಲವೂ ಇದೆ. ಆದರೆ ಇದೂ violate ಆಯಿತು.' I urge upon...' , Governor says to the Members of the House and Chairman. 'I urge upon the Hon'ble members of the House to choose the Chairman so as to fill the vacancy as per Constitution. I hope that the

machinery for election is set in motion for free, impartial and fair election to the Office of the Chairman in consonance with the Constitutional requirements.' ಇದು ಗವರ್ನರ್ ಪತ್ರವನ್ನು ಬರೆದಿದ್ದು. ಇದನ್ನು ನಾವು ಈ ಹಿಂದೆ ಕೋಟ್ ಮಾಡಿದ್ದೇವೆ. ಸಂವಿಧಾನವನ್ನು ಕೋಟ್ ಮಾಡಿದ್ದೇವೆ. ಅದೆಲ್ಲವನ್ನೂ ಕೂಡ ಒಂದು ಕಚಡಾ ಬುಟ್ಟಿಯಲ್ಲಿ ಬಿಸಾಕಿ ಬಿಟ್ಟಿರಿ. ಇವತ್ತು ಸರ್ಕಾರದ ಮುಖದ ಮೇಲೆ ಹೊಡೆದ ಹಾಗೆ ಗವರ್ನರ್ ಅವರು ಬರೆದಿದ್ದಾರೆ. ಇದಕ್ಕೆ ಏನಂತೀರಿ? ಇದು ನಮ್ಮ ತಪ್ಪಾ? ನಮ್ಮಿಂದ 15 ದಿವಸ ವೇಸ್ಟ್ ಆಯಿತಾ? ನಾವು ನ್ಯಾಯವಾಗಿ ಬೇಡಿಕೆಯನ್ನು ಇಟ್ಟಿದ್ದಕ್ಕೆ ನಮಗೆ ಇವತ್ತಿನ ದಿವಸ ಸಮಯ ಹಾಳು ಮಾಡುತ್ತೀರಿ, ನೀವು ಕೆಟ್ಟವರು, ನೀವು ಏಕೆ ಮಾಡಿದಿರಿ ಎನ್ನತಕ್ಕ ಮಾತನ್ನು ಪದೇ ಪದೇ ಎಲ್ಲರೂ ಹೇಳುತ್ತಿದ್ದಾರೆ. ಅದಕ್ಕೆ ನಾನು ಹೇಳುತ್ತೇನೆ. ಈ ಕಾರಣಕ್ಕಾಗಿ ಇದು ಎಲ್ಲವೂ ಕೂಡ ನಡೆಯಿತು. ಅದು ನಡೆದಿದ್ದು ಸರಿ ಎಂದು ನಾನು ಎಂದೂ ಕೂಡ ಒಪ್ಪಿಲ್ಲ. ಒಪ್ಪುವುದೂ ಇಲ್ಲ. ಆದರೆ ನೀವೇ ಕಾರಣಕರ್ತರು ಎನ್ನತಕ್ಕ ಮಾತನ್ನು ತಾವು ಹೇಳಲಿಲ್ಲ, ತಾವು ತಪ್ಪು ತಿಳಿಯಬಾರದು. ಸರ್ಕಾರವೇ ಕಾರಣಕರ್ತರು. ಅವರೇ ಇದನ್ನು ಉದ್ಭವ ಮಾಡಿದ್ದು. ಅವರೇ ಸೃಷ್ಟಿ ಮಾಡಿದ್ದು. ಅವರು ಒಂದು ವೇಳೆ ಕಾನೂನು ಪ್ರಕಾರ ಒಪ್ಪಿಕೊಂಡಿದ್ದರೆ, ಈ ಘಟನೆ ನಡೆಯುತ್ತಿರಲಿಲ್ಲ. ಸದನ ಸುಗಮವಾಗಿ ನಡೆಯುತ್ತಿತ್ತು. ಸದನದ ಸಮಯ ಕೂಡ ವ್ಯಯ ಆಗುತ್ತಿರಲಿಲ್ಲ. ಅದಕ್ಕಾಗಿ ಇವತ್ತಿನ ದಿವಸ ಈ ಎಲ್ಲ ಜವಾಬ್ದಾರಿಯನ್ನು ಅವರು ಹೊತ್ತುಕೊಳ್ಳಬೇಕು. The responsibility lies on the Government. ಸದನವನ್ನು ಸುಲಲಿತವಾಗಿ ನಡೆಸಬೇಕು ಎಂದರೆ ಅವರು ತಮ್ಮ ಕರ್ತವ್ಯವನ್ನು ನಿಭಾಯಿಸಬೇಕಾಗಿತ್ತು. ಅದನ್ನು ಬಿಟ್ಟು ನೀವ್ಯಾಕೆ ಹಾಗೆ ಮಾಡಿದಿರಿ? ನಾವು ಮರ್ಜಿ ಬಂದಾಗ ಎಲೆಕ್ಷನ್ ಮಾಡುತ್ತೇವೆ. ಮೆಜಾರಿಟಿ ಬಂದಾಗ ಎಲೆಕ್ಷನ್ ಮಾಡುತ್ತೇವೆ, ಎಂದು ಹೇಳಿದವರು ಯಾರು ಸ್ವಾಮಿ? ಮೆಜಾರಿಟಿ ಬಂದಾಗ ನೀವು ಎಲೆಕ್ಷನ್ ಮಾಡಿ ಎಂದು ಗವರ್ನರ್ ಅವರು ನಿಮಗೆ ಹೇಳುತ್ತಾರಾ?

ಶ್ರೀ ಬಿ.ಎಸ್. ಹೊರಟ್ಟಿ:-ನೀವೇ ಮಾಡಿದ್ದು.

ಶ್ರೀ ಮಲ್ಲಿಕಾರ್ಜುನ ಖರ್ಗೆ:-ನಾನು ಮಾಡಿದ್ದನ್ನು ಹೇಳುತ್ತೇನೆ.ಈಗ ಮಾನ್ಯ ಶಂಕರ್ ಮೂರ್ತಿಯವರು ಏನು ಹೇಳಿದರು? ನೀವ್ಯಾಕೆ ಹಿಂದೆ ಮಾಡಲಿಲ್ಲ ಎಂದು ಹೇಳಿದರು. ನಮಗೆ ಆಗ ಮೆಜಾರಿಟಿ ಇತ್ತು. ನಮಗೆ ಆವಾಗ ಜನತಾ ಪಾರ್ಟಿಯವರು ಸಪೋರ್ಟ್ ಮಾಡಿದರು. ಅದಕ್ಕಾಗಿ ನಮ್ಮ ಸದಸ್ಯ ಉಪಾಧ್ಯಕ್ಷ ಇದ್ದರೂ ಕೂಡ ಅಧ್ಯಕ್ಷರಾಗಿ ಹೋದರು.

ಶ್ರೀ ಡಿ.ಹೆಚ್.ಶಂಕರಮೂರ್ತಿ:-ನೀವು ರಾಜ್ಯಾಂಗ ಓದುತ್ತಿರುವವರು.

ಒಬ್ಬ ಮಾನ್ಯ ಸದಸ್ಯರು:-ಮಾನ್ಯ ಸಚಿವರೇ, ತಾವು ಸ್ವಲ್ಪ ತಾಳ್ಮೆ ತಂದುಕೊಳ್ಳಿ.

ಶ್ರೀ ಡಿ.ಹೆಚ್.ಶಂಕರ ಮೂರ್ತಿ:- ತಾವು ರಾಜ್ಯಾಂಗ ಓದುವವರು ಅದನ್ನು ಓದಿ. ಆಗ ಮೆಜಾರಿಟಿ ಇತ್ತೋ ಇಲ್ಲವೋ ಅದಲ್ಲ ಪ್ರಶ್ನೆ. ರಾಜ್ಯಾಂಗದಲ್ಲಿ ಮೆಜಾರಿಟಿ ಪ್ರಶ್ನೆ ಬಂದಿಲ್ಲ. ಮೆಜಾರಿಟಿ ಪ್ರಶ್ನೆ ಅಲ್ಲ.

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ:- ನೀವು ಪ್ರಜಾ ಪ್ರಭುತ್ವದ ವಿರುದ್ಧ ಮಾಡುತ್ತಿದ್ದೀರಿ. ಏನು ಹೇಳುತ್ತಿದ್ದಾರೆಂದು ಕೇಳಿ.

ಶ್ರೀ ಡಿ.ಹೆಚ್.ಶಂಕರ ಮೂರ್ತಿ:-ನಿಮಗೆ ಖುಷಿ ಬಂದಾಗ, ಮೆಜಾರಿಟಿ ಬಂದಾಗ ಏನು ಬೇಕಾದರೂ ಮಾಡಬಹುದಾ? ರಾಜ್ಯಾಂಗ ಏನು ಹೇಳುತ್ತದೆ? ಅದನ್ನು ಮಾಡಿದಿರಾ? ಅದನ್ನು ಹೇಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅಲ್ಲೂ ಕೂಡ ಮನ್ನಣೆ ಕೊಟ್ಟು ಅವರಿಗೆ ಮುಂದುವರೆಸುತ್ತೇವೆ. ಶ್ರೀ ಬಿ.ಆರ್.ಪಾಟೀಲ್ ಅವರನ್ನು ಮುಂದುವರೆಸುತ್ತೇವೆ. ಡೇವಿಡ್ ಸಿಮೆಯೋನ್ ಅವರನ್ನು ಮುಂದುವರೆಸುತ್ತೇವೆ. ಅದೇ ರೀತಿಯಾಗಿ ಶ್ರೀ ಸುದರ್ಶನ್ ಅವರನ್ನೂ ಮುಂದುವರೆಸುತ್ತೇವೆ. ಇವೆಲ್ಲವೂ ಕೂಡ ಎರಡೂ ಪಕ್ಷದವರು ಸೇರಿ ಇಡೀ ಸದನದ ಸದಸ್ಯರು ಸೇರಿ ಅದನ್ನು ಮಾಡಿದ್ದೇ ಹೊರತಾಗಿ.

ಶ್ರೀ ಡಿ.ಹೆಚ್.ಶಂಕರ ಮೂರ್ತಿ:- ನಾನು ಆ ಸದನದಲ್ಲೇ ಇದ್ದವನು. ಇಡೀ ಸದನ ಅಲ್ಲ. ಯಾವ ಕಾನೂನು ಪ್ರಕಾರ ಮಾಡಿದಿರಿ? ಎಲ್ಲಾ ಕಾನೂನು ಬಾಹಿರ ಕೆಲಸ ಮಾಡುವುದು. ಇಲ್ಲಿ ಬಂದು ಬಹಳ ಪುರಾಣ ಹೇಳುವುದು. ಮಾಡಿದ್ದೆಲ್ಲಾ ಅನಾಚಾರ, ಇಲ್ಲಿ ಬಂದು ಪುರಾಣ ಹೇಳುವುದು. ಇದುವರೆಗೂ ಆ

ತರಹ ಮಾಡಿದ್ದಾರೆ. ಈ ಸದನದಲ್ಲಿ ಪಕ್ಷದ ನಾಯಕರಾಗಿದ್ದರು. ಯಾವ ಕಾನೂನಿನ ಪ್ರಕಾರ ಮಾಡಿದರು?

(ಗೊಂದಲ)

ಶ್ರೀ ಕೆ.ಶ್ರೀನಿವಾಸ ಗೌಡ:- ಇಂಥವರ advice ಕೇಳಿ ಮಾನ್ಯ ಎಂ.ಪಿ.ಪ್ರಕಾಶ್ ಅಂಥವರೂ ಸಹ ಮಾಡುತ್ತಾರೆ.

ಶ್ರೀ ಡಿ.ಹೆಚ್.ಶಂಕರ ಮೂರ್ತಿ:- ಮಾಡುವುದೆಲ್ಲಾ ಅನಾಚಾರ. ಹೇಳುವುದು ಪುರಾಣ.

(ಗೊಂದಲ)

ಶ್ರೀ ಮಲ್ಲಿಕಾರ್ಜುನ ಖರ್ಗೆ:- ಅದಕ್ಕೆ ಅವರು ಅದನ್ನು ಪ್ಲೀ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಇವತ್ತು ಅನ್ಯಾಯ ಆಗಿದೆ. ಗವರ್ನರ್ ಅವರು ಸರಿಪಡಿಸತಕ್ಕಂಥ ವ್ಯವಸ್ಥೆ ಮಾಡಿದ್ದಾರೆ. ಅದಕ್ಕಾಗಿ ನಮ್ಮ ಧರಣಿವನ್ನು ವಾಪಸ್ ತೆಗೆದುಕೊಂಡು ಇಲ್ಲಿ ಕುಳಿತಿದ್ದೇವೆ. ಈ ತಾವು ಬಂದಿದ್ದೀರಿ. ಮುಂದಿನ ಕಾರ್ಯಕ್ರಮವನ್ನು ನಡೆಸಿರಿ. ಅದಕ್ಕೆ ಹೆಚ್ಚಿಗೆ ವಿಷಯವನ್ನು ಈ ಬೆಳೆಸತಕ್ಕ ಅವಶ್ಯಕತೆ ಇಲ್ಲ. ಅಲ್ಲಿ ಬಂದಿದ್ದು ತಾವು ಹೇಳಿ. ಕೌನ್ಸಿಲ್ ನಲ್ಲಿ ಅವರಿಗೂ ಕೂಡ ಇವತ್ತಿನ ದಿವಸ ಪುನ: re-convey ಮಾಡಿ ಏನು ಇಲ್ಲಿ ಪಾಸ್ ಆಗಿದೆ, ಅಲ್ಲಿ ಪಾಸ್ ಆಗತಕ್ಕದ್ದು ಕೂಡ ಆಗಬೇಕು ಎಂದು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:-ಈಗ ಮಾನ್ಯ ಪ್ರಕಾಶ್ ಅವರು ಉತ್ತರ ಹೇಳುತ್ತಾರೆ.ನೀವು ಮಾತನಾಡಿ ಆಮೇಲೆ ಅವಕಾಶ ಕೊಡುತ್ತೇನೆ.

ಶ್ರೀ ಸಿದ್ಧರಾಮಯ್ಯ:-ನಾನೂ ಮಾತನಾಡುತ್ತೇನೆ. ಸರ್ಕಾರದವರು ಒಟ್ಟಿಗೆ ಉತ್ತರ ಕೊಡಲಿ.

ಅಧ್ಯಕ್ಷರು:- ಅವರೂ ಮಾತನಾಡುತ್ತಾರೆ.

ಶ್ರೀ ಬಿ.ಎಸ್.ಹೊರಟ್ಟಿ:- ಮಾನ್ಯ ಸಿದ್ಧರಾಮಯ್ಯನವರೇ. ನೀವು ಆಗ ನಮ್ಮ ಕಡೆ ಇದ್ದಿರಿ.

ಶ್ರೀ ಸಿದ್ಧರಾಮಯ್ಯ:-ಆಯಿತು, ನಿಮ್ಮ ಕಡೆಗೇ ಇದ್ದೆ. ಯಾವ ಯಾವ ಕಡೆ ನೀವು ಇದ್ದಿರಿ ಎಂದು ಎಲ್ಲಾ ಗೊತ್ತಿದೆ.

ಅಧ್ಯಕ್ಷರು:- ಆಮೇಲೆ ಅವಕಾಶ ಕೊಡುತ್ತೇನೆ. ಅವರೂ ಮಾತನಾಡುವುದು ಇದೆ.

ಶ್ರೀ ಸಿದ್ಧರಾಮಯ್ಯ:- ನಾವು ಹೇಳುವ ಮುಂಚೆಯೇ ಸರ್ಕಾರ ಉತ್ತರ ಕೊಟ್ಟರೆ ಆಮೇಲೆ ನಾವೇನು ಹೇಳುವುದು?

ಅಧ್ಯಕ್ಷರು:- ನಿಮ್ಮ ನಾಯಕರುಗಳು ಎಲ್ಲರೂ ಹೇಳಿದ್ದಾರೆ. You are defending your action ಅಷ್ಟೇ. ಇನ್ನೇನಿದೆ ಹೇಳುವುದಕ್ಕೆ?

ಶ್ರೀ ಸಿದ್ಧರಾಮಯ್ಯ:- ನಾವು ಹೇಳುವುದನ್ನು ದಯವಿಟ್ಟು ಕೇಳಿ ಸ್ವಲ್ಪ.

ಅಧ್ಯಕ್ಷರು:-ನಿಮ್ಮ ಮಾತನ್ನೂ ಕೇಳುತ್ತೇನೆ, ಇವರು ಹೇಳಲಿ.

ಶ್ರೀ ಸಿದ್ಧರಾಮಯ್ಯ: ದಯವಿಟ್ಟು ಮಾನ್ಯ ಸಂಸದೀಯ ಸಚಿವರು ಕುಳಿತುಕೊಳ್ಳಬೇಕು. ಮಾನ್ಯ ಶಂಕರಮೂರ್ತಿಯವರೆ, ನಿಮಗೂ ಅವಕಾಶ ಸಿಗುತ್ತದೆ. ಏನೇನು ಹೇಳಬೇಕೋ, ಎಲ್ಲವನ್ನೂ ಮಾತನಾಡಿ. ನಾವು ಕೇಳುವುದಕ್ಕೆ ತಯಾರಾಗಿದ್ದೇವೆ. ದಯವಿಟ್ಟು ಕುಳಿತುಕೊಳ್ಳಿ. ಈಗ ನೀವು ನಮ್ಮ ಮಾತುಗಳನ್ನು ಸ್ವಲ್ಪ ಕೇಳಿ.

ಅಧ್ಯಕ್ಷರು: ಮಾನ್ಯ ಸಿದ್ಧರಾಮಯ್ಯನವರೆ, ಈಗ ಎಲ್ಲವನ್ನೂ ಹೇಳಿದ್ದಾರೆ.

ಶ್ರೀ ಸಿದ್ಧರಾಮಯ್ಯ: ನಾನು ಏಕೆ ಮಾತನಾಡಬೇಕಾಗಿ ಬಂದಿದೆ ಎಂದರೆ, ಇದು ಬಹಳ ಪ್ರಾಮುಖ್ಯವಾದಂತಹ ವಿಚಾರ. ನಾವು ಇಲ್ಲಿ ಧರಣಿ ಮಾಡಿದ್ದರಿಂದ ರಾಜ್ಯದ ತುಂಬಾ ಏನು message ಹೋಗಿಬಿಟ್ಟಿದೆಯೆಂದರೆ, ನಾವೇ ಕಾಲ ವ್ಯಯ ಮಾಡಿಬಿಟ್ಟೆವು,

(ಗೊಂದಲ)

ಶ್ರೀ ಸಿದ್ಧರಾಮಯ್ಯ: "ಹೌದು" ಎನ್ನುವುದು ಈಗ ಗೊತ್ತಾಗುತ್ತದೆ. ನಾವೋ, ನೀವೋ ಎನ್ನುವುದನ್ನು ಈಗ ನಾನು ಹೇಳುತ್ತೇನೆ. ಆಗ ಗೊತ್ತಾಗುತ್ತದೆ. ಮಾನ್ಯ ಅಧ್ಯಕ್ಷರೆ, ನಾವೇ ಕಾಲ ವ್ಯಯ ಮಾಡಿದೆವು, Governor's address ಮೇಲೆ, ರಾಜ್ಯಪಾಲರಿಗೆ ಸಲ್ಲಿಸುವ ವಂದನಾ ನಿರ್ಣಯದ ಮೇಲೆ ಮಾತನಾಡುವುದಕ್ಕೆ ಹೋಗಲಿಲ್ಲ, ಬೇರೆ ವಿಚಾರಗಳ ಬಗ್ಗೆ, ಜನರ ಅನೇಕ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಲಿಲ್ಲ, ಇಲ್ಲಿ ರಾಜಕೀಯ ಮಾಡಿದರು ಎನ್ನತಕ್ಕಂಥ ರೀತಿಯಲ್ಲಿ message ಹೊರಟು ಹೋಗಿಬಿಟ್ಟಿದೆ. ಅದಕ್ಕೋಸ್ಕರ, ಕಾಂಗ್ರೆಸ್‌ನವರು ಗೂಂಡಾಗಿರಿ ಮಾಡಿದರು,

(ಗೊಂದಲ)

(ಈ ಹಂತದಲ್ಲಿ ಸದಸ್ಯರಾದ ಶ್ರೀ ಎಂ.ಪಿ.ವೆಂಕಟೇಶ್‌ರವರು ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ.)

ಅಧ್ಯಕ್ಷರು: ಅವರು ಮಾತನಾಡಲಿ ಬಿಡಿ.

ಶ್ರೀ ಸಿದ್ಧರಾಮಯ್ಯ: ಅಮೇಲೆ ಮಾತನಾಡಿ, ಈಗ ಕೂತ್ಕೊಳ್ಳಿ. ಮಾನ್ಯ ಅಧ್ಯಕ್ಷರು ನನ್ನನ್ನು ಕರೆದಿದ್ದಾರೆ, ನಾನು ಮಾತನಾಡುತ್ತಿದ್ದೇನೆ. ನಿಮ್ಮನ್ನು ಕರೆದಾಗ ನೀವು ಮಾತನಾಡಿ.

ಶ್ರೀ ಎಂ.ಪಿ.ವೆಂಕಟೇಶ್:.. ..ಗೂಂಡಾಗಿರಿ ಮಾಡಿಬಿಟ್ಟರೆ.. ..

ಅಧ್ಯಕ್ಷರು: ಮಾನ್ಯ ವೆಂಕಟೇಶ್‌ರವರೆ, ನಿಮಗೂ ಅವಕಾಶ ಮಾಡಿಕೊಡುತ್ತೇನೆ, ಮಾತನಾಡಿ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ದಯಮಾಡಿ ಮಾತನಾಡುವುದಕ್ಕೆ ಅವಕಾಶ ಮಾಡಿಕೊಡಬೇಕು. ಹೀಗೆ ಅವರು ಎದ್ದು ನಿಂತುಕೊಂಡು ಮಧ್ಯೆ ಮಾತನಾಡುತ್ತಿದ್ದರೆ, ಹೇಗೆ ಮಾತನಾಡುವುದು?

(ಸದಸ್ಯರಾದ ಶ್ರೀ ಎಂ.ಪಿ.ವೆಂಕಟೇಶ್‌ರವರು ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ)

ಅಧ್ಯಕ್ಷರು: ಮಾನ್ಯ ವೆಂಕಟೇಶ್‌ರವರೆ, ಅವರು ಮಾತನಾಡಲಿ ಬಿಡಿ.

(ಈ ಹಂತದಲ್ಲೂ ಶ್ರೀ ಎಂ.ಪಿ.ವೆಂಕಟೇಶ್‌ರವರು ಮಾತನಾಡುತ್ತಿದ್ದುದು ಸ್ಪಷ್ಟವಾಗಿ ಕೇಳಿಸುತ್ತಿರಲಿಲ್ಲ)

ಅಧ್ಯಕ್ಷರು: ನೀವು ಆ ಕಡೆ ನೋಡಬೇಡಿ. ಈ ಕಡೆ ನೋಡಿ ಮಾತನಾಡಿ.

ಶ್ರೀ ಸಿದ್ಧರಾಮಯ್ಯ: ಅಧ್ಯಕ್ಷರೆ, ಈಗಾಗಲೇ ವಿರೋಧ ಪಕ್ಷದ ನಾಯಕರು ಮತ್ತು ಮಾನ್ಯ ಖರ್ಗೆಯವರು ರಾಜ್ಯಪಾಲರಿಂದ ಬಂದಿರುವ ಸಂದೇಶವನ್ನು ಓದಿದ್ದಾರೆ. ನಿಮ್ಮ ಗಮನಕ್ಕೂ ತಂದಿದ್ದಾರೆ. ಅದನ್ನು ನಿಮಗೆ ಬರೆದಿಲ್ಲ. ಮೇಲ್ಮನೆಗೆ ಬರೆದಿದ್ದಾರೆ. ನಾವೆಲ್ಲರೂ ಕೂಡ ಸಂಸದೀಯ ಪ್ರಜಾಪ್ರಭುತ್ವದ ವ್ಯವಸ್ಥೆಯಲ್ಲಿ ಕೆಲಸ ಮಾಡತಕ್ಕಂಥವರು. ಈಗ, Article 182 of the Constitutionನಲ್ಲಿ ಬಹಳ ಸ್ಪಷ್ಟವಾಗಿ ಇದೆಯೆಂಬುದನ್ನು Governor ಕೂಡ ನಮೂದು ಮಾಡಿ ಈ messageನಲ್ಲಿ ಹೇಳಿದ್ದಾರೆ. ಅಲ್ಲಿ Chairman ಆಗಲಿ, Vice Chairman ಆಗಲಿ, ಯಾವುದೇ ಸ್ಥಾನ ಖಾಲಿ ಬಿದ್ದಾಗ, ಮುಂದಿನ session ಪ್ರಾರಂಭವಾಗುವಾಗ ಮಾಡಬೇಕು ಎನ್ನತಕ್ಕಂಥಾದ್ದು ಇದೆ. ಅದಕ್ಕೆ ಮಾನ್ಯ ಶಂಕರಮೂರ್ತಿಯವರು ಏನು ವಾದ ಮಾಡುತ್ತಾರೆಂದರೆ,

ನೀವೇಕೆ ಮಾಡಲಿಲ್ಲ, ಎನ್ನತಕ್ಕಂಥ ಮಾತನ್ನು ಹೇಳುತ್ತಾರೆ. ಅವತ್ತು ಇವರಿಗೆ majority ಇದ್ದಿದ್ದರೆ, ಇವರು ಸುಮ್ಮನಿರುತ್ತಿದ್ದರೆ, ಎಂದು ಅವರು ಕೇಳುತ್ತಾರೆ. ಸುಮ್ಮನಿರುತ್ತಿರಲಿಲ್ಲ. ಆವತ್ತು ಕಾಂಗ್ರೆಸ್ ಮತ್ತು ಜೆ.ಡಿ.(ಎಸ್) ಹೊಂದಾಣಿಕೆಯಿಂದಲೇ ಇವರಿಗೆ majority ಇಲ್ಲ, ನಾವಿಬ್ಬರೂ ಸೇರಿದಾಗ majority ಇದೆಯೆಂದು ಅವತ್ತು ಇದ್ದಂಥ Vice Chairmanಗಳು ಮುಂದುವರೆದದ್ದು. ಆದ್ದರಿಂದ, "ಇಲ್ಲಿ ರಾಜ್ಯಾಂಗದ ಹತ್ಯೆಯಾಗಿದೆ, ಕೊಲೆಯಾಗಿದೆ, ರಾಜ್ಯಾಂಗವನ್ನು ಪಾಲನೆ ಮಾಡಿಲ್ಲ" ಎನ್ನತಕ್ಕಂಥ ಪ್ರಶ್ನೆ ಉದ್ಭವವಾಗುವುದಿಲ್ಲ. ಒಂದು ವೇಳೆ ಹಾಗಿ ಇದ್ದಿದ್ದರೆ, ಬಿಜೆಪಿಯವರು, ಮಾನ್ಯ ಶಂಕರಮೂರ್ತಿಯವರು ಒಂದು ಕ್ಷಣವೂ ಬಿಡುತ್ತಿರಲಿಲ್ಲ.

ಶ್ರೀ ಡಿ.ಹೆಚ್.ಶಂಕರಮೂರ್ತಿ (ಉನ್ನತ ಶಿಕ್ಷಣ ಸಚಿವರು): Wrong information ಕೊಡಬಾರದು. ನಿಮ್ಮ ವಾದದಲ್ಲಿ wrong information ಇರಬಾರದು. ತಾವು ಏನು ಹೇಳುತ್ತಿದ್ದೀರೆಂದರೆ, ಅವತ್ತು ನಮ್ಮ ಪಕ್ಷಕ್ಕೆ ಅಥವಾ ನಮ್ಮ ಗುಂಪಿಗೆ majority ಇದ್ದಿದ್ದರೆ, ನಾವು ಒಂದು ಕ್ಷಣವೂ ಬಿಡುತ್ತಿರಲಿಲ್ಲವೆಂಬ ಮಾತನ್ನು ತಾವು ಹೇಳುತ್ತಿದ್ದೀರಿ. ದಯಮಾಡಿ ಗಮನಿಸಿ. ತಾವು ಯಾವಾಗಲೂ ಆ ಮನೆಯ ಸದಸ್ಯರಾಗಿರಲಿಲ್ಲ. ಸದಸ್ಯರಾಗಿದ್ದರೆ ಗೊತ್ತಾಗಿರುತ್ತಿತ್ತು. ಕಳೆದ 19 ವರ್ಷಗಳಿಂದ ನಾನು ಆ ಮನೆಯ ಸದಸ್ಯನಾಗಿದ್ದೇನೆ. ಅವತ್ತು ಅಲ್ಲಿ ಏನೇನು ನಡೆಯಿತು? ಅವತ್ತು ಇದ್ದಂಥ ಆಡಳಿತ ಪಕ್ಷ....ತಾವು ಎಂದು ಹೇಳುವುದಿಲ್ಲ. ಆಡಳಿತ ಪಕ್ಷವು ಚುನಾವಣೆಯನ್ನು ಏಕೆ ಮಾಡಲಿಲ್ಲವೆಂದರೆ, ಆಡಳಿತ ಪಕ್ಷಕ್ಕೆ majority ಇರಲಿಲ್ಲ. ಚುನಾವಣೆ ಘೋಷಣೆಯಾದರೆ, ಅದು ವಿರೋಧ ಪಕ್ಷಕ್ಕೆ ಹೋಗುತ್ತಿತ್ತು. ಆಗ ಬಿಜೆಪಿಗೆ majority ಇರಲಿಲ್ಲ. ಬಿಜೆಪಿ ಸೇರಿ ಇದ್ದಂಥ ವಿರೋಧ ಪಕ್ಷಕ್ಕೆ majority ಇತ್ತು. ಆ ಕಾರಣಕ್ಕಾಗಿ ಅವತ್ತು ಆಡಳಿತ ಪಕ್ಷದವರು ಚುನಾವಣೆ ನಡೆಸಲಿಲ್ಲವೇ ಹೊರತು, ನಮಗೆ majority ಇದ್ದರೂ ಚುನಾವಣೆ ನಡೆಸಲಿಲ್ಲವೆಂದು ಹೇಳುವುದು, ಇದು ತಪ್ಪು ಮಾಹಿತಿ. ಮಾನ್ಯ ಸಿದ್ಧರಾಮಯ್ಯನವರೆ, ತಪ್ಪು ಮಾಹಿತಿಯಿಂದ ವಾದ ಮಾಡಬೇಡಿ. ಇದು ನಿಮಗೆ ಶೋಭೆ ತರುವುದಿಲ್ಲ. ತಪ್ಪು ಮಾಹಿತಿಯಿಂದ ವಾದ ಮಾಡಬೇಡಿ.

ಒಬ್ಬ ಮಾನ್ಯ ಸದಸ್ಯರು: ಆಗ protest ಮಾಡಿದಿರಾ? Protest ಮಾಡಬೇಕಾಗಿತ್ತು.

ಶ್ರೀ ಸಿದ್ಧರಾಮಯ್ಯ: ನಿಜ. ಅವತ್ತು ಬಿಜೆಪಿ ಮತ್ತು ಕಾಂಗ್ರೆಸ್.. ..

ಶ್ರೀ ಡಿ.ಹೆಚ್.ಶಂಕರಮೂರ್ತಿ: ಒಂದು ನಿಮಿಷ. ನಾನು ನಿಮಗೆ ಮಾಹಿತಿ ಕೊಡುತ್ತೇನೆ. ಬಿಜೆಪಿ ಮತ್ತು ಕಾಂಗ್ರೆಸ್ ಸೇರಿ ಅವತ್ತು ಅಲ್ಲಿ majority ಇತ್ತು.

ಶ್ರೀ ಸಿದ್ಧರಾಮಯ್ಯ: ಅದನ್ನೇ ಹೇಳಬೇಕೆಂದಿದ್ದೆ. I will come to that.

ಶ್ರೀ ಡಿ.ಹೆಚ್.ಶಂಕರಮೂರ್ತಿ: ಒಂದು ಹಂತದಲ್ಲಿ ಅವತ್ತು ಆಡಳಿತ ನಡೆಸುತ್ತಿದ್ದುದು ದಳ. ಬಿಜೆಪಿ ಮತ್ತು ಕಾಂಗ್ರೆಸ್ ಸೇರಿ oppositionನಲ್ಲಿದ್ದ ನಮಗೆ majority ಇತ್ತು. Opposition Leader ಆಗಿ ಮಾನ್ಯ ಹೆಚ್.ಕೆ.ಪಾಟೀಲರು ಇದ್ದರು. ನಾನೂ ಅವತ್ತು opposition benchನಲ್ಲೇ ಕುಳಿತುಕೊಳ್ಳುತ್ತಿದ್ದೆ. ನಾವೆಲ್ಲರೂ ಒಟ್ಟಾಗಿಯೇ oppositionನಲ್ಲಿದ್ದವರು. ಆಗ ದಳ ಅಧಿಕಾರದಲ್ಲಿದ್ದರೂ, ದಳಕ್ಕೆ majority ಇರಲಿಲ್ಲ. ಒಂದು ಹಂತದಲ್ಲಿ ಕಾಂಗ್ರೆಸ್‌ನ ಸರ್ಕಾರ ಬಂತು. ಅಲ್ಲಿ ಎರಡೆರಡು ವರ್ಷಗಳಿಗೆ ಬದಲಾವಣೆಯಾಗುತ್ತದೆ. Council, it is a continuous body. Composition of the Council ಬದಲಾವಣೆಯಾಗುತ್ತದೆ. ಹಾಗೆ ಬದಲಾವಣೆಯಾಗುವ ಸಂದರ್ಭದಲ್ಲಿ, ಒಂದು ಹಂತದಲ್ಲಿ ಇಲ್ಲಿ, ನಮ್ಮ ರಾಜ್ಯದಲ್ಲಿ ಮೊದಲಿಗೆ ಕಾಂಗ್ರೆಸ್ ಸರ್ಕಾರ ಬಂತು. ಒಂದು ಹಂತದಲ್ಲಿ ಕಾಂಗ್ರೆಸ್‌ಗೆ ಮೇಲ್ಮನೆಯಲ್ಲಿ ಬಹುಮತವಿರಲಿಲ್ಲ. ಆಗ ದಳ ಮತ್ತು ಬಿಜೆಪಿ ಸೇರಿದರೆ majority ಬರುತ್ತಿತ್ತು. ನಾವು oppositionನಲ್ಲೇ ಕೂರುತ್ತಿದ್ದೆವು. ಒಂದು ಹಂತದಲ್ಲಿ ನಮ್ಮ Opposition ನಾಯಕರಾಗಿ, ನಾಣಯ್ಯನವರು ಇದ್ದರು. ಒಂದು ಹಂತದಲ್ಲಿ ಮಾನ್ಯ ಹೆಚ್.ಕೆ.ಪಾಟೀಲರು ಇದ್ದರು. ಆನಂತರ, ಕೆ.ಹಚ್.ಶ್ರೀನಿವಾಸ್ ಇದ್ದರು. ಆಮೇಲೆ ನಾನಾದೆ. ಹಾಗಾಗಿ, ಆಡಳಿತ ಪಕ್ಷಕ್ಕೆ ಬಹಳಷ್ಟು ಕಾಲ ವಿಧಾನ ಪರಿಷತ್ತಿನಲ್ಲಿ majority ಇರುವುದಿಲ್ಲ. ಈ ತರಹದ ವ್ಯವಸ್ಥೆ, ನಮ್ಮ Karnataka Legislature history ಹಾಗೇ ಇರುವುದು. Continuous ಆಗಿ ಹಾಗೇ ಬಂದಿದೆ. ನಾನು ಇಲ್ಲಿ ಹೇಳುತ್ತಿರುವುದು majority, minority ಅಲ್ಲ. ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಹಿರಿಯ ಸದಸ್ಯರಾದ ಖರ್ಗೆಯವರು ನಮಗೆ Constitution ಓದಿ ಹೇಳಿದರು. ತಾವು ಅವತ್ತು ಓದಲಿಲ್ಲವೇ? ಅವತ್ತು ಏಕೆ ಅರ್ಥವಾಗಲಿಲ್ಲ? ಇವತ್ತು ಮಾತ್ರ ಅರ್ಥವಾಗುತ್ತಿದೆ....ಇದು majority, minority ಪ್ರಶ್ನೆಯೇ ಅಲ್ಲ ಸ್ವಾಮಿ. ಅವತ್ತು immediately after ಏಕೆ ಮಾಡಲಿಲ್ಲ? ತಾವು ಇದಕ್ಕೆ ಉತ್ತರ ಹೇಳಿ.

ಶ್ರೀ ಸಿದ್ಧರಾಮಯ್ಯ: ಆಯಿತು, ನೀವು ಈಗ ಹೇಳಿದಿರಲ್ಲ. ನಾನು ಏನು ಹೇಳುತ್ತೇನೆಂದರೆ, ಅವರು ಈಗ ಹೇಳಿದ್ದೆಲ್ಲವೂ ನಿಜ. ಅವತ್ತೂ Constitutionನ

182 provision ಇತ್ತು. ಆದರೆ, ಪರಿಸ್ಥಿತಿ ಏನಿತ್ತು ಎಂದರೆ, ideological ಆಗಿ ಬಿಜೆಪಿಯವರಿಗೆ majority ಇರಲಿಲ್ಲ. ನಾವು ಇವರಿಗೆ ಬೆಂಬಲ ಕೊಡುವಂತಿರಲಿಲ್ಲ. ಕಾಂಗ್ರೆಸ್‌ನವರೂ ಕೊಡುವಂತಿರಲಿಲ್ಲ, ಜೆ.ಡಿ(ಎಸ್)ನವರೂ ಕೊಡುವಂತಿರಲಿಲ್ಲ. ಇವರನ್ನು ಹೊರಗಡೆ ಇರಿಸಬೇಕೆಂಬುದೇ ನಮ್ಮ ಉದ್ದೇಶವಾಗಿತ್ತು. ಆದುದರಿಂದ, ideological ಆಗಿ ನಿಮ್ಮನ್ನು ಹೊರಗಿಡಬೇಕೆಂಬ ಕಾರಣಕ್ಕೋಸ್ಕರವಾಗಿ, ನಿಮಗೆ majority ಇಲ್ಲದೇ ಇದ್ದುದರಿಂದ, ದಳ ಅಧಿಕಾರದಲ್ಲಿದ್ದಾಗ ಕಾಂಗ್ರೆಸ್‌ನವರು ನಮಗೆ support ಮಾಡಿದರು. ಕಾಂಗ್ರೆಸ್‌ನವರು ಅಧಿಕಾರದಲ್ಲಿದ್ದಾಗ ನಾವು support ಮಾಡಿದೆವು. ಹಾಗಾಗಿ, ಅಲ್ಲಿ ಮುಂದುವರೆಯಿತು. ಆದುದರಿಂದ, ಇವರು ಹಾಗೇನಾದರೂ ಕಾಂಗ್ರೆಸ್‌ನವರು ಇವರಿಗೆ support ಮಾಡಿದ್ದರೆ, ಇವರು ಒಂದು ನಿಮಿಷವೂ ಬಿಡುತ್ತಿರಲಿಲ್ಲ ಅಥವಾ ದಳದವರು ಇವರಿಗೆ support ಮಾಡಿದ್ದರೆ, ಒಂದು ನಿಮಿಷವೂ ಬಿಡುತ್ತಿರಲಿಲ್ಲ. ಅವತ್ತು ideological ಆಗಿ ಇವರು ಬರಬಾರದು, ಇವರನ್ನು ದೂರವಿಡಬೇಕೆಂಬ ಕಾರಣಕ್ಕೋಸ್ಕರವಾಗಿ ನಾವಿಬ್ಬರೂ ಮಾತನಾಡಿಕೊಂಡು ಹಾಗೆ ಮಾಡಿದ್ದು ನಿಜ. ಆದ್ದರಿಂದ, there ends the matter. ಅವರ argumentಗೆ, ಮಾನ್ಯ ಶಂಕರಮೂರ್ತಿಯವರೆ, ನಿಮಗೆ ಈಗ ಉತ್ತರ ಸಿಕ್ಕಿತಲ್ಲ? ಆದ್ದರಿಂದ, ಅವತ್ತಿನ ಪರಿಸ್ಥಿತಿ ಬೇರೆ. ಇವತ್ತಿನ ಪರಿಸ್ಥಿತಿ ಏನು? Upper Houseನಲ್ಲಿ ನಾವು 40 ಜನರಿದ್ದೇವೆ. Single party. Congress alone has 40 members. ಆದರೆ, ಅವರು ಎಲ್ಲರೂ ಸೇರಿಕೊಂಡು ಇರುವುದು 28. ಈಗ ಅವರು ಒಟ್ಟಿಗಿದ್ದಾರೆ, all right. ಇಬ್ಬರೂ ಸೇರಿಕೊಂಡು 28 ಇದ್ದಾರೆ. 28 ಜನರು ಇರುವವರು 40 ಜನರು ಇರುವವರನ್ನು suspend ಮಾಡಿ ಆಚೆಗಿಟ್ಟು House ನಡೆಸಿದರೆ, ಇದನ್ನು Parliamentary democracy ಎಂದು ಕರೆಯಬಹುದೇ? ಇದನ್ನು Democratic function ಎಂದು ಕರೆಯಬಹುದೇ? ನಾವು Governor ಹತ್ತಿರಕ್ಕೆ ಹೋದೆವು. ಅವರ ಹತ್ತಿರ ಹೋಗಿ ರಾಜ್ಯಾಂಗದ ಪರಿಸ್ಥಿತಿ ಏನಿದೆ, ರಾಜ್ಯಾಂಗದಲ್ಲಿ ಏನಿದೆ, ನಾವು ನಮ್ಮ ರೂಲ್ಸ್‌ಗಳಲ್ಲಿ ಏನು ಮಾಡಿಕೊಂಡಿದ್ದೇವೆ, ಎಲ್ಲವನ್ನೂ ಅವರಿಗೆ explain ಮಾಡಿದೆವು. He was convinced. ಇವತ್ತು convince ಆದ ಮೇಲೆಯೇ ರಾಜ್ಯಾಂಗದಲ್ಲಿರುವ ವಿಚಾರವನ್ನು ಸ್ಪಷ್ಟಪಡಿಸಿ Chairmanಗೆ ಅವರು ಪತ್ರ ಬರೆದಿದ್ದಾರೆ. ಸರ್ಕಾರಕ್ಕೂ ಕೂಡ ಅದು ಗೊತ್ತಾಗಿದೆ, ತಿಳಿಸಿದ್ದಾರೆ. ಈಗ ಸರ್ಕಾರ ಏನು ತಪ್ಪು ಮಾಡಿತು ಎನ್ನತಕ್ಕಂಥಾದ್ದು Governor ರವರ ಪತ್ರದಿಂದ it has been vindicated.

ನೀವೇನು argument ಮಾಡಿದಿರಲ್ಲ, "ಇಲ್ಲ, ಇಲ್ಲ, ಕಾನೂನಿನಲ್ಲಿ ಆ ತರಹ ಇಲ್ಲ, panel listನಲ್ಲಿರುವವರನ್ನೇ ನಾವು Chairman ಮಾಡುವುದು, ನಮಗೆ ಸರಿಯಾಗಿದೆ, ರಾಜ್ಯಾಂಗಬದ್ಧವಾಗಿದೆ, ನಾವು ಮಾಡಿದ್ದೇ ಸರಿ" ಎಂದು ಹೇಳುತ್ತಾ, ಇವರು ಏನು ವಾದ ಮಾಡಿದ್ದರು, ಆ ವಾದ, it is unconstitutional. It is not legal. It is not within the bounds of rules framed by this House or by the Upper House ಎಂದು letter is written by the Governor. It has been vindicated. ನಮ್ಮ stand ಇಲ್ಲಿ ಏನು, Governor ಹತ್ತಿರ ಹೋಗಿ ಅಲ್ಲೂ ಆಗದೆ ಇಲ್ಲಿ ನಾವೇನು ಮಾಡಿದೆವೋ ಅದು ನಾವು ಸರಿಯಾದ ದಾರಿಯಲ್ಲಿದ್ದೇವೆ, ಕಾನೂನಿನ ಚೌಕಟ್ಟಿನಲ್ಲಿದ್ದೇವೆ ಎಂಬುದು ಸಾಬೀತಾಗಿದೆ. ಆದ್ದರಿಂದ ನಾವು ಸದನವನ್ನು ಉದ್ದೇಶಪೂರ್ವಕವಾಗಿ ತಡೆಹಿಡಿದೆವು, ಇಲ್ಲಿ ಕಲಾಪಗಳಿಗೆ ಅಡ್ಡಿಪಡಿಸಿದೆವು, ಚರ್ಚೆ ಮಾಡುವುದಕ್ಕೆ ಬಿಡಲಿಲ್ಲ ಎನ್ನತಕ್ಕದ್ದು ಸರಿಯಾದುದಲ್ಲ. ಸತ್ಯಕ್ಕೆ ದೂರವಾದದ್ದು. ನಾವೆಲ್ಲರೂ Assemblyಗೆ ಅನೇಕ ವಿಚಾರಗಳನ್ನು ಚರ್ಚೆ ಮಾಡಬೇಕು ಎಂಬ ಉದ್ದೇಶದಿಂದಲೇ ಬಂದಿದ್ದು. ಸದನವನ್ನು ತಡೆ ಹಿಡಿಯಬೇಕು ಎಂಬ ಉದ್ದೇಶ ನಮಗೇನು ಇಲ್ಲ. ಅದನ್ನು ಹಾಳು ಮಾಡಬೇಕು ಎಂಬ ಉದ್ದೇಶ ನಮಗಿಲ್ಲ. ನಾವು ಪ್ರಜಾಪ್ರಭುತ್ವದಲ್ಲಿ ನಂಬಿಕೆಯನ್ನಿಟ್ಟುಕೊಂಡಿರುವವರು, ಯಾವುದೇ ಸರ್ಕಾರವಿದ್ದಾಗ ಅವರಿಗೆ ಜವಾಬ್ದಾರಿ ಕೂಡ ಇದೆ. ಕಾನೂನು ರೀತಿಯಾಗಿ ನಡೆದುಕೊಳ್ಳಬೇಕಾದ ಜವಾಬ್ದಾರಿ ಸಹ ಇದೆ. ಆ ರೀತಿ ನಡೆದುಕೊಳ್ಳದೇ ಹೋದಾಗ ವಿರೋಧ ಪಕ್ಷದವರೇನು ಮಾಡಬೇಕು? ಸುಮ್ಮನೆ ಕುಳಿತುಕೊಳ್ಳಬೇಕೆ? ಅಲ್ಲಿಯವರೆಗೆ ಹೋಗಿ mikeನ್ನು ಹಿಡಿದು ಮಾಡಿದ್ದು ಅತಿಯಾಯಿತು, ತಪ್ಪಾಯಿತು ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಆ ರೀತಿ ಮಾಡಿದು ಅತಿಯಾಯಿತು ಎಂದು ಅನ್ನಿಸುತ್ತದೆ. ಆದರೆ, ಆ ರೀತಿ ಮಾಡಲು ಪ್ರಚೋದನೆ ಮಾಡಿದವರು ಯಾರು? ಅದಕ್ಕೆ ವಿಷಾದ ವ್ಯಕ್ತಮಾಡುತ್ತೇನೆ.

ಶ್ರೀ ಡಿ.ಟಿ.ಜಯಕುಮಾರ್: ಅಡಿಕೆಯಲ್ಲಿ ಹೋದ ಮಾನ, ಆನೆ ಕೊಟ್ಟರೂ ಬರುವುದಿಲ್ಲವೆಂದು ಗಾದೆ ಇದೆ. ಇಲ್ಲಿ ತಾವು ಎಷ್ಟೇ ವಾದ ಮಾಡಿದರೂ ಜನಗಳಿಗೆ message ಹೋಗಿಯಾಗಿದೆ. ತಾವು ಎಷ್ಟೇ defend ಮಾಡಿಕೊಂಡರೂ ಅಡಿಕೆಗೆ ಹೋದ ಮಾನ ಆನೆ ಕೊಟ್ಟರೂ ಬಾರದು ಎಂಬ ರೀತಿಯಾಗುತ್ತದೆ.

ಶ್ರೀ ಸಿದ್ಧರಾಮಯ್ಯ: ನಾವು ಇಲ್ಲಿ ಶಾಂತವಾಗಿ ಪ್ರತಿಭಟನೆ ಮಾಡುವ ಕೆಲಸ ಮಾಡುತ್ತಿದ್ದೆವು.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಪ್ರತಿಭಟನೆ ಮಾಡಬಹುದೆಂದು ಏನುಬೇಕಾದರೂ ಅಪರಾಧ ಮಾಡಬಹುದೇ?

ಶ್ರೀ ಸಿದ್ಧರಾಮಯ್ಯ: ಪ್ರಜಾಪ್ರಭುತ್ವದಲ್ಲಿ ಕಾನೂನಿನ ಪ್ರಕಾರ ನ್ಯಾಯ ಸಿಕ್ಕದೇ ಹೋದಾಗ ಪ್ರತಿಭಟನೆ ಮಾಡಬೇಕಾಗುತ್ತದೆ. ಶಾಂತಿಯುತವಾಗಿ ಮಾಡಬೇಕಾಗುತ್ತದೆ. ನಾವು ಶಾಂತಿಯುತವಾಗಿಯೇ ಮಾಡಿದ್ದೇವೆ. ನಾಲ್ಕೈದು ದಿನಗಳು ನಾವು Houseನಲ್ಲಿ wellನಲ್ಲಿ ಕುಳಿತುಕೊಂಡು ಶಾಂತಿಯುತವಾಗಿಯೇ ಮಾಡಿದ್ದೇವೆ. ಯಾವಾಗ ಅದು ಸ್ವಲ್ಪ ಅತಿರೇಕಕ್ಕೆ ಹೋಯಿತು ಎಂದರೆ, ನಿನ್ನೆ ಎಲ್ಲಾ Billಗಳನ್ನು pass ಮಾಡಿಕೊಳ್ಳಲು ಶುರುಮಾಡಿಬಿಟ್ಟಿರಿ, ಇದ್ದ ಎಲ್ಲಾ Billಗಳನ್ನು ಒಂದೇ ಸಾರಿ ಹಾಕಿಬಿಟ್ಟು pass ಮಾಡಿಕೊಳ್ಳುವುದನ್ನು ಮಾಡಿದಿರಿ. ಆಗ ನಮ್ಮ ಸದಸ್ಯರಿಗೆ ಪ್ರಚೋದನೆಯಾಯಿತು. ಆ ಕಾರಣದಿಂದ ನಿನ್ನೆ ಏನು ನಡಿಯಿತು ಎಂಬ ಬಗ್ಗೆ ವಿಷಾದವನ್ನು ವ್ಯಕ್ತಪಡಿಸುತ್ತಾ, ಇವತ್ತು ಸರ್ಕಾರ ತಪ್ಪಿತಸ್ಥ ಸ್ಥಾನದಲ್ಲಿದೆ. ಇವತ್ತು ಸರ್ಕಾರಕ್ಕೆ ಏನಾದರೂ ನಷ್ಟವಾಗಿದ್ದರೆ ಆ ಎಲ್ಲಾ ನಷ್ಟಕ್ಕೂ ಸರ್ಕಾರವೇ ಹೊಣೆಯೇ ಹೊರತು ನಾವ್ಯಾರು ಕೂಡ ಹೊಣೆಯಲ್ಲ. ಇದರಿಂದ ಇವತ್ತು ಸರ್ಕಾರಕ್ಕೆ ಲಕ್ಷಾಂತರ ರೂಪಾಯಿಗಳು ನಷ್ಟವಾಗಿದ್ದರೆ ಇದು ಸರ್ಕಾರ ಮಾಡಿದ ತಪ್ಪಿನಿಂದಾಗಿದೆಯೇ ಹೊರತು ನಮ್ಮ ತಪ್ಪಿನಿಂದ ಆಗಿಲ್ಲ ಎನ್ನತಕ್ಕದನ್ನು ಸ್ಪಷ್ಟಪಡಿಸಲು ಇಚ್ಛಿಸುತ್ತೇನೆ. ಇವರು ನಿನ್ನೆ ದಿವಸ ಏನು ಮಾಡಿದ್ದಾರೆಂದರೆ, ಅಲ್ಲಿಂದ letter ಬಂದ ಮೇಲೆ ಮೇಲ್ಮನೆಯನ್ನು adjourned ಮಾಡಿಬಿಟ್ಟಿದ್ದಾರೆ. ಆದ್ದರಿಂದ ನಾನೇನು ಹೇಳುತ್ತೇನೆಂದರೆ, ಇವತ್ತು ಇಲ್ಲಿ Bill pass ಆದಮೇಲೆ ಅಲ್ಲಿ pass ಆಗಬೇಕು. ಆದ್ದರಿಂದ ಕೂಡಲೆ ಮೇಲ್ಮನೆಯನ್ನು ಕರೆಯಬೇಕೆಂದು ಒತ್ತಾಯ ಮಾಡುತ್ತೇನೆ. ಮೇಲ್ಮನೆಯನ್ನು re convene ಮಾಡಿ electionನ್ನು ಮಾಡಬೇಕು. ಇದು Governor ರವರು ಕಳುಹಿಸಿರುವ ಪತ್ರದ ಮುಖ್ಯ ಉದ್ದೇಶ. ಅದನ್ನು ದಯವಿಟ್ಟು ಮಾಡಬೇಕು. ನಿನ್ನೆ ಮುಖ್ಯಮಂತ್ರಿಯವರೂ ಮತ್ತು ಬೇರೆಯವರೂ, ನಾವು ಯಾವುದೋ Bill ಬರುತ್ತಿದೆ, ಆ Billನ್ನು ಚರ್ಚೆ ಮಾಡಬಾರದು ಎಂಬ ಕಾರಣಕ್ಕಾಗಿ ಹೊರಟುಹೋದರು ಎಂದು ಹೇಳಿದ್ದಾರೆ. ಆದರೆ, ನಿನ್ನೆಯ Agenda ದಲ್ಲಿ ಆ Bill ಇರಲೇ ಇಲ್ಲ. ಅವರು ಯಾವ Billನ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ ಅದು ನಿನ್ನೆಯ Agenda ದಲ್ಲಿ ಇರಲೇ ಇಲ್ಲ. ಅದು ಇವತ್ತಿನ Agenda ದಲ್ಲಿ ಇದೆ. It was not listed. ನಿನ್ನೆ Governor ನಿಂದ ಏನು clarification

ಕೇಳಿದ್ದರು ಆ messageನ್ನು ಮಾತ್ರ ಅಲ್ಲಿ ಓದಿದ್ದು. ಏಕೆಂದರೆ ತಪ್ಪು ಮಾಹಿತಿ ಹೋಗಬಾರದು. Billಗಳ ಬಗ್ಗೆ ಚರ್ಚೆ ಮಾಡಲು ನಾವು ತಯಾರಾಗಿದ್ದೇವೆ. Billಗಳ ಬಗ್ಗೆ ಚರ್ಚೆ ಮಾಡಿ. ಆ ಮನೆಯನ್ನೂ ಕರೆಯಿರಿ. ಅಲ್ಲಿ Chairman election ಮಾಡಿ. ಇಲ್ಲಿರತಕ್ಕ Billಗಳು ಅಲ್ಲೂ ಚರ್ಚೆಯಾಗಲಿ. ಪ್ರಜಾಪ್ರಭುತ್ವದ ರೀತಿಯಲ್ಲಿ ನಡೆದುಕೊಳ್ಳಬೇಕಾದ ಜವಾಬ್ದಾರಿ ನಮಗೂ ಇದೆ ಸರ್ಕಾರಕ್ಕೂ ಇದೆ. ಆ ರೀತಿ ಆಗಿಲ್ಲ ಎಂಬ ಕಾರಣಕ್ಕಾಗಿ ನಿನ್ನೆ ಆ ರೀತಿಯ ಘಟನೆಯಾಗಬೇಕಾಯಿತು. ಪ್ರತಿಭಟನೆ ಮಾಡಬೇಕಾದಾಗ ಎಲ್ಲೋ ಒಂದು ಕಡೆ ಕಾನೂನನ್ನು ಮುರಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಬಹುದು. ಅಂಥ ಪರಿಸ್ಥಿತಿ ಸರ್ಕಾರದಿಂದ ನಿರ್ಮಾಣವಾಗಿತ್ತು. ಆ ಕಾರಣದಿಂದ ಅದು ಆಗಿದೆ. ಆದರೆ, ನಿನ್ನೆ ಏನು ಘಟನೆಯಾಯಿತು ಅದಕ್ಕೆ ವಿಷಾದವನ್ನು ವ್ಯಕ್ತಮಾಡುತ್ತೇನೆ. ಇವತ್ತು Government is exposed.

ಅಧ್ಯಕ್ಷರು: Defend ಆಗುವ ರೀತಿಯೂ ಮಾತನಾಡುತ್ತೀರಿ ಮತ್ತೊಂದು ರೀತಿಯೂ ಮಾತನಾಡುತ್ತೀರಲ್ಲಾ!

ಶ್ರೀ ಸಿದ್ಧರಾಮಯ್ಯ: Government ತಪ್ಪು ಮಾಡಿದೆ ಎಂಬುದು ಬಹಳ ಸ್ಪಷ್ಟವಾಗಿ ಗೊತ್ತಾಗಿದೆ. ಅವರೇ ಇದಕ್ಕೆಲ್ಲಾ ಜವಾಬ್ದಾರರು ಎಂಬುದನ್ನು ತಮಗೆ ಬಿನ್ನವಿಸಲು ಇಚ್ಚೆಪಡುತ್ತಿದ್ದೇನೆ.

ಅಧ್ಯಕ್ಷರು: ನಾನು ಒಂದನ್ನು ಹೇಳಲು ಇಷ್ಟಪಡುತ್ತೇನೆ. ಏನೇ ಇದ್ದರೂ ಸಭೆಯ ಕಲಾಪಗಳನ್ನು ನಡೆಯಲು ಅಡ್ಡಿ ಮಾಡುವುದು ಸರಿಯಲ್ಲ. ಅದು ಯಾರೇ ಆಗಿರಲಿ ಸರಿಯಲ್ಲ. ಶಾಂತಿಯುತವಾಗಿ ಪ್ರತಿಭಟನೆ ಮಾಡಬಹುದು.

ಶ್ರೀ ಸಿದ್ಧರಾಮಯ್ಯ: ಹಾಗಾದರೆ ನಾವೆಲ್ಲಿ ಹೋಗಬೇಕಾಗಿತ್ತು? ಮೇಲ್ಮನೆಯಲ್ಲಿ 40 ಜನರನ್ನು suspend ಮಾಡಿದ್ದಾಗ ನಾವು ಎಲ್ಲಿ ಹೋಗಬೇಕು? Upper House is created by this House. ನಾವೆಲ್ಲಿ ಪ್ರಸ್ತಾಪ ಮಾಡಬೇಕು? ನಿಮ್ಮ ಮುಂದೆ ಹೇಳಬೇಕಾಗುತ್ತದೆ.

ಅಧ್ಯಕ್ಷರು: ಕಲಾಪ ನಡೆಯುವುದು ಹೇಗೆ? ಅದು ಸರಿಯಲ್ಲ. ರಾಜ್ಯಪಾಲರ ಪತ್ರ has vindicated our stand ಅಂದಿರಿ. I agree that But ನೀವು wellಗೆ ಬಂದಿರಿ, it is alright But ಸದನ ನಡೆಯದ ರೀತಿಯಲ್ಲಿ ಅಡ್ಡಿ ಮಾಡುವುದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಸರಿಯಲ್ಲ.

ಶ್ರೀ ಎಂ.ಪಿ. ಪ್ರಕಾಶ್:ಮಾನ್ಯ ಅಧ್ಯಕ್ಷರೆ, I am on a point of order. ಒಬ್ಬ ಅಧ್ಯಕ್ಷರು ಆನುಷಂಗಿಕವಾಗಿರತಕ್ಕ ವಿಷಯವನ್ನು ಪ್ರಸ್ತಾಪ ಮಾಡಿದಾಗ

ಹತ್ತು ಇಪ್ಪತ್ತು ಮಂದಿ ಏಕ ಕಾಲದಲ್ಲಿ ನಿಂತು ತಾವು ಮಾತನಾಡತಕ್ಕದ್ದು ಭೂಷಣವೇ?

(ಗೊಂದಲ)

I am on a point of order. ಈ ರೀತಿಯಾಗಿ ನಾವು ಕಲಾಪಗಳನ್ನು ನಡೆಸಿಲ್ಲದಂಥದ್ದಕ್ಕೆ ವಿಷಾದವನ್ನು ವ್ಯಕ್ತಪಡಿಸುತ್ತೇವೆಂದು ಹೇಳಿ ಎಲ್ಲರೂ ಹತ್ತು, ಇಪ್ಪತ್ತು ಮಂದಿ ಇಲ್ಲಿ ನಿಂತುಕೊಂಡು, ಕುಳಿತುಕೊಂಡು.. ನೀವು ಸಮರ್ಥರಿದ್ದೀರಿ, ನಿಮ್ಮ ವಿಷಯವನ್ನು ಹೇಳಿಕೊಳ್ಳಲು ಸಾಧ್ಯತೆ ಇದೆ. ಹಾಗಿದ್ದಾಗ ಬೇರೆ ಆ ಇಪ್ಪತ್ತು ಮಂದಿಯ ಸಹಾಯ ಬೇಕಾಗಿರತಕ್ಕ ಅಗತ್ಯ ಇಲ್ಲ. ಆ ಕಾರಣಕ್ಕಾಗಿಯೇ ಸಭಾನಡವಳಿಕೆಯ ಪ್ರಕಾರ..

ಶ್ರೀ ಎನ್. ಧರ್ಮ್‌ಸಿಂಗ್: ಮಾನ್ಯ ಪ್ರಕಾಶರವರೇ, ಮಾನ್ಯ ಖರ್ಗೆಯವರು ಮಾತನಾಡುವಾಗ ಎಷ್ಟು ಜನ ಎದ್ದು ನಿಂತು ಮಾತನಾಡಿದರು?

ಶ್ರೀ ಬಿ.ಶಿವರಾಂ: ಮಾನ್ಯ ವೆಂಕಟೇಶ್‌ರವರೊಬ್ಬರೇ ಮಾತನಾಡುವಾಗ ನೀವೇನು ಹೇಳಿದಿರಿ? ಎಷ್ಟೊ ಜನ ಕೂಗಾಡುವಾಗ ನೀವೇನು ಹೇಳಲೇ ಇಲ್ಲವಲ್ಲ? ಎರಡೂ ಕಡೆಗೂ ಗಲಾಟೆ ಆದಾಗ ಈ ಪ್ರಶ್ನೆ ಉದ್ಬವವಾಗುವುದಿಲ್ಲ. ಒಂದು ಕಡೆಗೆ ಮಾತ್ರ ಮಾಡಿದಾಗ ಇದು ಬರುತ್ತದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ಈ ರೀತಿ ನಡೆದುಕೊಂಡರೆ ಅದು ಹೇಗೆ ಸಾಧ್ಯವಾಗುತ್ತದೆ? ಇದನ್ನೇನು ಅಖಾಡ ಮಾಡಿಕೊಂಡಿರಾ?

ಶ್ರೀ ಕೆ. ಶ್ರೀನಿವಾಸಗೌಡ: I am on point of order.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಈ ರೀತಿ ಅಲ್ಲೂ ನಡೆದಿದೆ. ವಿರೋಧ ಪಕ್ಷದ ನಾಯಕರು ಮಾತನಾಡುವಾಗ Minister ರವರು ಪದೇ ಪದೇ ಎದ್ದು ಮಾತನಾಡುತ್ತಿರಲಿಲ್ಲವೇ? Members ಎದ್ದು ಮಾತನಾಡಿಬಿಟ್ಟರೆ ಅದು ದೊಡ್ಡ ಪ್ರಮಾಣವಾಗುವುದಿಲ್ಲ.

ಶ್ರೀ ಕೆ. ಶ್ರೀನಿವಾಸ ಗೌಡ: I am on a point of order. ನಮ್ಮ ಕಾನೂನು ಮಂತ್ರಿಗಳು ಇವತ್ತು ಮಾನ್ಯ ಸಿದ್ಧರಾಮಯ್ಯನವರು ಹೇಳುವಾಗ, ವಿರೋಧ ಪಕ್ಷದ ನಾಯಕರು ಮಾತನಾಡುವಾಗ treasury benchನ ಎಲ್ಲರೂ ಎದ್ದುನಿಂತಿದ್ದರು, ಆಗ ಇವರೇಕೆ ಸುಮ್ಮನೆ ಇದ್ದರು? ಆಗ ಇವರಿಗೆ ಮನವರಿಕೆಯಾಗಲಿಲ್ಲವೇ?

ಅಧ್ಯಕ್ಷರು: ಅದು ಯಾವ point of order ಆಗುತ್ತದೆ!

ಶ್ರೀ ಕೆ. ಶ್ರೀನಿವಾಸ ಗೌಡ: ಅವರಿಗೆ ಏನಿದ್ದರೂ Billಗಳನ್ನು pass ಮಾಡಿಕೊಳ್ಳಬೇಕು. ಈ ಪ್ರಜಾತಂತ್ರದಲ್ಲಿ ನಮಗೆ ಪ್ರತಿಭಟನೆ ಮಾಡಲು ಹಕ್ಕಿದೆ. ಇದೇನು dictatorship ಸರ್ಕಾರವೇ? ಇವರೇನು dictatorship ನಡೆಸುತ್ತಿದ್ದಾರೆಯೇ? ಪ್ರಜಾಪ್ರಭುತ್ವದಲ್ಲಿ ಇದೆಲ್ಲಾ ಆಗುತ್ತದೆ. ನಾವು ಮಾತನಾಡಿದನ್ನು ದೊಡ್ಡದ್ದು ಮಾಡುತ್ತಾರೆ, ಅವರು ಮಾತನಾಡಿದ್ದಕ್ಕೆ ಸುಮ್ಮನೆ ಇದ್ದರೆ ಹೇಗೆ?

ಶ್ರೀ ಡಿ.ಹೆಚ್. ಶಂಕರಮೂರ್ತಿ(ಉನ್ನತ ಶಿಕ್ಷಣ ಸಚಿವರು):– ಮಾನ್ಯ ಅಧ್ಯಕ್ಷರೆ, ಬಹಳ ಗಂಭೀರವಾದ ಹಲವು ಸಂಗತಿಗಳನ್ನು ಮಾನ್ಯ ಹಿರಿಯ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಾನು ಮೇಲ್ಮನೆಯಲ್ಲಿ ನಡೆದಂಥ ಕಲಾಪಗಳನ್ನು ಇಲ್ಲಿ ಚರ್ಚೆ ಮಾಡಬಾರದು ಎಂದು ನಂಬಿರತಕ್ಕವನು. ಅದರ ಬಗ್ಗೆ ಗೌರವವಿರತಕ್ಕವನು. ಆದರೆ, ಇಲ್ಲಿ ಹೇಳಲೇ ಬೇಕಾದ ಸಮಯ ಬಂದಿರುವುದರಿಂದ ಹೇಳುತ್ತಿದ್ದೇನೆ. ನಮ್ಮ ವಿಧಾನ ಪರಿಷತ್ತಿನಲ್ಲಿ ಇದ್ದ ಪ್ರಶ್ನೆ ಸಭಾಪತಿಯ ಚುನಾವಣೆಯಲ್ಲ. ಅಲ್ಲಿ ಪ್ರಶ್ನೆ ಏನಿತ್ತು ಎಂದರೆ, ಸಭಾಪತಿಯವರ ಸ್ಥಾನ ಖಾಲಿಯಾಗಿದೆ, ಉಪಸಭಾಪತಿಯವರಿಗೆ ಆರೋಗ್ಯ ಸರಿಯಾಗಿರದ ಕಾರಣ ಬರಲು ಆಗಲಿಲ್ಲ, ಆ ರೀತಿಯ ಪರಿಸ್ಥಿತಿ ನಿರ್ಮಾಣವಾದಾಗ ಸಭೆಯನ್ನು ಯಾರು ನಡೆಸಬೇಕು ಎಂಬ ಪ್ರಶ್ನೆ ಉದ್ಭವವಾಯಿತು. ಆಗ ರಾಜ್ಯ ಸಭೆಗೆ ನಮ್ಮ secretariatನವರು ಈ ರೀತಿ ಪರಿಸ್ಥಿತಿ ನಿರ್ಮಾಣವಾಗಿದೆ ನಾವೇನು ಮಾಡಬೇಕೆಂದು ಪತ್ರವನ್ನು ಬರೆದರು. ಅವರು ಪತ್ರ ಬರೆದು ರಾಜ್ಯಾಂಗದ 184[2]ನೇ ವಿಧಿಯನ್ನು ನೀವು ನೋಡಿ ಎಂದು ಹೇಳಿದರು. ಸಂವಿಧಾನದ 184[2]ನೇ ವಿಧಿ ಪ್ರಕಾರ ಸಭಾಪತಿಗಳು ಮತ್ತು ಉಪ ಸಭಾಪತಿಗಳು ಇಬ್ಬರೂ ಹಾಜರಿರದೇ ಹೋದರೆ ಆಗ, ನಿಮ್ಮ ಕಾನೂನು ಪುಸ್ತಕ ಏನು ಹೇಳುತ್ತದೋ, ನಿಮ್ಮ ಸಭಾ ನಡವಳಿಕೆ ಪುಸ್ತಕ ಏನು ಹೇಳುತ್ತದೋ, ಅದರಂತೆ ಮಾಡಿ ಎಂದು ಹೇಳಿದರು. ಸಭಾ ನಡವಳಿಕೆ ಪುಸ್ತಕದ ಕಾನೂನು 9ರಲ್ಲಿ ಸ್ಪಷ್ಟವಾಗಿದೆ. ಸಭಾಪತಿಗಳು ನಾಲ್ಕು ಜನಕ್ಕೆ ಮೀರದ ಹಾಗೆ Panel of Vice Chairmen ಅನ್ನು announce ಮಾಡುತ್ತಾರೆ. ಈ ನಾಲ್ಕು ಜನರಲ್ಲಿ ಯಾರಾದರೂ ಸರಿಯೇ, ಸಭಾಪತಿ ಅಥವಾ ಉಪ ಸಭಾಪತಿ ಇಬ್ಬರೂ ಇಲ್ಲದಾಗ, ಸಭೆಯನ್ನು ಅವರೂ ನಡೆಸುತ್ತಾರೆ ಎಂಬುದು ಅದರಲ್ಲಿ ಸ್ಪಷ್ಟವಾಗಿದೆ. ಹೊಸ panel ಅನ್ನು announce ಮಾಡುವವರೆಗೆ, ಹಳೆಯ panelನಲ್ಲಿ ಇರುವವರೇ continue ಆಗುತ್ತಾರೆ ಎಂಬುದೂ ಇದರಲ್ಲಿ ಸ್ಪಷ್ಟವಾಗಿದೆ. ಸೆಪ್ಟೆಂಬರ್ 19ನೇ ತಾರೀಖು ಬೆಳಗಾಂ ಅಧಿವೇಶನದಲ್ಲಿ, ಆಗಲೂ ಸಭಾಪತಿ

ಸ್ಥಾನ ಖಾಲಿ ಇತ್ತು, ಉಪ ಸಭಾಪತಿಗಳೇ ಎರಡೂ ಸ್ಥಾನವನ್ನು ನಿರ್ವಹಣೆ ಮಾಡುತ್ತಿದ್ದರು, ಸಭಾಪತಿಗಳ ಸ್ಥಾನದಲ್ಲಿ ಕುಳಿತು ನಿರ್ವಹಣೆ ಮಾಡುತ್ತಿದ್ದಂತಹ ಅವರು, ನಾಲ್ಕು ಜನರನ್ನು Panel Members ಎಂದು nominate ಮಾಡಿದರು. ಶ್ರೀಯುತರಾದ ಮಾನ್ಯ ತಿಪ್ಪಣ್ಣನವರು, ಮಾನ್ಯ ಹಿಂಡಸಗೇರಿಯವರು, ಮಾನ್ಯ ಮುಖ್ಯಮಂತ್ರಿ ಚಂದ್ರುರವರು ಮತ್ತು ಮಾನ್ಯ ಪ್ರಭಾಕರ ಕೋರೆಯವರು, ಈ ನಾಲ್ಕು ಜನರನ್ನು ಅವರು nominate ಮಾಡಿದರು. ಬೆಳಗಾಂ ಅಧಿವೇಶನದಲ್ಲಿ ಈ ನಾಲ್ವರಲ್ಲಿ ಯಾರಾದರೂ ಒಬ್ಬರು, ಒಂದಲ್ಲಾ ಒಂದು ಬಾರಿ ನಮ್ಮ ವಿಧಾನ ಪರಿಷತ್ತಿನ ಅಧಿವೇಶನದಲ್ಲಿ preside ಮಾಡಿದ್ದರು. ಅದಾದ ನಂತರ ಹೊಸ panel ಅನ್ನು announce ಮಾಡಲಾಗಿಲ್ಲ. ಹಳೆಯ panelನಲ್ಲಿ ಯಾರಿದ್ದರೋ, ಆ ನಾಲ್ಕು ಜನರಲ್ಲಿ ಮೊದಲ ಹೆಸರು ಮಾನ್ಯ ತಿಪ್ಪಣ್ಣನವರದು ಇತ್ತು. ಆದ್ದರಿಂದ ಮಾನ್ಯ ಸಭಾಪತಿಗಳು, ರಾಜ್ಯ ಸಭೆಯಿಂದ ಪತ್ರ ಬಂದ ನಂತರ, ' ನನಗೆ accident ಆಗಿದೆ, ನನಗೆ ಸದನಕ್ಕೆ ಬರಲಿಕ್ಕಾಗುತ್ತಿಲ್ಲ, ನನ್ನ ಅನುಪಸ್ಥಿತಿಯಲ್ಲಿ panel names ನಲ್ಲಿ ಮೊದಲನೇ ಹೆಸರಿರತಕ್ಕ ಮಾನ್ಯ ತಿಪ್ಪಣ್ಣನವರು ಸಭಾಪತಿ ಕಾರ್ಯವನ್ನು ನಿರ್ವಹಣೆ ಮಾಡುವುದಕ್ಕೆ ವ್ಯವಸ್ಥೆ ಮಾಡಿ' ಎಂದು Secretary ಯವರಿಗೆ ಅವರೊಂದು ಪತ್ರವನ್ನು ಜನವರಿ 23ನೇ ತಾರೀಖಿನಂದೇ ಬರೆದರು. ಆ ಪತ್ರ ಬರೆದಾದ ಮೇಲೆ ಮಾನ್ಯ ತಿಪ್ಪಣ್ಣನವರು ಅಲ್ಲಿ ಬಂದು ಕುಳಿತರೆ, ಸ್ವಾಮಿ, ಪ್ರಜಾಪ್ರಭುತ್ವದ ಬಗ್ಗೆ ಬಹಳ ದೊಡ್ಡ ದೊಡ್ಡ ಮಾತುಗಳನ್ನಾಡತಕ್ಕಂಥ ಜನ, ಹಿರಿಯರು, ದೊಡ್ಡವರು, ಸ್ವತ: ಸಭಾಪತಿಗಳಾಗಿದ್ದವರು, ಮಂತ್ರಿಗಳಾಗಿದ್ದವರು, ಸಭಾ ನಾಯಕರ ಕುರ್ಚಿಯಲ್ಲಿ ಕುಳಿತಿದ್ದವರು, ನಿನ್ನೆ ಇಲ್ಲೇನು ಘಟನೆ ನಡೆಯಿತೋ, ಅದಕ್ಕಿಂತ ಅನುಚಿತವಾಗಿ ಅಲ್ಲಿ ನಡೆದುಕೊಂಡರು. ಕುರ್ಚಿಯಲ್ಲಿ ಯಾರೇ ಕುಳಿತರೂ ಅವರಿಗೆ ಗೌರವ ಕೊಡಬೇಕಾದುದು ನಮ್ಮ ಕರ್ತವ್ಯ. ಸದನದಲ್ಲಿ ಬಂದು ....

ಶ್ರೀ ಸಿದ್ದರಾಮಯ್ಯ : Chairman or Deputy Chairman ಕುಳಿತರೆ ಮಾತ್ರ ಗೌರವ ಕೊಡಬೇಕು. ಯಾರಾದರೂ illegal ಆಗಿ ಬಂದು ಆ ಸ್ಥಾನದಲ್ಲಿ ಕುಳಿತರೆ ಗೌರವ ಕೊಡಬೇಕಾಗಿಲ್ಲ.

ಶ್ರೀ ಡಿ.ಹೆಚ್.ಶಂಕರಮೂರ್ತಿ :– ......Panel Members also. ಅವರಿಗೂ ಸಹ ಗೌರವ ಕೊಡಬೇಕು. 'ಯಾರೇ' ಅಂದರೆ ಅಧಿಕೃತವಾಗಿ ಯಾರು ಕುಳಿತಿರುತ್ತಾರೋ, ಅವರು. ಅವರು ಕುಳಿತಿದ್ದರೆ, ಇವರು ಸದನದಲ್ಲಿ ಬಂದು, 'ತಿಪ್ಪಣ್ಣನವರೇ', 'ಯಜಮಾನರೇ', ಈ ರೀತಿ ಮಾತನಾಡಿದರು ಸ್ವಾಮಿ.

ಆ ಕುರ್ಚಿಗೆ ಇವರು ಗೌರವವನ್ನು ಕೊಡಲಿಲ್ಲ. ನಾನು ಸಭಾ ನಾಯಕನಾಗಿ, ಆ ರೀತಿ ಅವರನ್ನು ಕರೆದಿದ್ದಕ್ಕೆ ಅವರ ಕ್ಷಮೆ ಕೇಳಿ ಎಂದರೂ ಅವರು ಕ್ಷಮೆ ಕೇಳಲಿಲ್ಲ. ಅವರು ಕ್ಷಮೆ ಕೇಳುವುದಕ್ಕಿಂತ ಹೆಚ್ಚಾಗಿ 1ನೇ ತಾರೀಖಿನಿಂದ 13ನೇ ತಾರೀಖಿನವರೆಗೆ ಕಲಾಪ ನಡೆಸಲು ಬಿಡಲಿಲ್ಲ. ಅವರು 40 ಜನರಿದ್ದಾರೆ ಎಂಬ ಒಂದೇ ಕಾರಣಕ್ಕಾಗಿ, ಸಭಾಪತಿಗಳು ಬಂದು ಕುರ್ಚಿ ಮೇಲೆ ಕುಳಿತ ತಕ್ಷಣವೇ, ' ಓಹೋ' ಎಂದು ಕೂಗುತ್ತಿದ್ದರು. ಸದನವನ್ನು ನಡೆಸಲಿಕ್ಕೇ ಇವರು ಬಿಡಲಿಲ್ಲ. ನಾನು ಪದೇ ಪದೇ ಕೇಳಿದೆ......

[ಗೊಂದಲ]

ತಾವು ದಯವಿಟ್ಟು ಮಧ್ಯೆ ಬಾಯಿ ಹಾಕಬೇಡಿ. ನೀವೆಲ್ಲಾ ಮಾತನಾಡುವಾಗ ನಾನು ಕುಳಿತು ಕೇಳಿದ್ದೇನೆ. ಆದ್ದರಿಂದ ತಾವೂ ಕೂಡ ದಯಮಾಡಿ ಕುಳಿತುಕೊಂಡು ನಾನು ಹೇಳುವುದನ್ನು ಕೇಳಬೇಕಾಗುತ್ತದೆ. ನಾನು ಪದೇ ಪದೇ ಕರೆದೆ. ಮಾನ್ಯ ವಿರೋಧ ಪಕ್ಷದ ನಾಯಕರನ್ನು ಕರೆದು, ಎಲ್ಲರನ್ನೂ ಕರೆದು ಸಭೆ ನಡೆಸಿದೆ. ಅಲ್ಲಿ ನಾನು ಅವರಿಗೊಂದು ಪ್ರಶ್ನೆ ಕೇಳಿದೆ. 'ಏಕೆ ಈ ತರಹ ಗಲಾಟೆ ಮಾಡುತ್ತಿದ್ದೀರಿ? ಮಾನ್ಯ ತಿಪ್ಪಣ್ಣನವರು ಕುರ್ಚಿ ಮೇಲೆ ಕುಳಿತಿರತಕ್ಕದ್ದು ಅಕಸ್ಮಾತ್ ಅಲ್ಲ, ಕಾನೂನು ಬದ್ಧವಾಗಿ ಸಂವಿಧಾನದ ವಿಧಿ 184[2] ಮತ್ತು ನಮ್ಮ ಕಾನೂನಿನ 9ನೇ ರೂಲ್ ಪ್ರಕಾರ ಅವರು ಅಲ್ಲಿ ಬಂದು ಕುಳಿತಿದ್ದಾರೆ, ಅವರಿಗೆ ನಾವು ಗೌರವ ಕೊಡಬೇಕಾಗುತ್ತದೆ' ಎಂದು ನಾನು ಹೇಳಿದೆ. ಆಗ ಇದ್ದಕ್ಕಿದ್ದ ಹಾಗೆ, ಒಂದು ವಾರದ ನಂತರ, 1ನೇ ತಾರೀಖು ಇವರು ಇಲ್ಲಿ ಗಲಾಟೆಯನ್ನು ಶುರು ಮಾಡಿದರು, ಸದನವನ್ನು ನಡೆಸಲಿಕ್ಕೆ ಇವರು ಬಿಡಲಿಲ್ಲ, ಒಂದು ದಿವಸ ಅಥವಾ ಎರಡು ದಿವಸ ಅಲ್ಲ, ಹತ್ತು ದಿವಸಗಳ ಕಾಲ ಇವರು ಸದನವನ್ನು ನಡೆಸಲಿಕ್ಕೆ ಬಿಡಲಿಲ್ಲ, ಏಳು ದಿವಸವಾದ ಮೇಲೆ ಇವರು ಸ್ವರ ಬದಲಾವಣೆ ಮಾಡಿದರು. ಅವರು ಮಾನ್ಯ ತಿಪ್ಪಣ್ಣನವರು ಕುಳಿತಿರುವುದನ್ನು ಬಿಟ್ಟು ಬಿಟ್ಟರು, ಇದ್ದಕ್ಕಿದ್ದ ಹಾಗೆ ಅವರಿಗೆ ಆಗ ಚುನಾವಣೆ ನೆನಪಾಯಿತು.....

[ಗೊಂದಲ]

.......ಸ್ವಲ್ಪ ತಡೆಯಿರಿ. ನಾನು ಹೇಳುವುದನ್ನು ಪೂರ್ತಿ ಕೇಳಿ. ನಾನು ಯಾರಿಗೂ ಯೀಲ್ಡ್ ಆಗಿಲ್ಲ. ದಯಮಾಡಿ ಕುಳಿತುಕೊಳ್ಳಿ. ನಾನು ಮಾನ್ಯ ಸಭಾಧ್ಯಕ್ಷರಿಗೆ ಹೇಳುತ್ತಿದ್ದೇನೆ, ದಯಮಾಡಿ ತಾವೆಲ್ಲರೂ ಕುಳಿತುಕೊಳ್ಳಬೇಕು.....

[ಗೊಂದಲ]

...... ನಾನು ಮಾತನಾಡುವುದನ್ನು ತಾವು ಕೇಳಬೇಕಾಗುತ್ತದೆ. ಅವರು ಏಳು ದಿವಸವಾದ ಮೇಲೆ...

[ಗೊಂದಲ]

ಅಧ್ಯಕ್ಷರು :- ಮಾನ್ಯ ತನ್ವೀರ್ ಸೇಠ್‌ರವರೇ, ನಾನು ನಿಮಗೂ ಮಾತನಾಡಲು ನಂತರ ಅವಕಾಶ ಕೊಡುತ್ತೇನೆ. ಈಗ ಅವರು ಮಾತನಾಡಲು ಅವಕಾಶ ಕೊಡಿ.

[ಗೊಂದಲ]

ಶ್ರೀ ಡಿ.ಹೆಚ್.ಶಂಕರಮೂರ್ತಿ :-..... ಏಳು ದಿವಸಗಳಾದ ಮೇಲೆ ಸ್ವರ ಬದಲಾವಣೆ ಮಾಡಿದರು. ಮಾನ್ಯ ತಿಪ್ಪಣ್ಣನವರು ಕುಳಿತಿರುವ ವಿಷಯ ಬಿಟ್ಟು ಚುನಾವಣೆ ಬಗ್ಗೆ ಪ್ರಸ್ತಾಪ ಮಾಡಿದರು. ನಾನು ಅವತ್ತು ಅವರಿಗೆ ಸಭಾ ನಾಯಕನಾಗಿ ಹೇಳಿದೆ.' ಸರ್ಕಾರದ ಪರವಾಗಿ ಚುನಾವಣೆ ನಡೆಸುವುದಕ್ಕೆ ನಾವು ತಯಾರಿದ್ದೇವೆ, ಆದರೆ ಚುನಾವಣೆ ನಡೆಸುವುದಕ್ಕೂ ಒಂದು ಪದ್ಧತಿ ಇದೆ, ಆ ಕುರ್ಚಿ ಮೇಲೆ ಒಬ್ಬರು ಕುಳಿತು ಚುನಾವಣೆ ನಡೆಸಬೇಕಾಗುತ್ತದೆ, ಅಲ್ಲಿ ತಾವು ಯಾರನ್ನು ಕೂರಿಸುತ್ತೀರಿ?' ಎಂದು ನಾನು ಅವರನ್ನು ಕೇಳಿದೆ. ಆಗ ಅವರು ಸ್ವಲ್ಪ ಹೊತ್ತು ಸುಮ್ಮನಿದ್ದರು. 'ಮಾನ್ಯ ತಿಪ್ಪಣ್ಣನವರು ಕಾನೂನು ಬದ್ಧರಾಗಿ ನೇಮಕವಾಗಿದ್ದಾರೆ, ಅವರು ಕುಳಿತುಕೊಳ್ಳುವುದಕ್ಕೆ ನೀವು ಒಪ್ಪಿಕೊಳ್ಳಿ, ಚುನಾವಣೆ ನಡೆಸಲಿಕ್ಕೆ ನಾವು ತಯಾರಿದ್ದೇವೆ' ಎಂದು ನಾನು ನಮ್ಮ ಮುಖ್ಯಮಂತ್ರಿಗಳು, ಉಪ ಮುಖ್ಯಮಂತ್ರಿಗಳನ್ನು ಕೇಳದೆ ಹೇಳಿದೆ. ಆದರೂ ಸಹ ಅವರು, 'ಆ ಸ್ಥಾನದಲ್ಲಿ ಮಾನ್ಯ ತಿಪ್ಪಣ್ಣನವರು ಮಾತ್ರ ಕುಳಿತುಕೊಳ್ಳಬಾರದು, ಬೇರೆ ಯಾರನ್ನಾದರೂ ಕೂರಿಸಿ, ಚುನಾವಣೆ ಮಾಡೋಣ' ಎಂದು ಹೇಳಿದರು. ಅಂತಹ ಪ್ರಜಾಪ್ರಭುತ್ವವಾದಿಗಳು ಇವತ್ತು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುತ್ತಿದ್ದಾರೆ. ಇದನ್ನು ನಾವು ಒಪ್ಪಬೇಕೇ ಸ್ವಾಮಿ? ಇದ್ಯಾವ ನ್ಯಾಯ? ಇದರ ಬಗ್ಗೆ ತಾವು ನೋಡಬೇಕಾಗುತ್ತದೆ ಸ್ವಾಮಿ. ಮಾನ್ಯ ರಾಜ್ಯಪಾಲರ ಪತ್ರದ ಬಗ್ಗೆ ನಾನು ನಂತರ ಬರುತ್ತೇನೆ. 40 ಜನರನ್ನು 28 ಜನ ಸೇರಿ ಹೊರಗೆ ಹಾಕಿದರು ಎಂದು ಹೇಳುತ್ತಾರೆ. ಸ್ವಾಮಿ, ಗಲಾಟೆ ಮಾಡಿದ್ದು 40 ಜನರು. ಅವರು ಸದನ ನಡೆಸಲಿಕ್ಕೇ ಬಿಡಲಿಲ್ಲ, ಒಂದು ದಿವಸವಲ್ಲ, ಎರಡು ದಿವಸವಲ್ಲ, 12 ದಿವಸಗಳು ಬಿಡಲಿಲ್ಲ. Majority or Minority ಎಂಬುದೇನೂ ಇಲ್ಲ. ಸರ್ಕಾರ ಸರ್ಕಾರವೇ. 40 ಜನ continuous ಆಗಿ 1ನೇ ತಾರೀಖಿನಿಂದ 12ನೇ ತಾರೀಖಿನವರೆಗೆ ಕಲಾಪ ನಡೆಯದಂತೆ ಮಾಡಿದರು. ಅವತ್ತು Chairman seat ನಲ್ಲಿ ಕುಳಿತಿದ್ದವರು ಅವರಿಗೆ ವಿಧ ವಿಧವಾಗಿ ಕೇಳಿಕೊಂಡರು.' ಬನ್ನಿ,

ಕುಳಿತುಕೊಳ್ಳಿ' ಎಂದರೆ, 'ನೀವು Chairman ಅಲ್ಲವೇ ಅಲ್ಲ, You go back, ನೀವು illegal ಆಗಿ ನೇಮಕವಾದವರು' ಮುಂತಾಗಿ ಕೂಗುವುದಕ್ಕೆ ಶುರು ಮಾಡಿದರು. ಸದನ ನಡೆಯಲಿಕ್ಕೇ ಇವರು ಬಿಡಲಿಲ್ಲ. ಸದನವನ್ನು ನಡೆಸಬೇಕೆಂದು ನಾವು ಕೇಳಿದೆವು. ಆದರೆ ಅವರು ಸದನ ನಡೆಸುವುದಕ್ಕೆ ಬಿಡುವುದಿಲ್ಲ ಎಂದರು. ಇಲ್ಲಿ numbers ಪ್ರಶ್ನೆಯಿಲ್ಲ ಸ್ವಾಮಿ. ಸದನ ನಡೆಸುವುದಕ್ಕೆ ಬಿಟ್ಟರೆ ಇಲ್ಲವೇ? ಎಂಬುದೇ ಪ್ರಶ್ನೆ. ಸದನ ನಡೆಸಲಿಕ್ಕೇ ಬಿಡಲಿಲ್ಲ. ನಾವು majority ಇದ್ದೇವೆ ಎಂದು ಹೇಳುತ್ತಾರೆ. Majority ಇದ್ದರೆ ಸದನ ನಡೆಸಬೇಕಾಗಿತ್ತು, ನಮ್ಮನ್ನು ಟೀಕೆ ಮಾಡಬೇಕಾಗಿತ್ತು, ನಾವು ತಂದಂತಹ ಯಾವುದೇ ವಿಚಾರವನ್ನು ಅವರು defeat ಮಾಡಬಹುದಾಗಿತ್ತು, ಇದನ್ನೇನೂ ಮಾಡದೆ ಅವರು ಸದನ ನಡೆಸಲಿಕ್ಕೇ ಬಿಡಲಿಲ್ಲ......

[ಗೊಂದಲ]

ಶ್ರೀ ಧರ್ಮಸಿಂಗ್ : Are you questioning the Governor's decision? ತಾವೇನು ಮಾತನಾಡುತ್ತಿದ್ದೀರಿ? ರಾಜ್ಯಪಾಲರ ಪತ್ರ ....

[ಗೊಂದಲ]

ಶ್ರೀ ಬಸವರಾಜ್ ಎಸ್.ಹೊರಟ್ಟಿ : ಮಾನ್ಯ ಸಚಿವರು ಆ ಸದನದಲ್ಲಿ ಏನು ನಡೆಯಿತು ಎಂಬುದನ್ನು ಹೇಳುತ್ತಿದ್ದಾರೆ. ವಿಧಾನ ಪರಿಷತ್ತಿನಲ್ಲಿ ಏನು ನಡೆಯಿತು ಎಂಬುದನ್ನು ಅವರು ಹೇಳಬೇಡವೇ?

[ಗೊಂದಲ]

ಶ್ರೀ ಧರ್ಮಸಿಂಗ್ :- ..... ನಿನ್ನೆ ಮಾನ್ಯ ರಾಜ್ಯಪಾಲರಿಗೆ ಗೌರವ ಕೊಡಲಿಕ್ಕೆ ನೀವೆಲ್ಲಾ ಹೋಗಿದ್ದಿರಿ. ನೀವು ಮಾನ್ಯ ರಾಜ್ಯಪಾಲರ ಆದೇಶವನ್ನು ಪಾಲನೆ ಮಾಡುತ್ತೀರಾ, ಇಲ್ಲವಾ, ಎಂಬುದನ್ನು ಹೇಳಿ.

[ಗೊಂದಲ]

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ...

[ಗೊಂದಲ]

ಶ್ರೀ ಡಿ.ಹೆಚ್.ಶಂಕರಮೂರ್ತಿ: ಮಾನ್ಯ ಸಭಾಧ್ಯಕ್ಷರೆ, ಅವರು ಮಾತನಾಡಿದಾಗ ನಾನು ಪೂರ್ತಿಯಾಗಿ ಕೇಳಿದ್ದೇನೆ. ದಯಮಾಡಿ ನನ್ನ ಮಾತನ್ನು ಹಿರಿಯರಾದ ಮಾನ್ಯ ಖರ್ಗೆಯವರು ಪೂರ್ತಿಯಾಗಿ ಕೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ : Ok, Ok.

ಶ್ರೀ ಡಿ.ಹೆಚ್.ಶಂಕರಮೂರ್ತಿ:- ನನ್ನ ಮಾತನ್ನು ತಾವು ಪೂರ್ತಿಯಾಗಿ ಕೇಳಿ ನಂತರ ತಾವು ಮಾತನಾಡಿ. ಅದನ್ನು ಕೇಳುವುದಕ್ಕೆ ನಾನು ತಯಾರಿದ್ದೇನೆ.

ಇಲ್ಲಿ 28 ಜನ ಅಥವಾ 40 ಜನರ ಪ್ರಶ್ನೆ ಇರಲಿಲ್ಲ. ಇಲ್ಲದ ಪ್ರಶ್ನೆಗಳನ್ನು ಎತ್ತಿ ಅದನ್ನೇ ದೊಡ್ಡದು ಮಾಡುವುದು ಸರಿಯಲ್ಲ. ನಮ್ಮ ವಿಧಾನ ಪರಿಷತ್ತಿನಲ್ಲಿ ಎಂದಿಗೂ Majority or Minority ಪ್ರಶ್ನೆ ಇರಲಿಲ್ಲ, ಇರುವುದೂ ಇಲ್ಲ. ಏಕೆಂದರೆ, ಕೆಲವು ಬಾರಿ ಸರ್ಕಾರಕ್ಕೆ ಅಲ್ಲಿ majority ಇರುವುದಿಲ್ಲ. ಇಲ್ಲಿರತಕ್ಕಂಥ ವಾಸ್ತವಾಂಶವಿದು. ರಾಜ್ಯಸಭೆಯಲ್ಲೂ ಹಾಗೆಯೇ ಆಗುತ್ತದೆ. ಅಲ್ಲಿ ಚರ್ಚೆ ನಡೆಯುತ್ತದೆ. ಸರ್ಕಾರಕ್ಕೆ ಸಲಹೆ ಮತ್ತು ಸೂಚನೆಗಳನ್ನು ಕೊಡತಕ್ಕಂಥ ವೇದಿಕೆ ಅದಾಗಿದೆ. ಆದರೆ ಅಲ್ಲಿ ಪ್ರಶ್ನೆ ಇರತಕ್ಕದ್ದು, ಹೇಗೆ ನಡೆದುಕೊಂಡರು, ಯಾರು ನಡೆದುಕೊಂಡರು, ಎಂದು. ಸುಮಾರು ಹತ್ತು ದಿವಸ, ಬೆಳಿಗ್ಗೆ ಶುರುವಾದ ತಕ್ಷಣ, 40 ಜನರೂ ಎದ್ದು ನಿಂತುಕೊಂಡು, ನೀವು Chairmanರಲ್ಲ ಎಂದು ಹೇಳುತ್ತಿದ್ದರು. ಅವರನ್ನು ಏಕ ವಚನದಲ್ಲಿ ಸಂಬೋಧಿಸುತ್ತಿದ್ದರು. ಆ ಸ್ಥಾನದಲ್ಲಿ ಕುಳಿತವರಿಗೆ ಅವಮಾನ ಮಾಡುವುದು, ಕ್ಷಮೆ ಕೇಳಿ ಎಂದರೆ ಕ್ಷಮೆ ಕೇಳುವುದಿಲ್ಲ ಎನ್ನುವುದು, ಹೆಸರಿಡಿದು ಕೂಗುವುದು, cat calls ಮಾಡುವುದಕ್ಕೆ ಶುರು ಮಾಡುವುದು, ಇದೆಲ್ಲಾ ಮಾಡುವುದಕ್ಕೆ ಶುರು ಮಾಡಿದರು. ಸಭಾಪತಿಗಳು ನಿರ್ವಾಹವಿಲ್ಲದೆ, ನಿಮ್ಮನ್ನು ಹೊರಗೆ ಹಾಕಬೇಕಾಗುತ್ತದೆ ಎಂದು ಹೇಳಿ, ಅವರನ್ನೆಲ್ಲಾ ಹೊರಗೆ ಹಾಕಿದರು. ಸಭಾಪತಿಗಳು ಇಷ್ಟದಿಂದ ಹೊರಗೆ ಹಾಕಲಿಲ್ಲ, ಸಂತೋಷದಿಂದ ಹೊರಗೆ ಹಾಕಲಿಲ್ಲ. ಇದರಿಂದ ಸರ್ಕಾರಕ್ಕೇನು ಬಹಳ ಸಂತೋಷವಾಗಲಿಲ್ಲ. ಅವರನ್ನು ಹೊರಗೆ ಹಾಕಿದ ಮೇಲೆಯೂ, ನಾನು ಮತ್ತೆ ಅವರನ್ನು ಕೇಳಿದೆ. ಬನ್ನಿ ಸಾರ್, ಚರ್ಚೆ ಮೂಲಕ ನಾವು ಸಮಸ್ಯೆ ಬಗೆಹರಿಸೋಣ ಎಂದರೆ ಅವರು ಚರ್ಚೆಗೇ ಬರಲಿಲ್ಲ. ಅವರು ಚರ್ಚೆಗೆ ಬರುವುದರ ಬದಲು, ದಿನಕ್ಕೊಂದು ಹೊಸ ಹಾಡು ಹಾಡಲಿಕ್ಕೆ ಶುರು ಮಾಡಿದರು. ಮೊದಲ ಏಳು ದಿವಸಗಳ ಕಾಲ ಮಾನ್ಯ ತಿಪ್ಪಣ್ಣನವರನ್ನು ಒಪ್ಪಲಿಲ್ಲ. ಏಕೆ ಒಪ್ಪಲಿಲ್ಲ? ಸೆಕ್ಷನ್ 184[2]ನ್ನು ಓದಿ, 9ನ್ನು ಓದಿ. ಇವತ್ತು ಅವರು ಬಹಳ ಕಾನೂನಿನ ಬಗ್ಗೆ ಹೇಳುತ್ತಿದ್ದಾರೆ. ಅವರಿಗೆ ಕಾನೂನು ಓದುವುದಕ್ಕೆ ಬರುವುದಿಲ್ಲವೇ? ನನಗೆ ಅವತ್ತು ಒಂದು ಅನುಮಾನ ಬಂತು. ಈ ಕಾಂಗ್ರೆಸ್‌ನವರಿಗೆ ಇಂಗ್ಲಿಷ್ ಸಹ ಓದಲಿಕ್ಕೆ ಬರುವುದಿಲ್ಲ, ಕನ್ನಡ ಸಹ ಓದಲಿಕ್ಕೆ ಬರುವುದಿಲ್ಲವೆಂದು ನನಗನಿಸುತ್ತಿತ್ತು. ಏಕೆಂದರೆ, ಪುಸ್ತಕ ಓದಿ ಎಂದರೆ ಇವರು ಓದುವುದಿಲ್ಲ, ಕಾನೂನಿನ ಬಗ್ಗೆ ಯೋಚನೆಯೇ ಮಾಡುವುದಿಲ್ಲ. ಈಗೆಲ್ಲಾ ಪುಸ್ತಕ ಓದಿ ಹೇಳುತ್ತಿದ್ದಾರೆ. ಇದ್ಯಾವ ನ್ಯಾಯ? ಇದ್ಯಾವ ಧರ್ಮ? ......

ಶ್ರೀ ಸಿದ್ದರಾಮಯ್ಯ : ಮಾನ್ಯ ಅಧ್ಯಕ್ಷರೆ, ಇಂಗ್ಲಿಷ್ ಓದಲಿಕ್ಕೆ ಬರುವುದಿಲ್ಲ, ಕನ್ನಡ ಸಹ ಓದಲಿಕ್ಕೆ ಬರುವುದಿಲ್ಲ ಎಂದರೆ ಹೇಗೆ? ಇವರಿಗೇ ಓದುವುದಕ್ಕೆ ಬರುವುದಿಲ್ಲ ಎನಿಸುತ್ತದೆ. It is not correct

ಶ್ರೀ ಡಿ.ಹೆಚ್.ಶಂಕರಮೂರ್ತಿ :-...... ಈ ತರಹ ನಡೆದುಕೊಂಡವರು, ಈಗ ಇಲ್ಲಿಗೆ ಬಂದು ಪ್ರಜಾಪ್ರಭುತ್ವದ ಬಗ್ಗೆ ಬಹಳ ಮಾತನಾಡುತ್ತಿದ್ದಾರೆ. ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವವರು ನಿನ್ನೆ ದಿವಸ ಮಧ್ಯಾಹ್ನ ಈ ಸದನದಲ್ಲಿ ಮೈಕ್ ಕಿತ್ತು ಹಾಕಿದರು, ಸಭಾಧ್ಯಕ್ಷರ ಸ್ಥಾನದಲ್ಲಿ ಕುಳಿತವರ ಮೇಲೆ ಹಲ್ಲೆ ಮಾಡುವಂತಹ ಪ್ರಯತ್ನ ಮಾಡಿದರು. ಈ ತರಹ ಮಾಡಿದವರು ಪ್ರಜಾಪ್ರಭುತ್ವದ ಬಗ್ಗೆ ಮಾತನಾಡಿದರೆ, ಅದು 'Devil quoting the script' ಎಂದಾಗುತ್ತದೆ. ಅದನ್ನು ಇವರು ಮಾಡುತ್ತಿದ್ದಾರೆ. ಇವರಿಗೆ ಪ್ರಜಾಪ್ರಭುತ್ವದಲ್ಲಿ ನಂಬಿಕೆಯಿಲ್ಲ, ಇವರು ಪ್ರಜಾಪ್ರಭುತ್ವವನ್ನು ಹರಣ ಮಾಡಿದವರಾಗಿದ್ದಾರೆ. ಇವತ್ತಿನ ದಿವಸ ವಿರೋಧ ಪಕ್ಷದಲ್ಲಿ ಕುಳಿತಿರುವವರು ಮೂವತ್ತು ವರ್ಷಗಳ ಕೆಳಗೆ, ನಮ್ಮನ್ನೆಲ್ಲಾ ಜೈಲಿನಲ್ಲಿಟ್ಟು, ಬೇಕಾದಂತಹ ಕಾನೂನನ್ನು ಮಾಡಿಕೊಂಡವರಾಗಿದ್ದಾರೆ. ಇವರು ಈಗ ನಮಗೆ ಪ್ರಜಾಪ್ರಭುತ್ವದ ಬಗ್ಗೆ ಹೇಳುತ್ತಾರೆ......

[ಗೊಂದಲ]

ಶ್ರೀ ಡಿ.ಹೆಚ್.ಶಂಕರಮೂರ್ತಿ:- ..... ಜಯಪ್ರಕಾಶ್ ನಾರಾಯಣ್‌ರವರನ್ನು, ಅಟಲ್ ಬಿಹಾರಿ ವಾಜಪೇಯಿಯವರನ್ನು, ಲಾಲ್‌ಕೃಷ್ಣ ಅಡ್ವಾನಿಯವರನ್ನು, ದೇವೇಗೌಡರನ್ನು, ನನ್ನನ್ನು ಎಲ್ಲರನ್ನೂ ಜೈಲಿನಲ್ಲಿಟ್ಟು ಕಾನೂನು ಮಾಡಿದವರು ಪ್ರಜಾಪ್ರಭುತ್ವದ ಬಗ್ಗೆ ಬಹಳ ಭಾಷಣ ಮಾಡುತ್ತಾರೆ. ಪ್ರಜಾಪ್ರಭುತ್ವದ ಬಗ್ಗೆ ನನಗೂ ಮಾತನಾಡಲಿಕ್ಕೆ ಬರುತ್ತದೆ ಸ್ವಾಮಿ. ಇವರ ಪ್ರಜಾಪ್ರಭುತ್ವದ ಬಗ್ಗೆ ಮಾತನಾಡುವುದು ಬೇಡ. ಅಲ್ಲಿ ನಂಬರ್ ಪ್ರಶ್ನೆಯಲ್ಲ.....

[ಗೊಂದಲ]

....ರಾಜ್ಯಪಾಲರು ಹೇಳಿದ್ದನ್ನು ಓದಿ. .....

[ಗೊಂದಲ]

ಅಧ್ಯಕ್ಷರು: ಮಾನ್ಯ ಶಂಕರ ಮೂರ್ತಿಗಳೆ, ಬೇಗ ಮುಗಿಸಿ ಕಲಾಪವನ್ನು ನಡೆಸೋಣ.

ಶ್ರೀ ಕೆ. ಎಸ್ ಈಶ್ವರಪ್ಪ: ಸತ್ಯವನ್ನು ಹೇಳಿದರೆ, ಇವರು ಏತಕ್ಕೆ ಸಿಟ್ಟು ಮಾಡಿಕೊಳ್ಳುತ್ತಾರೆ? ಅವರು ಹೇಳಿದ ಭಾಷಣವನ್ನು ನಾವು ಕೇಳಿದ್ದೇವೆ.

[ಗೊಂದಲ]

ಶ್ರೀ ಕೆ.ಆರ್.ರಮೇಶ್ ಕುಮಾರ್: ಮತ್ತೆ ಮಸೀದಿಯನ್ನ ಹೊಡೆಯುತ್ತೇವೆಂದು ಹೇಳುತ್ತಿದ್ದಾರೆ ಕೇಳಿ.

[ಗೊಂದಲ]

ಶ್ರೀ ಎನ್.ಧರ್ಮ್‌ಸಿಂಗ್ (ವಿರೋಧ ಪಕ್ಷದ ನಾಯಕರು): Freedom movementನಲ್ಲಿ ಬ್ರಿಟಿಷರ ಏಜೆಂಟರಾಗಿ ಕೆಲಸ ಮಾಡಿದ್ದೀರಿ.

[ಗೊಂದಲ]

ಶ್ರೀ ಕೆ. ಎಸ್. ಈಶ್ವರಪ್ಪ: ಮಾನ ಮರ್ಯಾದೆ ಇಟ್ಟುಕೊಂಡು ಮಾತನಾಡಬೇಕು, ನಾಚಿಕೆ, ಮಾನ, ಮರ್ಯಾದೆಗು ಕಾಂಗ್ರೆಸ್‌ಗು ಸಂಬಂಧವಿಲ್ಲ.

ಶ್ರೀ ಡಿ.ಹೆಚ್. ಶಂಕರಮೂರ್ತಿ: ವಿಧಾನ ಸಭೆಯಲ್ಲಿ ನಿನ್ನೆ ನಡೆದದ್ದು ಮತ್ತು ಹಿಂದೆ ವಿಧಾನ ಪರಿಷತ್ತಿನಲ್ಲಿ ನಡೆದದ್ದನ್ನು ಹೇಳುತ್ತೇನೆ. 48 ಜನರನ್ನು ಹೊರಗೆ ಹಾಕಿ 28 ಜನ ಮಾಡಿದರೆಂದು ಇವತ್ತು ಹೇಳುತ್ತಾರೆ. ಈಗ ತಾನೆ, ಹಿರಿಯರಾದ ಮಾನ್ಯ ಸಿದ್ಧರಾಮಯ್ಯ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮಾತನಾಡುತ್ತಾ ನಮಗೆ ಮೆಜಾರಿಟಿ ಇಲ್ಲದೆ ಇದ್ದರು ಕೂಡ ಅಗ್ರಿಮೆಂಟ್ ಮಾಡಿಕೊಂಡಿದ್ದೇವೆಂದು ಹೇಳಿದರು. ಮಾನ್ಯ ಸಿದ್ಧರಾಮಯ್ಯನವರೆ, ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೆ, ತಮ್ಮನ್ನು ನಾನು ಕೇಳಿಕೊಳ್ಳುತ್ತೇನೆ, ನಾನು ವಿರೋಧಪಕ್ಷದ ನಾಯಕನಾಗಿದ್ದಾಗ, ನಮಗೇ ಮೆಜಾರಿಟಿ ಇದ್ದಾಗ, ನಮ್ಮ 39 ಜನರನ್ನು ಹೊರಗಿಟ್ಟು, ಅವತ್ತಿದ್ದ ಸರ್ಕಾರ ವಿಧಾನ ಪರಿಷತ್ತನ್ನು ನಡೆಸಿದ್ದು ತಮಗೆ ಮರೆತು ಹೋಯಿತಾ? ಸ್ವಾಮಿ, ನಮ್ಮನ್ನು ಹೊರಗೆ ಇಟ್ಟಿದ್ದಿರಿ.

[ಗೊಂದಲ]

ಶ್ರೀ ಕೆ. ಎಸ್.ಈಶ್ವರಪ್ಪ: ಇವರು ಹೇಳುವ ಮಾತನ್ನು ನಾವು ಕೇಳಬೇಕು, ಅವರು(ಮಂತ್ರಿಗಳು) ಮಾತನಾಡುವುದಕ್ಕೆ ಬಿಡುವುದಿಲ್ಲ, ಇದ್ಯಾವ ನ್ಯಾಯ, ಸತ್ಯವನ್ನು ಹೇಳಿದರೆ ಇವರಿಗೆ ಸಿಟ್ಟು ಬರುತ್ತದೆ.

[ಗೊಂದಲ]

ಶ್ರೀ ಸಿದ್ಧರಾಮಯ್ಯ: ಫ್ಯಾಸಿಸ್ಟ್ ಫೋರ್ಸಸ್‌ಗಳಿಂದ ಪ್ರಜಾಪ್ರಭುತ್ವದ ಬಗ್ಗೆ ನಾವು ಪಾಠ ಹೇಳಿಸಿಕೊಳ್ಳಬೇಕಾ?

[ಗೊಂದಲ]

ಶ್ರೀ.ಕೆ. ಎಸ್.ಈಶ್ವರಪ್ಪ: ಈಗ ಇವರೆಲ್ಲಾ ಹೇಳಿದ್ದನ್ನೆಲ್ಲಾ ಪೂರ್ಣ ಕೇಳಿದೆವು, ಯಾವಾಗ ಮಾನ್ಯ ಶಂಕರಮೂರ್ತಿಯವರು ಸತ್ಯವನ್ನು ಹೇಳುವುದಕ್ಕೆ ಹೊರಟರು ಮಾತನಾಡುವುದಕ್ಕೆ ಬಿಡುವುದಿಲ್ಲ, ಇದ್ಯಾವ ನ್ಯಾಯ?

[ಗೊಂದಲ]

ಶ್ರೀ ಸಿದ್ಧರಾಮಯ್ಯ: ರಾಜ್ಯಪಾಲರಿಂದ ಲೆಟರ್ ಬಂದ ಮೇಲೂ ಸಹ ಅದೇ ಆರ್ಗ್ಯುಮೆಂಟ್ ಮಾಡುತ್ತರಲ್ಲ, that argument was rejected, dismissed by the Governor. ಮತ್ತೆ ಮತ್ತೆ ಏತಕ್ಕೆ ತಾವು ವಾದ ಮಾಡುತ್ತಿದ್ದೀರಿ?

ಶ್ರೀ ಡಿ.ಹೆಚ್.ಶಂಕರಮೂರ್ತಿ: I know that also. I will come to that. ಅದಕ್ಕೆ ಮುಂಚೆ ತಾವು ನಾನು ಹೇಳುವುದನ್ನು ಕೇಳಬೇಕಾಗುತ್ತದೆ. ಗೌರ್ನರ್ ರವರನ್ನೆ ಡಿಸ್‌ಮಿಸ್ ಮಾಡಿದವರು ತಾವು, ಈ ದೇಶದೊಳಗೆ ಮಾಡಬಾರದನ್ನು ಮಾಡಿದವರು ತಾವು, ಈಗ ನನಗೆ ಬಂದು ಏನೊ ಹೇಳುತ್ತೀರಲ್ಲಾ?

[ಗೊಂದಲ]

ಶ್ರೀ ಸಿದ್ಧರಾಮಯ್ಯ: ಈ ದೇಶದಲ್ಲಿ ಅಧಿಕಾರಕೋಸ್ಕರ ಏನೇನು ಮಾಡಿದ್ದೀರೆಂಬುದೆಲ್ಲಾ ಇತಿಹಾಸದಲ್ಲಿದೆ, ಅದನ್ನೆಲ್ಲಾ ಹೇಳಬೇಕಾಗುತ್ತದೆ, ಆ ಬಗ್ಗೆ ಬೇಕಾದರೆ ಚರ್ಚೆಮಾಡೋಣ, ಫ್ಯಾಸಿಸ್ಟ್ ಫೋರ್ಸ್‌ಗಳು ಯಾವ್ಯಾವ ರೀತಿಯಲ್ಲಿ ನಡೆದುಕೊಂಡಿದ್ದಾವೆಂಬುದನ್ನೆಲ್ಲಾ ಹೇಳೋಣ.

[ಗೊಂದಲ]

ಮಾನ್ಯ ಸದಸ್ಯರೊಬ್ಬರು: ಇವರು ಮಹಾತ್ಮ ಗಾಂಧಿಜಿಯವರ ಕೊಲೆಗಡುಕರು [ಬಿಜೆಪಿ], ಇವರು ಹಿಟ್ಲರ್ ನ ಅನುಯಾಯಿಗಳು.

[ಗೊಂದಲ]

ಶ್ರೀ ಕೆ.ಎಸ್.ಈಶ್ವರಪ್ಪ: ವಿಧಾನ ಸಭೆ ಪ್ರಾರಂಭವಾದಾಗಿನಿಂದಲು ಕೂಡ, ವಿಧಾನ ಸಭೆಯ ಅಧ್ಯಕ್ಷರ ಮೇಲೆ ಗೂಂಡಾಗಿರಿ ಮಾಡಿದವರು ಕಾಂಗ್ರೆಸಿಗರು, ಈ ವಿಧಾನ ಸಭೆ ಕಟ್ಟಿದಾಗಿನಿಂದಲು ಕೂಡ ಆ ಸಭಾಪತಿ ಮೇಲೆ ಹಲ್ಲೆ ಮಾಡಿದ ಕೀರ್ತಿ ಕಾಂಗ್ರೆಸ್‌ನವರಾದ ನಿಮಗೆ ಸಲ್ಲುತ್ತದೆಯೆ ವಿನಹ, ಇನ್ಯಾರಿಗೂ ಇಲ್ಲ.

[ಗೊಂದಲ]

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ದೇಶದಲ್ಲಿ ಮಾಹಾತ್ಮಗಾಂಧೀಜಿ ಯವರನ್ನು ಕೊಂದು ಹಾಕಿದವರು ನಮಗೆ ಹೇಳುತ್ತಾರೆ, ಮಾಹಾತ್ಮ ಗಾಂಧೀಜಿಯವರಿಗೆ ಗುಂಡು ಹಾಕಿದವರು ಪಜಾಪ್ರಭುತ್ವದ ಬಗ್ಗೆ ಮಾತನಾಡುತ್ತಾರೆ.

[ಗೊಂದಲ]

ಶ್ರೀ ಡಿ.ಹೆಚ್.ಶಂಕರ ಮೂರ್ತಿ: ಇದಾದ ಮೇಲೆ ಸಂವಿಧಾನವನ್ನು ಬಹಳ ಓದಿರುವವರು, ರಾಜ್ಯಾಂಗವನ್ನೆ ಉಲ್ಲೇಖ ಮಾಡಿ ಹೇಳುವಂತಹ ಮಹಾ ಮಹಾ ಪಂಡಿತರಿದ್ದಾರೆ, ನಾನು ಕೇಳುತ್ತೇನೆ, ನಮ್ಮ ವಿಧಾನ ಪರಿಷತ್ತಿನ ಯಾವ ಕಾನೂನಿನ ಪ್ರಕಾರ 20 ತಿಂಗಳ ಕಾಲ ಸದನದ ಸದಸ್ಯರೆ ಅಲ್ಲದವರು ಸಭಾ ನಾಯಕರಾಗಿದ್ದರು..

[ಗೊಂದಲ]

ಶ್ರೀ ಬಿ.ಆರ್.ಪಾಟೀಲ್: ನಿಮಗೆ ಈ ಸಂವಿಧಾನ, ರಾಜ್ಯಾಂಗದ ಬಗ್ಗೆ ಮಾತನಾಡುವುದಕ್ಕೆ ಅಧಿಕಾರವಿಲ್ಲ, ಈ ಸಂವಿಧಾನವನ್ನು ತಿರಸ್ಕಾರ ಮಾಡಿದಂತಹ ಒಲ್ವಾಲ್ಕರ್ ಅನುಯಾಯಿಗಳು ನೀವು ಸಂವಿಧಾನವನ್ನು ತಿರಸ್ಕಾರ ಮಾಡಿದಂತಹವರು, ನಿಮಗೆ ರಾಜ್ಯಾಂಗದ ಬಗ್ಗೆ ಮಾತನಾಡುವುದಕ್ಕೆ ಅಧಿಕಾರವೇ ಇಲ್ಲ..

[ಗೊಂದಲ]

ಅಧ್ಯಕ್ಷರು: ಮಾನ್ಯ ಶಂಕರ ಮೂರ್ತಿಗಳೆ, ಆ ಕಡೆ ಈ ಕಡೆ ನೋಡಬೇಡಿ ಈಗ ಅವರೇನು ಎತ್ತಿದ್ದಾರೆ ಆ ಸಮಸ್ಯೆ ಬಗ್ಗೆ ಉತ್ತರ ಹೇಳಿಬಿಡಿ.

ಶ್ರೀ ಡಿ.ಹೆಚ್.ಶಂಕರ ಮೂರ್ತಿ: ಅವರು ಏನು ಹೇಳುತ್ತಿದ್ದಾರೆ,ನಾವು ಹಲ್ಲೆ ಮಾಡಿದ್ದು ಸರಿ ಇದೆ. ನಿಮಗೆ ಪ್ರಚೋದನೆಯಾಯಿತು, ಗೌರ್ನರ್‌ನಿಂದ ಪತ್ರ ಬಂದಿತ್ತು ಆ ಹಿನ್ನೆಲೆಯಲ್ಲಿ ನೀವು ತಪ್ಪು ಮಾಡಿದಿರಿ, ನಾವು ಹಲ್ಲೆ ಮಾಡಿದ್ದೆ ಸರಿ ಎಂದು ಹೇಳುತ್ತಿದ್ದಾರೆ. ಆದರೆ ಹಲ್ಲೆ ಮಾಡಿದ್ದು ಯಾವಾಗ, ಪತ್ರ ಬಂದದ್ದು ಯಾವಾಗ ಸ್ವಾಮಿ? ಹಲ್ಲೆ ಮಾಡಿ, ಕೊಲೆ ಯತ್ನ ಮಾಡಿದಂತಹವರು, ಇವರು ಹಲ್ಲೆ ಮಾಡಿದ್ದು ಮಧ್ಯಾಹ್ನ 2.00 ಗಂಟೆಗೆ, ಗೌರ್ನರ್ ರವರ ಪತ್ರ ಬಂದದ್ದು ಸಂಜೆ 7.00 ಗಂಟೆಗೆ, ಇವರಿಗೆ ಗೌರ್ನರ್ ಪತ್ರದಲ್ಲೇನಿದೆ ಎಂಬುದು ಗೊತ್ತಿತ್ತಾ? ಹೇಗೆ ಗೊತ್ತಿತ್ತು? ಸಭಾಧ್ಯಕ್ಷರ ಮೇಲೆ ಹಲ್ಲೆ ಮಾಡತಕ್ಕಂತಹ ಪ್ರಯತ್ನ ಮಾಡಿದರು, ಇದನ್ನು ಹೇಗೆ ಒಪ್ಪುವುದಕ್ಕೆ ಆಗುತ್ತದೆ ಸ್ವಾಮಿ?

ಶ್ರೀ ನೆ.ಲ.ನರೇಂದ್ರ ಬಾಬು: ಜನರಿಗೆ ಪ್ರಯೋಜನವಾಗುವಂತೆ ಮಾತನಾಡಿ, ಹಳೆಯ ಕತೆಯನ್ನು ಹೇಳಬೇಡಿ, ಆ ರೀತಿಯ ವಾತಾವರಣವನ್ನು ನಿರ್ಮಾಣ ಮಾಡಿದಂತಹವರು ಯಾರು? ಅಂತಹ ವಾತಾವರಣವನ್ನು ನಿರ್ಮಾಣ ಮಾಡಿದಂತಹವರು ನೀವು.

ಶ್ರೀ ಡಿ.ಹೆಚ್.ಶಂಕರ ಮೂರ್ತಿ: ಸಭಾಧ್ಯಕ್ಷರೆ, ಇಷ್ಟರ ಮೇಲೆ ನಾನೊಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ನಾವು ವಿಧಾನ

ಪರಿಷತ್ತಿನ ಬಗ್ಗೆ ವಿಧಾನ ಸಭೆಯಲ್ಲಿ, ವಿಧಾನ ಸಭೆಯ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಚರ್ಚೆ ಮಾಡತಕ್ಕಂತಹದ್ದು ಸತ್ಸಂಪ್ರದಾಯವಲ್ಲ, ಯಾವುದು ಕಾನೂನು ಅಲ್ಲ. ಆದುದರಿಂದ ದಯಮಾಡಿ ವಿಧಾನ ಪರಿಷತ್ತಿನ ಬಗ್ಗೆ ಇಲ್ಲಿ ಚರ್ಚೆ ಬೇಡ, ಅಲ್ಲಿ ಬರಲಿ ಚರ್ಚೆ ಮಾಡೋಣ..

[ಗೊಂದಲ]

ಶ್ರೀ ಕೆ.ಶ್ರೀನಿವಾಸಗೌಡ: Council is the creation of this House. ಅದು ಹೇಗೆ ಹೇಳುತ್ತೀರಿ?

ಶ್ರೀ ನೆ.ಲ. ನರೇಂದ್ರ ಬಾಬು: ಇಷ್ಟು ಹೊತ್ತು ಶಂಕರಮೂರ್ತಿಗಳು ಮಾತನಾಡಿದ್ದು ಅದನ್ನೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಅಧ್ಯಕ್ಷರೆ, ಈಗ ರೆಕಾರ್ಡ್ ಸ್ಟ್ರೇಟ್ ಇರಬೇಕು.

[ಗೊಂದಲ]

ಶ್ರೀ ಡಿ.ಹೆಚ್.ಶಂಕರ ಮೂರ್ತಿ: ಹಲ್ಲೆ ಎಷ್ಟು ಹೊತ್ತಿಗೆ ಮಾಡಿದಿರೆಂಬುದನ್ನು ಹೇಳಬೇಕು, ನಿಮಗೆ ಗೌರ್ನರ್ ಪತ್ರ ಎಷ್ಟು ಹೊತ್ತಿಗೆ ಬರುತ್ತದೆಂದು ಗೊತ್ತಿತ್ತಾ? ಹಲ್ಲೆ ಮಾಡಿದವರು ತಾವೆ.

[ಗೊಂದಲ]

ಶ್ರೀ ಸಿದ್ಧರಾಮಯ್ಯ: ಯಾರು ಹಲ್ಲೆ ಮಾಡಲಿಲ್ಲ, ಪ್ರತಿಭಟಿಸ ಬೇಕಾಗುತ್ತದೆ ಕೂಗಿರುವುದು ನಿಜ, ಮೈಕ್ ಕಿತ್ತಿರುವುದು ನಿಜ.

ಶ್ರೀ ನೆ.ಲ. ನರೇಂದ್ರ ಬಾಬು: ಆ ವಾತಾವರಣ ಸೃಷ್ಟಿ ಮಾಡಿದಂತಹವರು ನೀವೆ ತಾನೆ.

[ಗೊಂದಲ]

ಶ್ರೀ ಸಿದ್ಧರಾಮಯ್ಯ: ನೀವು ಇಷ್ಟ ಬಂದಂತೆ ಮಾಡಿದರೆ ಸುಮ್ಮನೆ ಇರುತ್ತಾರೇನ್ರಿ.

ಶ್ರೀ ಡಿ.ಹೆಚ್.ಶಂಕರ ಮೂರ್ತಿ: ಸ್ಪೀಕರ್‌ಗೆ ಹೊಡೆಯಲು ಹೋಗಿದ್ದರು, ಅವರಿಗೆ ಹೊಡೆತ ಬಿದ್ದಿದ್ದರೆ ಹಚ್ಚು ಕೆಡಿಮೆ ಪ್ರಾಣ ಹೋಗುತಿತ್ತು, ಯಾರು ಹೊಣೆ ಎಂಬುದನ್ನು ಹೇಳಬೇಕಾಗುತ್ತದೆ. ಆಚಾರ ಹೇಳುವುದೊಂದು ಆಚರಿಸುವುದು ಮತ್ತೊಂದು, ತಾವು ಏನು ಬೇಕಾದರು ಮಾಡಬಹುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಶಂಕರ ಮೂರ್ತಿಗಳಿಗೆ ಸ್ವಲ್ಪ ಬಿಪಿ ರೈಸ್ ಆದಂತೆ ಕಾಣುತ್ತಿದೆ. ನಾವು ಅವರಿಗೆ ಕಾನೂನಿನ ಅರಿವಿಲ್ಲವೆಂದು ಹೇಳುತ್ತಿಲ್ಲ, ಸಂವಿಧಾನದ ಬಗ್ಗೆ ಮಾಹಿತಿ ಇಲ್ಲವೆಂದು ಹೇಳುತ್ತಿಲ್ಲ. ಅವರು

ಹೈಯರ್ ಎಜ್ಯುಕೇಷನ್ ಮಿನಿಸ್ಟರ್ ಇದ್ದಾರೆ, ಅರ್ ಎಸ್ ಎಸ್ ನಲ್ಲಿ ತರಬೇತಿ ತೆಗೆದುಕೊಂಡು ಬಂದವರಾಗಿದ್ದಾರೆ, ಒಳ್ಳೆಯ ವಿದ್ಯಾಭ್ಯಾಸ ಮಾಡಿದವರಾಗಿದ್ದಾರೆ, ಒಳ್ಳೆಯ ವ್ಯಾಪಾರಸ್ಥರಿದ್ದಾರೆ, ನಾನು ಅದರ ಬಗ್ಗೆ ಏನು ಹೇಳುವುದಿಲ್ಲ. ಆದರೆ ನಮ್ಮ ರೂಲ್ಸ್‌ನಲ್ಲಿ ಏನಿದೆ ಅದು ಬಹಳ ಮುಖ್ಯ. ನಮ್ಮ ರೂಲ್ಸ್ ಪ್ರಕಾರ ಪ್ಯಾನಲ್ ಆಫ್ ನೇಮ್ಸ್, ಏನು ವೈಸ್ ಛೇರ್ಮನ್ ಇರುತ್ತಾರೆ, ಅವರಿಗೆ ಅಧಿಕಾರವಿರುವುದು ಆ ದಿವಸದ ಬಿಸಿನಸ್ ನಡೆಸುವುದಕ್ಕೆ ಮಾತ್ರ ಹೊರತಾಗಿ, ಅವರು ಅಧ್ಯಕ್ಷರಾಗಿ ಫೈಲ್ ನೋಡುವುದು, ಎಲ್ಲಾ ಕಡೆ ಹೋಗುವುದು, ಇಲ್ಲಿ ಇನ್ವಿಟೇಷನ್ ನಲ್ಲಿ ಸಭಾಪತಿಗಳೆಂದು ಪ್ರಿಂಟ್ ಮಾಡುವುದು, ಇದು ಎಲ್ಲಾದರು ಇದ್ದರೆ ನಾನು ನಿಮಗೆ ಶರಣಾಗುತ್ತೇನೆ. ಅದನ್ನು ಬಿಟ್ಟು, ಗೌರ್ನರ್ ಮಗ್ಗಲಿಗೆ ಬಂದು ಕುಳಿತುಕೊಳ್ಳುವುದು ಇವೆಲ್ಲಾ ಅಧಿಕಾರ ಕೂಡ ಪ್ಯಾನಲ್ ಆಫ್ ವೈಸ್ ಛೇರ್ಮನ್‌ಗೆ ಇಲ್ಲ, ಇದು ಒಂದನೆಯದು. ಎರಡನೆಯದಾಗಿ, ಅವರು ಹೇಳುತ್ತಿದ್ದಾರಲ್ಲ, ಅವರಿಗೆ (ಬಿಜೆಪಿ) ಎಂದೂ ಮೆಜಾರಿಟಿ ಇರಲಿಲ್ಲ. ಮಾನ್ಯ ಶಂಕರಮೂರ್ತಿಯವರೆ ಅಧ್ಯಕ್ಷರಾಗಬೇಕಾಗಿತ್ತು. ಆದರೆ ಅವರಿಗೆ ಮೆಜಾರಿಟಿ ಏತಕ್ಕೆ ಸಿಗಲಿಲ್ಲವೆಂದರೆ, ಇಂತಹ ವಿಚಾರಧಾರೆ ಇರುವ ಜನರಿಗೆ ನಿಮ್ಮಂತಹ (ಅಧ್ಯಕ್ಷರ) ಕುರ್ಚಿಯ ಮೇಲೆ ಕೂರಿಸಬಾರದೆಂದು ಕೂರಿಸಲಿಲ್ಲ.

ಈ ಸರ್ಕಾರದ ಒಳ್ಳೆಯ ವಕೀಲರಾದ ಶ್ರೀಮಾನ್ ಎಂ.ಪಿ. ಪ್ರಕಾಶ್ ಸಾಹೇಬರು ಅವರಿಗೂ ಕರೆಸಿದ್ದರು, ನಮಗೂ ಕರೆಸಿದ್ದರು, ಅವರಿಗೆ ನಾಲ್ಕು ಗಂಟೆಗೆ ಕರೆಸಿದ್ದರು, ನಮಗೆ 5.30 ಗಂಟೆಗೆ ಕರೆಸಿದ್ದರು. ಒಂದುವರೆ ಗಂಟೆಗಳ ಕಾಲ ಅವರೂ ಕೂಡ Governor ಬಳಿ ದೀರ್ಘ ಚರ್ಚೆ ಮಾಡಿಕೊಂಡು ಬಂದರು, ನಮಗೂ ಕೂಡ ಕರೆಸಿದ್ದರು, ನಾವೂ ಕೂಡ ಒಂದು ತಾಸು ಚರ್ಚೆ ಮಾಡಿಕೊಂಡು ಬಂದಿದ್ದೇವೆ. ನಮ್ಮಿಬ್ಬರ ಹಿಯರಿಂಗ್ ಆದ ಮೇಲೆ, ನಮ್ಮ ಅನಿಸಿಕೆಗಳನ್ನು ಮತ್ತು ವಿಚಾರಗಳನ್ನು ಕೇಳಿದ ಮೇಲೆ, ಇವತ್ತು ಇದನ್ನು ಕಳುಹಿಸಿದ್ದಾರೆ. ಇದಕ್ಕೇನು ಗೌರವಿಸುತ್ತೀರೋ ಅಥವಾ ಕಸದ ಬುಟ್ಟಿಗೆ ಹಾಕುತ್ತೀರೋ ಎಂದು ಮಾನ್ಯ ಶಂಕರಮೂರ್ತಿಯವರು ಹೇಳಲಿ. ನಾವು ಇದನ್ನು ಪ್ರಸ್ತಾಪ ಮಾಡುತ್ತಿದ್ದೇವೆಯೋ ಹೊರತಾಗಿ, ನೀವು ನಮಗೆ ಜೈಲಿಗೆ ಹಾಕಿದಿರಿ, ನಮಗೆ ಅಲ್ಲಿ ಹಾಕಿದಿರಿ, ಎಂದು ಹೇಳುತ್ತೀರಿ. ನಿಮಗೆ ಜೈಲಿಗೆ ಏಕೆ ಹಾಕಿದೆವು ಎಂದರೆ, ನೀವು ಇದೇ ತಪ್ಪು ಮಾಡಿದಿರಿ ಎಂದರೆ ಜೈಲಿಗೂ ಹೋಗುತ್ತೀರಿ ಸೂಲಿಗೂ ಹೋಗುತ್ತೀರಿ. ಅದಕ್ಕೋಸ್ಕರ ಇವತ್ತು ಇದಕ್ಕೆ

ದಯವಿಟ್ಟು ಗೌರವ ಕೊಡಬೇಕು. ಅಧ್ಯಕ್ಷರೆ ಇದರ ಪ್ರಕಾರ ನಡೆಯಬೇಕೆ ಹೊರತಾಗಿ, ನಾವು ತಿರುಗಿ ಮುರುಗಿ ಹೋಗಬಾರದು.

ಶ್ರೀ ಡಿ.ಹೆಚ್. ಶಂಕರಮೂರ್ತಿ: ಮಾನ್ಯ ಸಭಾಧ್ಯಕ್ಷರೆ, ತಪ್ಪು ಮಾಡಿದರೆ ಜೈಲಿಗೆ ಹಾಕುತ್ತೇವೆಂದು ಅವರು ಹೇಳಿದರು. ನನ್ನ ಮೇಲೆ ಬರೆದಿರುವ ಛಾರ್ಜ್ ಶೀಟ್ ಕಾಪಿ ನನ್ನ ಬಳಿ ಇದೆ. 1975 ಜುಲೈ 10ನೇ ತಾರೀಕಿನ ಛಾರ್ಜ್ ಶೀಟ್ ಕಾಪಿ ನನ್ನ ಬಳಿ ಇದೆ. ಅದರಲ್ಲಿ ಏನಿದೆ ಗೊತ್ತಾ? ಶಂಕರಮೂರ್ತಿ ಒಬ್ಬನೇ ಶಿವಮೊಗ್ಗದ ಗಾಂಧಿ ಬಜಾರ್‌ನಲ್ಲಿ ಮಧ್ಯಾಹ್ನ 3.35ಕ್ಕೆ ಭಾರತ ಮಾತಾಕಿ ಜೈ ಎನ್ನುವ ರಾಷ್ಟ್ರಘಾತಕ ಘೋಷಣೆಯನ್ನು ಕೂಗುತ್ತಾ ಹೋಗುತ್ತಿದ್ದಾನೆ, ಇವನನ್ನು ಜೈಲಿಗೆ ಹಾಕಿ ಎಂದು ಹೇಳಿ ಇವರು ನನಗೆ ಜೈಲಿಗೆ ಹಾಕಿದರು. ನನ್ನ ಬಳಿ ಕಾಪಿ ಇದೆ, ಇವರು ಏನು ಹೇಳುತ್ತಾರೆ ಕೇಳಿ.

ಶ್ರೀ ಕೆ. ಶ್ರೀನಿವಾಸಗೌಡ: ಅವತ್ತು ಮಾನ್ಯ ಯಡಿಯೂರಪ್ಪನವರು ಮತ್ತು ಮಾನ್ಯ ಈಶ್ವರಪ್ಪನವರು ನಿಮಗೆ ಕೈ ಕೊಟ್ಟಿದ್ದರಾ?

ಶ್ರೀ ಡಿ.ಹೆಚ್. ಶಂಕರಮೂರ್ತಿ: ಭಾರತ ಮಾತಾ ಕಿ ಜೈ ಎಂದು ಹೇಳಿದವರಿಗೆ ತೆಗೆದುಕೊಂಡು ಹೋಗಿ ಜೈಲಿಗೆ ಹಾಕುತ್ತೀರಿ, ನಾಚಿಕೆ ಆಗಬೇಕು ನಿಮಗೆ. ಇವತ್ತಾದರೂ ನೀವು ಕ್ಷಮೆ ಕೇಳಿ. ಅವತ್ತು ಮಾಡಿದ ಆ ತಪ್ಪಿಗಾಗಿ ಇವತ್ತಾದರೂ ಕ್ಷಮೆ ಕೇಳಿ. ನಾನು ಕ್ಷಮಿಸುತ್ತೇನೆ. ಮುಂದೆ ಆಗುವುದಿಲ್ಲ. ಅದನ್ನೇ ನೀವು ಇನ್ನೂ ಸಾಧಿಸುತ್ತಿದ್ದೀರಿ. ನಿಮಗೆ ನಾಚಿಕೆಯಾಗಬೇಕು.

ಶ್ರೀ ನೆ.ಲ.ನರೇಂದ್ರ ಬಾಬು: ಪ್ರಜಾತಂತ್ರ ಉಳಿಸಿ ಎಂದು ಸಭಾಧ್ಯಕ್ಷರಿಗೆ ಕೇಳಿದರೆ ಹಲ್ಲೆ ಮಾಡುವುದಕ್ಕೆ ಹೋಗಿದ್ದೆವು ಎಂದು ಹೇಳುತ್ತೀರಿ. ಘೇರಾವ್ ಮಾಡಿದರು ಹಲ್ಲೆ ಮಾಡಿದರು ಎಂದು ಹೇಳುತ್ತೀರಿ.

ಅಧ್ಯಕ್ಷರು: ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು...

ಶ್ರೀ ಸಿ.ಎಸ್. ಪುಟ್ಟೇಗೌಡ: ಮಾನ್ಯ ಸಭಾಧ್ಯಕ್ಷರೆ, ನಾವು ಜನಗಳ ಎಲ್ಲ ಕೆಲಸಕಾರ್ಯಗಳನ್ನು ಬಿಟ್ಟು, ಜನ ನಮಗೆ ಆರಿಸಿ ಕಳುಹಿಸಿರುವುದರಿಂದ ಬಹಳ ಆಶೋತ್ತರಗಳನ್ನು ಇಟ್ಟುಕೊಂಡು ಇಲ್ಲಿ ಸದನಕ್ಕೆ ಬರುತ್ತಿದ್ದೇವೆ. ಸಭೆ ಎಲ್ಲಿಂದಲೋ ಎಲ್ಲಿಗೋ ಹೋಗುತ್ತಿದೆ. ಇದು ಒಂದು ರೀತಿಯಲ್ಲಿ ಗರಡಿ ಮನೆ ಆದ ಹಾಗಾಗುತ್ತಿದೆ. ಕೆಲವರು ತಮ್ಮ heart ಸರಿ ಇಲ್ಲದೆ ಇರುವವರು insulin ತೆಗೆದುಕೊಂಡು ನಿಮ್ಮ ಮರ್ಜಿಗೆ ಇಲ್ಲಿ ಕೂರಬೇಕೊ ಬೇಡವೊ ಎಂದು ಭಯವಾಗುತ್ತಿದೆ. ಒಮ್ಮೊಮ್ಮೆ ಸಭಾಧ್ಯಕ್ಷರ ಮೇಲೆ ದೊಡ್ಡ ಗದ್ದಲ, ನಾನು ಏಕೆ ಹೇಳುತ್ತಿದ್ದೇನೆ, ನಾನು ಚಿಕ್ಕವನು ನಾನು ಹೇಳುವುದಕ್ಕೆ ಶಕ್ತಿ ಇಲ್ಲ.

ನಾನು ಆ ಕಡೆಯವರು ಈ ಕಡೆಯವರು ಎಂದು ಹೇಳುವುದಿಲ್ಲ. ಮುಂದಿನ ಬೆಂಚಿನಲ್ಲಿರುವವರು ಗರಡಿ ಮನೆ ತರಹ ನಿಂತು ಬಿಟ್ಟರೆ ಹೇಗೆ? ನಾವು ಸದನಕ್ಕೆ ಬರುವುದು ಬೇಡವೆಂದು ಹೇಳಿದರೆ ದಯಮಾಡಿ ಜನರಿಗಾದರೂ ಮಾತನಾಡಿಸಿಕೊಂಡು ಹಳ್ಳಿಗಳಲ್ಲಿರುತ್ತೇವೆ. ಯಾವುದೇ ಗಂಭೀರವಾದ ಆರೋಪವಿದ್ದರೆ ಅದನ್ನು ಸಮಾಧಾನವಾಗಿ ಹೇಳಿದರೆ ಅದನ್ನು ಕೇಳುವಷ್ಟಾದರೂ ಸಮಾಧಾನ ನಮಗೆ ಇರಬೇಕಾಗುತ್ತದೆ. ಇಲ್ಲಿ ಒಂದು ರೀತಿ entertainment ತರಹ ಗರಡಿ ಮನೆ ತರಹ ಕಂಡರೆ ನಾವೇಕೆ ಇಲ್ಲಿ ಕುಳಿತುಕೊಳ್ಳಬೇಕು? ನಮಗೆಲ್ಲ ರಜ ಕೊಟ್ಟು ಬಿಡಿ, ಯಾರಿಗೆ ಅವಕಾಶ ಇದೆ ಅವರು ಕುಸ್ತಿ ಮಾಡಿಕೊಳ್ಳುವುದಾದರೆ ಮಾಡಿಕೊಳ್ಳಲಿ. ಇಲ್ಲವೆಂದರೆ ಗರಡಿ ಬೈಲಾವಾದರೂ ಮಾಡಿ. ಒಂದು ಮಹಾನ್ ಉದ್ದೇಶವನ್ನು ಇಟ್ಟು ಈ ವಿಧಾನಸೌಧವನ್ನು ಕಟ್ಟಿದ್ದಾರೆ. ಈ ರಾಜ್ಯದ ಜನ ಹಲವಾರು ಸಮಸ್ಯೆಗಳಿಂದ ಕುಡಿಯುವುದಕ್ಕೆ ನೀರಿಲ್ಲದೆ ಜಾತಕ ಪಕ್ಷಿಗಳಂತೆ ಆ ಕಡೆ ನೋಡುತ್ತಿದ್ದಾರೆ. ನಮ್ಮ ಶಾಸಕರುಗಳಿಗೆ ಕುಡಿಯುವುದಕ್ಕೆ ನೀರು ಕೊಡಿಸುವುದಕ್ಕೆ ಯೋಗ್ಯತೆ ಇದೆಯೋ ಇಲ್ಲವೋ ಎಂದು ನೋಡುತ್ತಿದ್ದಾರೆ. ದಯಮಾಡಿ ಇದನ್ನು ಗಂಭೀರವಾಗಿ ಚರ್ಚೆ ಮಾಡಬೇಕು. ಸುಮ್ಮನೆ ಸದನ ಎಲ್ಲಿಂದಲೋ ಎಲ್ಲಿಗೋ ಹೋಗುವುದಾದರೆ, ಇಲ್ಲಿ ಹೋ .. ಹಾ .. ಎನ್ನುವವರಿಗೆ ಮಹತ್ವ ಸಿಗುವುದಾದರೆ ಇದಕ್ಕೆ ಬೆಲೆ ಬರುವುದಿಲ್ಲ. ದಯಮಾಡಿ ಇದನ್ನು ಗಂಭೀರವಾಗಿ ಪರಿಗಣಿಸಬೇಕು.

ಶ್ರೀ ಡಿ.ಆರ್. ಪಾಟೀಲ್: ಸನ್ಮಾನ್ಯ ಅಧ್ಯಕ್ಷರೆ ನೀವು, Speaker's empanelment ಒಳಗೆ ನನ್ನ ಹೆಸರು ತಾವು ಇಟ್ಟಿದ್ದೀರಿ. ನೀವು ಮತ್ತು Deputy Speaker ಇಲ್ಲದಾಗ ನಾನು ಬಂದು ಆ ಕುರ್ಚಿಯಲ್ಲಿ ಕೂತು ಈ ಸದನವನ್ನು adjourn ಮಾಡಿ ಹೋಗಿ Business Advisory Committee ಕರೆದು ನಾಳಿನ ಅಜೆಂಡಾ ಸೆಟ್ ಮಾಡಲಿಕ್ಕೆ ನನಗೆ ಅಧಿಕಾರ ಇದೆಯೋ ಇಲ್ಲವೆನ್ನುವುದನ್ನು ಮಾನ್ಯ M.P. ಪ್ರಕಾಶ್ ಸಾಹೇಬರು ನನಗೆ ಮಾರ್ಗದರ್ಶನ ಮಾಡಿಕೊಡಬೇಕು.

ಶ್ರೀ ಎಂ.ಪಿ. ಪ್ರಕಾಶ್ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ಬಹಳ ವಿಚಾರಗಳನ್ನು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ನಮಗೆ ಪ್ರಶ್ನೆ ಇರತಕ್ಕಂಥದ್ದು ಯಾವ ಉದ್ದೇಶಕ್ಕಾಗಿ ಮಾನ್ಯ ವಿರೋಧ ಪಕ್ಷದ ನಾಯಕರು ಈ ವಿಷಯವನ್ನು ಪ್ರಸ್ತಾಪ ಮಾಡಿದರು, ಮತ್ತು ಯಾವ ಪ್ರಾರ್ಥನೆಯನ್ನು ಅವರು ಈ ಸದನದ ಮುಂದೆ ಇಟ್ಟರು

ಎನ್ನತಕ್ಕಂಥದ್ದರ ಬಗ್ಗೆ ಬಹಳ ದೊಡ್ಡ ಗೊಂದಲ ಇಲ್ಲಿ ಸೃಷ್ಟಿ ಆಗಿದೆ. ಇಲ್ಲಿ ಅವರು ಸಮರ್ಥಿಸಿಕೊಳ್ಳಬೇಕಾಗಿರತಕ್ಕಂಥದ್ದನ್ನು ಅಸಮರ್ಥನೀಯವಾದಂತಹ ರೀತಿಯಲ್ಲಿ ನಡೆದುಕೊಳ್ಳುತ್ತಿದ್ದಾರೆ. ಈ ಸದನದ ನಿನ್ನೆಯ ಕಾರ್ಯಕಲಾಪಗಳ ಬಗ್ಗೆ ನಾವು ವಿಷಾದವನ್ನು ವ್ಯಕ್ತಪಡಿಸುತ್ತೇವೆಂದು ಹೇಳುತ್ತಾ, ಆದರೆ ಮಾತನಾಡುವ ಧಾಟಿಯಲ್ಲಿ ಇವತ್ತು Governor ರವರು message ನ್ನು ಕಳುಹಿಸಿದ್ದಾರೆ. ಆ ಕಾರಣಕ್ಕಾಗಿ ನಮ್ಮ ಧರಣಿಯನ್ನು ನಾವು ವಾಪಸ್ ತೆಗೆದುಕೊಂಡು ನಮ್ಮ ಸ್ಥಾನದಲ್ಲಿ ನಾವು ಕುಳಿತಿದ್ದೇವೆಂದು ಹೇಳಿದರು. ಆದರೆ ಈ ಸಭೆ ಈ ಸದನಕ್ಕೆ Governorರವರಿಂದ ಯಾವುದೇ message ಈ ಸದನಕ್ಕೆ ಬಂದಿಲ್ಲ. ನಮ್ಮಲ್ಲಿ ನಿಯಮಾವಳಿಗಳ ಪ್ರಕಾರ ಸದನ ನಡೆಯಬೇಕೆಂದು ಇದೆಯೇ ವಿನಾ: ನಮಗೆ ತೋಚಿದಂತೆ ಮಾಡಬೇಕಾದಂಥದ್ದು ಅಲ್ಲ. ಚುನಾವಣೆಗಳನ್ನು ನಿಗಧಿತವಾದಂತಹ ರೀತಿಯಲ್ಲಿ ಯಾವುದಾರೂ ಒಂದು ಸ್ಥಾನ ಸಾವಿನಿಂದಾಗಲಿ ಅಥವಾ ರಾಜೀನಾಮೆಯಿಂದಾಗಲಿ ಅನ್ಯ ಕಾರಣಗಳಿಂದಾಗಲಿ ಖಾಲಿ ಇದ್ದಂತಹ ಸಂದರ್ಭದಲ್ಲಿ ಮುಂದಿನ ಅಧಿವೇಶನದಲ್ಲಿ ಚುನಾವಣೆ ನಡೆಯಬೇಕು ಎನ್ನತಕ್ಕಂಥದ್ದು ನಿಯಮ. ಆ ನಿಯಮವನ್ನು ನಾವು ತಪ್ಪು ಮಾಡಿದ್ದೇವೆ. ನೀವೂ ನಾವೂ ಕಲೆತು ಮಾಡಿದ್ದೇವೆಯೋ, ನೀವೇ ಮಾಡಿದ್ದೀರೋ ಅಥವಾ ನಾವೇ ಮಾಡಿದ್ದೇವೆಯೋ ಅದು ಪ್ರಶ್ನೆ ಇಲ್ಲಿ ಮುಖ್ಯವಾದುದು ಅಲ್ಲ. ಒಂದು ತಪ್ಪು ನೂರಾರು ತಪ್ಪುಗಳಿಗೆ ಎಡೆ ಮಾಡಿ ಕೊಟ್ಟು, ನಾವು ಪ್ರಜಾಪ್ರಭುತ್ವ , ನೈತಿಕತೆ, ನಿಯಮಾವಳಿಗಳು ಎಂದು ಮಾತನಾಡತಕ್ಕಂಥದ್ದು ಏನಿದೆ, ಇದು ಈ ತರಹದ ವಿಕೃತವಾದ ವ್ಯವಸ್ಥೆಗೆ ಎಡೆ ಮಾಡಿ ಕೊಟ್ಟಿದೆ. ಅವತ್ತಿನ ಕಾರಣಕ್ಕಾಗಿ ನಾವು ಚುನಾವಣೆ ಮಾಡಿಲ್ಲ ತಪ್ಪಾಗಿದೆ, ನೀವೂ ಹಾಗೆ ಮಾಡಬೇಡಿ ಎಂದು ನಮಗೆ ಉಪದೇಶ ಮಾಡಿದರು. ಚುನಾವಣೆ ಮಾಡುವುದಕ್ಕೆ ನಾವು ಯಾರೂ ತಯಾರಿಲ್ಲ ಎನ್ನತಕ್ಕಂತಹ ಮಾತಿಲ್ಲ. ಚುನಾವಣೆ ಮಾಡುತ್ತೇವೆಂದು ಹೇಳಿದ್ದೇವೆ. ಆದರೆ ನಮ್ಮ ಹಿಂದೆ ಇದ್ದಂತಹ ಒಂದು ಸಂಪ್ರದಾಯ ನೋಡಿ, ಯಾರಿಗಾದರೂ ಚುನಾವಣೆಗಳನ್ನು ನಮ್ಮ ಮೆಜಾರಿಟಿ ಇದ್ದಂತಹ ಸಂದರ್ಭದಲ್ಲಿ ಮಾಡಬೇಕೆನ್ನುವ ಕಾರಣಕ್ಕಾಗಿ ತಾವು ಹೇಗೆ ಚುನಾವಣೆಗಳನ್ನು ಮುಂದಕ್ಕೆ ಹಾಕಿದಿರಿ, ಅದೇ ರೀತಿಯಾಗಿ ಇಂದು ಕೂಡ ಮುಂದಕ್ಕೆ ಹಾಕಿದ್ದೇವೆ. ಆದರೆ ಅದನ್ನು ಕೂಡ ನಾವು ಚುನಾವಣೆ ನಡೆಸಬೇಕೆನ್ನುವ ಕಾರಣಕ್ಕಾಗಿ ಪ್ರಸ್ತಾಪ ಮಾಡಿ ಕೆಲವು ಸಲಹೆಗಳನ್ನು ಕೊಟ್ಟಿದ್ದೇವೆ. ಆ ಸಲಹೆ ತಮಗೆ ಗ್ರಹಿಸುವುದಿಲ್ಲ ಅಥವಾ ತಮಗೆ ಒಪ್ಪಿಗೆ ಆಗಲಿಲ್ಲ ಎಂದು ಭಾವಿಸಿಕೊಳ್ಳೋಣ.

ಒಪ್ಪಿಗೆ ಆಗದೆ ಇದ್ದಂತಹ ಸಂದರ್ಭದಲ್ಲಿ ನಿಮ್ಮ ಮುಂದೆ ಇರತಕ್ಕಂತಹ ಸಮಸ್ಯೆ ಏನು, ಅಲ್ಲಿಯ ಸಮಸ್ಯೆಯನ್ನು ಆ ಸದನ ಬಗೆಹರಿಸಿಕೊಳ್ಳಬೇಕು. ಆ ಸದನದ ಕಾರ್ಯಕಲಾಪಗಳನ್ನು ಈ ಸದನದಲ್ಲಿ ತರತಕ್ಕಂಥದ್ದು ನಿಯಮಾವಳಿಗಳ ಪ್ರಕಾರ ಎಷ್ಟರ ಮಟ್ಟಿಗೆ ಸಾಧುವಾದುದು? ನಾವೆಲ್ಲಾ ಇತ್ತೀಚೆಗೆ ಬಂದಂತಹವರು. ನಿಮ್ಮಿಬ್ಬರ ಅನುಭವದ ಮುಂದೆ ನಾವೇನೂ ಅಲ್ಲ. ಅನೇಕರನ್ನು ತಾವು ನೋಡಿದ್ದೀರಿ. ಆ ಸದನದ ಕಾರ್ಯಕಲಾಪಗಳನ್ನು ಇಲ್ಲಿಗೆ ತಂದು ನಿಮಗೆ ನಾವು ಪದೇ ಪದೇ ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾದುದು ಅಲ್ಲ. ನಾವೇ ನಿಯಮಾವಳಿಗಳನ್ನು ಮಾಡಿಕೊಂಡಿದ್ದೇವೆ, ನಿಯಮ 324ರ ಕೆಳಗೆ ನಾವು ಹೇಗೆ ನಡೆದುಕೊಳ್ಳಬೇಕೆಂದು ಹೇಳಿದೆ. ಅಲ್ಲಿ

> Whilst the House is sitting a member–
>
> (ii) shall not interrupt any member while speaking by disorderly expression or noises or in any other disorderly manner:
>
> (vii) shall keep to his usual seat while addressing the House;
>
> (viii) shall maintain silence when not speaking in the House;
>
> (xii) shall not shout slogans in the House;

ನೀವು ನಮ್ಮ ಕಾರಣಕ್ಕಾಗಿ ಪ್ರತಿಭಟನೆ ಮಾಡಬೇಕು, ಮಾಡಿ. ಅನ್ಯಾಯವಾಗಿದೆ ಎಂದು ಭಾವಿಸಿಕೊಂಡಿದ್ದೀರಿ. ಆದರೆ ಅದೇ ಮೇಲ್ಮನೆಯ ವಿಚಾರವನ್ನು ಇಲ್ಲಿ ಪ್ರಸ್ತಾಪ ಮಾಡುವುದಕ್ಕಾಗುವುದಿಲ್ಲವೆನ್ನುವ ಅನೇಕ ತೀರ್ಮಾನಗಳಿವೆ. ಅದಕ್ಕೆ ನಿಯಮಾವಳಿಗಳು ಇವೆ. ಒಂದು ವೇಳೆ ಇಲ್ಲಿ ನಿಮ್ಮ ಪ್ರತಿಭಟನೆ ವ್ಯಕ್ತ ಮಾಡಬೇಕಾಗಿದ್ದರೆ ತಾವು ಬಾವಿಯಲ್ಲಿ ಬೀಳತಕ್ಕಂಥದ್ದು, ಧರಣಿ ಮಾಡತಕ್ಕಂಥದ್ದು ಸಾಧುವಾದುದಲ್ಲ. ಧರಣಿ ಮಾಡತಕ್ಕಂತಹ ಸಂದರ್ಭದಲ್ಲಿ ಇಲ್ಲಿ ಬಂದಿರತಕ್ಕಂತಹ ಸಂದರ್ಭದಲ್ಲಿ ತಾವು ಎಲ್ಲಾ ನಿಯಮಾವಳಿಗಳನ್ನು ಗಾಳಿಗೆ ತೂರಿ, ತಾವು ಘೋಷಣೆಗಳನ್ನು ಕೂಗುತ್ತಾ ನಿಮ್ಮ ನಿಮ್ಮ ಸ್ಥಾನಗಳಲ್ಲಿ ಹೋಗಿ ಕುಳಿತುಕೊಳ್ಳದೆ ಮಾತನಾಡುತ್ತಿದ್ದರೆ, ಬೇರೆ ಸದಸ್ಯರಿಗೆ ತಾವು ಅವಕಾಶ ಕೊಡದೆ ತಾವು ಅವರನ್ನು ವಂಚಿತರನ್ನಾಗಿ ಮಾಡುತ್ತೀರಿ. ನಿಮ್ಮ ಅಭಿಪ್ರಾಯದಂತೆ ನಮ್ಮ ಅಭಿಪ್ರಾಯ ಇರಬೇಕೆಂದೇನೂ ಇಲ್ಲ. ನಮ್ಮಿಬ್ಬರ ಅಭಿಪ್ರಾಯದಂತೆ ಜನತಾದಳ(ಯು)ದವರ ಅಭಿಪ್ರಾಯ ಅಥವಾ RPI ದವರ ಅಭಿಪ್ರಾಯ

ಇರಬೇಕೆಂದೇನೂ ಇಲ್ಲ. ಆದರೆ ನಾವು RPI ಅಭಿಪ್ರಾಯ, CPI(M) ಅಭಿಪ್ರಾಯ ಮತ್ತು ವಾಟಾಳ್ ಪಕ್ಷದವರ ಅಭಿಪ್ರಾಯವನ್ನು ಕೇಳುವುದಕ್ಕೆ ಕಾತುರರಾಗಿದ್ದೇವೆ. ಅವರ ಅಧಿಕಾರವನ್ನು ಕಸಿದುಕೊಳ್ಳುವಂತಹ ರೀತಿಯಲ್ಲಿ ನೀವು ಇಲ್ಲಿ ಬಾವಿಯಲ್ಲಿ ಕೂತು ಇಲ್ಲದ ಗದ್ದಲವನ್ನು ಎಬ್ಬಿಸಿ ಘೋಷಣೆಗಳನ್ನು ಕೂಗುವುದರಿಂದ ಬೇರೆ ಸದಸ್ಯರ ಹಕ್ಕುಗಳನ್ನು ಮೊಟಕುಗೊಳಿಸುವುದಲ್ಲದೆ ಅವರನ್ನು ಭಾಷಣ ಮಾಡುವುದರಿಂದ ವಂಚಿತರಾಗಿ ಮಾಡುತ್ತೀರಿ. ಬಹಳ ಘೋರವಾದ ಅನ್ಯಾಯವನ್ನು ಬೇರೆ ಸದಸ್ಯರುಗಳಿಗೆ ಮಾಡಿ ಕೊಡುವುದರ ಜೊತೆಗೆ ನಮ್ಮ ನಡವಳಿಕೆಗಳು ಭೂಷಣಪ್ರಾಯವಾಗಿರತಕ್ಕಂತಹ ನಡವಳಿಕೆಗಳು ಅಲ್ಲ. ಆ ಕಾರಣಕ್ಕಾಗಿ ನಾವು ನಿಯಮ 324ರ ಕೆಳಗೆ ಕೊನೇ ಪಕ್ಷ ನಾವು ವಿಷಾದವನ್ನು ವ್ಯಕ್ತ ಪಡಿಸುತ್ತೇವೆ ಎಂದು ಹೇಳತಕ್ಕಂಥದ್ದು ಒಂದು ಬರಿ ಮಾಮೂಲಿ ಆಗಿರತಕ್ಕಂತಹ ಒಂದು ಮಾತಿನ ವರಸೆ ಆಗಬಾರದು. ನಾವು ಈ ರೀತಿ ನಡೆದುಕೊಂಡಿರತಕ್ಕಂಥದ್ದಕ್ಕೆ ಇತಿಶ್ರೀ ಹೇಳೋಣ. ನಾವು ನೀವೂ ಕೂಡ. ನಾವು ತಪ್ಪು ಮಾಡಿಲ್ಲವೆಂದು ಹೇಳುವುದಿಲ್ಲ. ನಾವು ಇಲ್ಲಿ ಸದನದಲ್ಲಿ ಇದ್ದೇ ಇರುತ್ತೇವೆ. ಹೇಳುತ್ತಿರುತ್ತೇವೆ. ಆದರೆ ಸದನದಲ್ಲಿ ನಾವೂ ನೀವೂ ಎಲ್ಲರೂ ಕಲೆತು ಸದನದಲ್ಲಿ Business Advisory Committee ಕರೆಯತಕ್ಕಂಥದ್ದಾಗಲಿ, ಮಾನ್ಯ ಸಭಾಧ್ಯಕ್ಷರ ಛೇಂಬರ್‌ನಲ್ಲಿ ಕುಳಿತು ಮಾತನಾಡತಕ್ಕಂಥದ್ದು ಏನಾಗಿದೆ ಎಂದರೆ, ಅನುಭವ ಇರತಕ್ಕಂತಹ ಮಾತನ್ನು ನಾವು ಕೇಳಿ ನಾವು ನಮ್ಮಲ್ಲಿರತಕ್ಕಂಥವರನ್ನು ನಿಯಂತ್ರಿಸುವುದಕ್ಕೆ ಸಾಧ್ಯವಾಗಲಾರದ ಸ್ಥಿತಿ ನಿರ್ಮಾಣವಾಗುತ್ತದೆ. ನಾವು ನಮ್ಮಲ್ಲಿರತಕ್ಕಂಥವರನ್ನು ನಿಯಂತ್ರಿಸುವುದಕ್ಕೆ ಸಾಧ್ಯವಾಗಲಾರದಂಥ ಪರಿಸ್ಥಿತಿಯೂ ಕೂಡ ಸೃಷ್ಟಿಯಾಗುತ್ತದೆ, ಅದನ್ನು ಇಲ್ಲವೆಂದು ನಾನು ಹೇಳುವುದಿಲ್ಲ. ಆದರೆ ನಾವು ನಮ್ಮ ಬಗ್ಗೆಯೇ ನಾವು ನಿಯಂತ್ರಣವನ್ನು ಮಾಡಿಕೊಳ್ಳದಿದ್ದರೆ ಈ ಎಲ್ಲಾ ತೊಂದರೆಗಳಿಗೆ ಕಾರಣವಾಗುತ್ತದೆ. ನಿಮಗೆಲ್ಲರಿಗೂ ಇದು ಗೊತ್ತಿದೆ, ಮೇಲ್ಮನೆಯ ವಿಚಾರವನ್ನು ಇಲ್ಲಿ ಚರ್ಚೆ ಮಾಡುವುದಕ್ಕಾಗುವುದಿಲ್ಲವೆಂದು. ಒಂದು ವೇಳೆ ಇಲ್ಲಿ ಚರ್ಚೆ ಮಾಡಬಹುದು, ಈ ಮನೆಗೆ ಬಂದಿರತಕ್ಕಂಥ ಮೆಸೇಜ್ ಯಾವುದಾದರೂ ಇದ್ದರೂ ಕೂಡ ಅದು ಮೇಲ್ಮನೆಗೆ ಕಳುಹಿಸಿದ್ದಾರೆ. ನಮ್ಮ Constitution of India ದಲ್ಲಿ 175 ರಲ್ಲಿ Right of Governor to address and send messages to the House or Houses ಎನ್ನತಕ್ಕಂಥದ್ದನ್ನು ಹೇಳಲಾಗಿದೆ. ಆ ಆರ್ಟಿಕಲ್ 175(2)ರಲ್ಲಿ ಏನು ಹೇಳಲಾಗಿದೆಯೆಂದರೆ, "The Governor may send messages to the House or Houses of the Legislature of the State, whether with

respect to a Bill then pending in the legislature or otherwise, and Houses to which any message is so sent shall with all convenience despatch consider any matter required by the message be taken into consideration." ಇಲ್ಲಿ ಕಳುಹಿಸಿರತಕ್ಕಂಥ ಮೆಸೇಜ್ ವಿಧಾನ ಪರಿಷತ್ತಿಗೆ ಕಳುಹಿಸಿರತಕ್ಕಂಥ ಮೆಸೇಜ್ ಆಗಿದೆ. ಆ ಮೆಸೇಜ್‌ನ್ನು ನಮ್ಮ ಈ ಸದನಕ್ಕೆ ಕಳುಹಿಸಿದ್ದಾರೆ. ಅದೂ House or Houses ಎನ್ನತಕ್ಕಂಥದ್ದು ಇದೆ. ಆ ಮನೆಗೆ ಕಳುಹಿಸಿರತಕ್ಕಂಥದ್ದರ ಬಗ್ಗೆ ಈ ಮನೆಯಲ್ಲಿ ಚರ್ಚೆ ಮಾಡುವುದಕ್ಕೆ ಆಗುವುದಿಲ್ಲ. ಒಂದು ವೇಳೆ ಚರ್ಚೆ ಮಾಡುವುದಕ್ಕೆ ಆದರೂ ಕೂಡ ಅದರ ಮೇಲೆ ನಿರ್ಣಯವನ್ನು ತೆಗೆದುಕೊಳ್ಳಬೇಕಾದುದು ಆ ಮನೆ. ನಾವು ಈ ಮನೆಯವರು ನಿರ್ಣಯವನ್ನು ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:– ಅಲ್ಲಿ ಯಾರಿಗೆ ಬರುತ್ತದೆ? ಏನು ಮಾನ್ಯ ತಿಪ್ಪಣ್ಣನವರಿಗೆ ಬರುತ್ತದೆಯೆ?

ಶ್ರೀ ಎಂ.ಪಿ. ಪ್ರಕಾಶ್:– ವಿಧಾನ ಪರಿಷತ್ತಿಗೆ ಬರುತ್ತದೆ. ತಿಪ್ಪಣ್ಣನವರಿಗಲ್ಲ, ಸದನಕ್ಕೆ ಬರುತ್ತದೆ. ಮಾನ್ಯ ತಿಪ್ಪಣ್ಣನವರಿಗೆ ಬರುವುದಿಲ್ಲ. ಸದನಕ್ಕೆ ಬರುತ್ತದೆ. It has become the property of that House. ಆ ಕಾರಣಕ್ಕಾಗಿ ಆ ಮನೆಗೆ ಅದು ಹೋಗಿದೆ. ಆ ಮನೆಯವರು ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳಬೇಕಾದುದು. ಆದಕಾರಣ ರಾಜ್ಯಾಂಗದ ಅನುಚ್ಛೇದ 175(2) ರ ಕೆಳಗೆ ಈ ಮನೆಯಲ್ಲಿ ಅದರ ಬಗ್ಗೆ ಚರ್ಚೆ ಮಾಡುವುದಕ್ಕೆ ಬರುವುದಿಲ್ಲ. ಒಂದು ವೇಳೆ ಚರ್ಚೆ ಮಾಡಿದರೂ ಅದರ ಬಗ್ಗೆ ನಿರ್ಣಯ ತೆಗೆದುಕೊಳ್ಳುವವರು ಯಾರು ಅಲ್ಲಿ ಏನು ಹೇಳುತ್ತಾರೆ ಎನ್ನುವುದನ್ನು ಇನ್ನೊಂದು ಸಲ ಮಾನ್ಯ ಹಿರಿಯರಿಗೆ ನಾನು ಹೇಳುತ್ತಿದ್ದೇನೆ.

ಶ್ರೀ ಕೃಷ್ಣ ಬೈರೇಗೌಡ:– ಒಂದು ನಿಮಿಷ, ಈಗ ಚರ್ಚೆ ಮಾಡತಕ್ಕಂಥ ಸಂದರ್ಭವಲ್ಲ. ನಾವು ಕೇಳುತ್ತಿರುವುದು, ಅದರ ಬಗ್ಗೆ ತಮ್ಮ ನಿಲುವೇನು? ಅದರ ಬಗ್ಗೆ ತಮ್ಮ ನಿಲುವೇನು ಎಂಬ ಬಗ್ಗೆ ತಾವು ಸ್ಪಷ್ಟೀಕರಿಸಬೇಕು.

ಶ್ರೀ ಎಂ.ಪಿ. ಪ್ರಕಾಶ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಈ ಪ್ರಶ್ನೆಯನ್ನು ಎತ್ತಿದ್ದಾರೆ. ಯಾವುದಾದರೂ ಒಂದು ವಿಚಾರದಲ್ಲಿ ಒಂದು ನಿಲುವನ್ನು ತೆಗೆದುಕೊಳ್ಳಬೇಕಾಗಿದ್ದರೆ ಆ ನಿಲುವನ್ನು ತೆಗೆದುಕೊಳ್ಳತಕ್ಕಂಥ ಅಧಿಕಾರ ಅದಕ್ಕೆ ಇರಬೇಕು. ಈ ಮನೆ ಆ ಮನೆಯ ವಿಚಾರದಲ್ಲಿ ನಿರ್ಧಾರ ತೆಗೆದುಕೊಳ್ಳುವುದಕ್ಕೆ ಬರುವುದಿಲ್ಲ. ಈಗ ಗಳಿಸಿಕೊಟ್ಟಿರತಕ್ಕಂಥ ವಾದವೇನಿದೆ ಇಲ್ಲಿ ಸಂಪೂರ್ಣವಾಗಿ ನಮ್ಮ ಸಂವಿಧಾನ ಇಲ್ಲಿ ಹೇಳುತ್ತದೆ. The Governor

may send a message to the House or Houses of the Legislature of the State, whether with respect to a Bill then pending in the legislature or otherwise, and Houses to which any message is so sent shall with all convenience dispatch, consider any matter required by the message to be taken into consideration. ನಾವು ನಿಮಗೆ ಹೇಳುತ್ತಿದ್ದೇವೆ, ಮೆಸೇಜ್ ಈ ಸದನಕ್ಕೆ ಬಂದಿಲ್ಲ, ಬಂದಿರತಕ್ಕಂಥದ್ದು ವಿಧಾನಪರಿಷತ್ತಿಗೆ. ವಿಧಾನ ಪರಿಷತ್ತಿನವರು ತತ್‌ಕ್ಷಣದಲ್ಲಿ ಆ ಒಂದು ಸಂದೇಶದ ಮೇರೆಗೆ ನಿರ್ಣಯ ತೆಗೆದುಕೊಳ್ಳತಕ್ಕಂಥ ಸಾರ್ವಭೌಮ ಅಧಿಕಾರವನ್ನು ಹೊಂದಿರುತ್ತಾರೆ. ಅಂದರೆ ಯಾವ ಸದನಕ್ಕೆ ಸಂದೇಶ ಹೋಗಿರುತ್ತದೋ ಆ ಸದನ, ಅದರ ಮೇಲೆ ನಿರ್ಣಯ ಮಾಡಬೇಕೇ ವಿನಾ: ಈ ಕೆಳಮನೆ ಮೇಲ್ಮನೆ ವಿಚಾರದಲ್ಲಿ ನಿರ್ಣಯ ಮಾಡುವುದಕ್ಕೆ ಬರುವುದಿಲ್ಲ. ಅದು ಆದನಂತರ ತಮ್ಮ ಮುಂದಿರತಕ್ಕಂಥದ್ದು ಯಾವುದು, ಆಮೇಲೆ ಯಾವುದೇ ಸಂದರ್ಭದಲ್ಲಿಯೂ ಕೂಡ ಕೆಲವು ವಿಚಾರಗಳಲ್ಲಿ ನಾವೇ ನಿಯಮಾವಳಿಗಳನ್ನು ರಚನೆ ಮಾಡಿಕೊಂಡಿದ್ದೇವೆ. ಆ ರೀತಿ ನಿಯಮಾವಳಿಗಳನ್ನು ರಚನೆ ಮಾಡಿದಾಗ ಇಲ್ಲಿ ಸದಾ ಕಾಲ ನಾವು ಅವರನ್ನು ಉದ್ದೇಶಿಸತಕ್ಕಂಥದ್ದು, ಯಾರ ಹೆಸರನ್ನು ಹೇಳಬಾರದು ಎಂದು ಹೇಳಿ ನಿಯಮ ಇದೆಯೋ, ಈಗ ಗವರ್ನರ್ ಹೆಸರುಗಳನ್ನು ಬಳಸಿಕೊಳ್ಳತಕ್ಕಂಥದ್ದನ್ನು ನಾವು ಮಾಡಬಾರದು. ಅವರು ಅಕಸ್ಮಾತ್ ನಮಗೆ ಸಮರ್ಥನೀಯವಾದ ಕಾರಣವಿತ್ತು ಎನ್ನುವುದಾದರೆ, ಯಾವ ಕಾರಣಗಳಿಗಾಗಿ ನಾವು ಹೇಳಿದ್ದೇವೆ ಅದಕ್ಕೆ ನಾವು ಗವರ್ನರ್ ಹೆಸರನ್ನು ಬಳಸಿಕೊಳ್ಳುವುದಕ್ಕೆ ಬರುವುದಿಲ್ಲ. ನಮ್ಮದೇ ಆಗಿರತಕ್ಕಂಥ ನಿಯಮಾವಳಿಗಳು ಇವೆ. ಆರ್ಟಿಕಲ್ 370ರಲ್ಲಿ Rules to be observed while speaking, ಅದರೊಳಗೆ 6ನೆಯದು Using Governor's name for the purpose of commencing a debate ಇದೆ. ಅದನ್ನು ತಮ್ಮ ಅಭಿಪ್ರಾಯಗಳನ್ನು ಸಮರ್ಥಿಸಿಕೊಳ್ಳುವುದಕ್ಕೆ ಗವರ್ನರ್‌ರ ಉದಾಹರಣೆಗಳನ್ನು ತಂದು ಹೇಳಿ ನಿಯಮ ಬಾಹಿರ ಆಗಿರತಕ್ಕಂಥದ್ದು ಇದೆ. ಇಲ್ಲಿ ಹೇಳಬೇಕಾದುದು ಏನೆಂದರೆ, ಒಂದನೆಯದಾಗಿ ಆ ಮನೆಯಲ್ಲಿ ಮಾಡಬೇಕಾದಂಥ ಕೆಲಸ. ಅಂದರೆ ಮೇಲ್ಮನೆಯಲ್ಲಿ ನಿರ್ಣಯ ತೆಗೆದುಕೊಳ್ಳಬೇಕಾಗಿರತಕ್ಕಂಥದ್ದು. ಹೀಗಿರುವಾಗ ಆ ಬಗ್ಗೆ ಅನೇಕ ನಿಯಮಾವಳಿಗಳೂ ಕೂಡ ನಮ್ಮಲ್ಲಿಯೇ ಇರುವಂಥದ್ದು ಇದೆ. ಆ ನಿಯಮಾವಳಿಗಳ ಪ್ರಕಾರ ಅನೇಕರು ನಮ್ಮಲ್ಲಿ parliamentary etiquette

ವಿಚಾರದಲ್ಲಿ, ಮತ್ತೊಂದರಲ್ಲಿ ನಮ್ಮವರೇ ನಿರ್ಧಾರ ಕೊಟ್ಟಿರತಕ್ಕಂಥದ್ದು ಇದೆ. ಇಲ್ಲಿ "it is not proper to demonstrate in the House against the Government The dignity and decorum of the House have to be kept up and no member shall make remarks which are not in keeping with the dignity and decorum of the House", ಎಂದು ಇದೆ. ಆದರೆ ಇಲ್ಲಿ ಆಗಿರತಕ್ಕಂಥದ್ದು ಏನು? ಮುಂದಿನ ಸಾಲಿನಲ್ಲಿ ಕುಳಿತುಕೊಂಡಿರತಕ್ಕಂಥ ಅನೇಕ ಹಿರಿಯರಿಗೆ ಹಾಗೂ ಹಿಂದಿನ ಸಾಲಿನಲ್ಲಿ ಕುಳಿತಿರತಕ್ಕಂಥ ಸದಸ್ಯರಿಗೂ ಕೂಡ ಗೊತ್ತಿದೆ, ನಾವು ಪೋಡಿಯಂಗೆ ಹೋಗಿ, ಯಾರನ್ನಾದರೂ ಕೂಡ ಗಲಾಟೆ ಮಾಡಿ ಅವರ ಮೇಲೆ ದಬ್ಬಾಳಿಕೆ ಮಾಡುವಂಥ ರೀತಿಯಲ್ಲಿ ಆತನನ್ನು ಸುತ್ತುವರಿದು, ಅಂದರೆ ಸ್ಪೀಕರ್ ಅವರನ್ನು ಸುತ್ತುವರಿದು ಅಲ್ಲಿರತಕ್ಕಂಥ ಮೈಕ್‌ನ್ನು ಕಿತ್ತು ಕೆಳಗೆ ಹಾಕಿರತಕ್ಕಂಥದ್ದು.. ಒಮ್ಮೆ ಭಾವೋದ್ವೇಗಕ್ಕೆ ಒಳಗಾಗಿ ಕನ್ನಡದ ವಿಷಯ ಬಂದಾಗ ಗೋಪಾಲಗೌಡರು ಮೈಕ್‌ನ್ನು ಮುರಿದಿರತಕ್ಕಂಥ ಪ್ರಸಂಗ, ಬಿಲ್‌ಗಳನ್ನು ತಂದಾಗ ಇಂಥದ್ದು ಆಗಿರತಕ್ಕಂಥದ್ದನ್ನು ಹೇಳಿದ್ದಾರೆ. ನಾನು ಏನಾದರೂ ಅಕಸ್ಮಾತ್ ಹೇಳುವುದಕ್ಕೆ ಹೋದರೆ ನೀವು ಸಿಟ್ಟಿಗೆ ಬರುವುದಿಲ್ಲ ಎನ್ನುವ ಕಾರಣಕ್ಕಾಗಿಯೇ ನಾನು ಹೇಳಬೇಕಾಗುತ್ತದೆ. ಈ ನಾಲ್ಕು ಪ್ರಸಂಗ ನಡೆದಿರತಕ್ಕಂಥ ಉದಾಹರಣೆಯನ್ನು ಹೇಳಿದಂಥ ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು,,,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾನು ಯಾವಾಗ ಇಲ್ಲಿ ಹೇಳಿದೆ?

ಶ್ರೀ ಎಂ.ಪಿ. ಪ್ರಕಾಶ್:- ಹೊರಗಡೆಯಲ್ಲಿ ಪ್ರೆಸ್‌ನವರಿಗೆ ತಾವು ಹೇಳಿದ್ದೀರಿ. ಆಗ ಅಲ್ಲಿ ಹೇಳುವಾಗ, ಇಂಥ ಉದಾಹರಣೆಗಳೂ ಕೂಡ ನಡೆದಿವೆ, ಹಿಂದೆ ಕೂಡ ಇಲ್ಲಿ ಗೋಪಾಲಗೌಡರು ಮೈಕ್ ಮುರಿದಂಥ ಪ್ರಸಂಗ ನಡೆದಿತ್ತು ಎಂಬುದನ್ನು ತಾವು ಹೇಳಿದ್ದೀರಿ. ಅದನ್ನು ಹೇಳಿದಾಗ ನಾನು ಹೇಳುವುದಿಷ್ಟೆ, ಮಾನ್ಯ ವೀರೇಂದ್ರ ಪಾಟೀಲ್‌ರವರನ್ನು ಶಾಸಕಾಂಗ ಸಭೆಯಲ್ಲಿ ಕತ್ತು ಹಿಡಿದುಕೊಂಡು ಹೊಡೆಯುವುದಕ್ಕೆ ಹೋಗಿ "ಯಾವ ಸೀಮೆ ಮುಖ್ಯಮಂತ್ರಿ" ಎಂದಿರತಕ್ಕಂಥ ಉದಾಹರಣೆಯನ್ನೂ ಕೂಡ ತಾವು ಹೇಳಬಹುದಾಗಿತ್ತು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ:- ನಾವು ಆ ರೀತಿ ಹೇಳಿಯೇ ಇಲ್ಲ. ಇಂಥವನ್ನೆಲ್ಲಾ ಸದನದಲ್ಲಿ ಹೇಳಿ ನೀವು ಸಿಂಪತಿ ಗಳಿಸಬೇಡಿ. ನೀವು ಮಾಡಿದ್ದು, ಹೆಗಡೆಯ ಬೆನ್ನು ಹತ್ತಿ ಹೊರಗೆ ಹಾಕಿದವರು ನೀವು,

ಶ್ರೀ ಎಂ.ಪಿ. ಪ್ರಕಾಶ್:– ಆಯಿತು, ನಾನು ಹೇಳಿದಂಥದ್ದು ನಡೆದಿಲ್ಲವೆಂದು ನೀವು ಹೇಳುವುದಾದರೆ ನಾನು ಹೇಳಿದಂಥ ಮಾತುಗಳನ್ನು ವಾಪಸ್ ತೆಗೆದುಕೊಳ್ಳುತ್ತೇನೆ. ಆದರೆ ಒಬ್ಬ ಹಿಂದುಳಿದ ಜನಾಂಗದ ಮುಖ್ಯಮಂತ್ರಿಯನ್ನು tolerate ಮಾಡಲಾಗದೇ ಪಾಪ ಅವರ ಅಂಗಿಯನ್ನೇ ಹರಿದರು.

(ಗೊಂದಲ)

ಶ್ರೀ ಎನ್. ಧರ್ಮಸಿಂಗ್(ವಿರೋಧ ಪಕ್ಷದ ನಾಯಕರು):– ರಾಮಕೃಷ್ಣಹೆಗಡೆಯವರಿಗೆ ಏನಾಯಿತು ಹೇಳಿ.

ಶ್ರೀ ಎಂ.ಪಿ.ಪ್ರಕಾಶ್:– ರಾಮಕೃಷ್ಣಹೆಗಡೆಯವರಿಗೆ ಏನಾಯಿತು ಎನ್ನುವುದರ ಬಗ್ಗೆ ಮುಂದೆ ನಿಮ್ಮ ಪಕ್ಷದ ಮಾನ್ಯ ಸದಸ್ಯರಾದಂಥವರು ಅಲ್ಲಿಂದ ಇಲ್ಲಿಗೆ ಬಂದು ರಾಮಕೃಷ್ಣ ಹೆಗಡೆಯವರು ಕುಳಿತಿರತಕ್ಕಂಥ ಜಾಗದಲ್ಲಿದ್ದ ಮೈಕ್‌ಗೆ ತೊಂದರೆ ಮಾಡಿದರು. ಆದರೆ ಯಾವ ಸಂದರ್ಭದಲ್ಲಿಯೂ ಕೂಡ ಹಿಂದೆ ಸದನದ ಮೇಲೆ ಹೋಗಿ ಸ್ಪೀಕರ್‌ರವರನ್ನು ಸುತ್ತುವರಿದಿರತಕ್ಕಂಥದ್ದಾಗಲಿ, ನೀವು ಈ ಕುರ್ಚಿಯನ್ನು ಬಿಟ್ಟು ಎದ್ದುಹೋಗಿ ಎಂದು ಹೇಳಿರತಕ್ಕಂಥದ್ದಾಗಲಿ ನಡೆದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:–ಮಾನ್ಯ ಪ್ರಕಾಶ್‌ರವರೆ, ಒಂದು ನಿಮಿಷ, ಕೆಲವು ವಿಚಾರಗಳನ್ನು ಹೇಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್:– ಹೇಳಿ. We are for a debate. ಗಲಾಟೆ ಮಾಡತಕ್ಕಂಥ ಅಗತ್ಯವಿರುವುದಿಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್:– ಮಾನ್ಯ ಅಧ್ಯಕ್ಷರೆ, ಗಲಾಟೆ ಮಾಡತಕ್ಕಂಥ ಅಗತ್ಯ ನಮಗೂ ಇರುವುದಿಲ್ಲ. ಈ ಸದನ ಪ್ರಾರಂಭವಾದ ಮೇಲೆ ಕರ್ನಾಟಕದಲ್ಲಿ ಹಳೆ ಮೈಸೂರಿನಲ್ಲಿ ಮೊದಲನೆಯ ಬಾರಿಗೆ ವಿಕೋಪಕ್ಕೆ ಹೋಗತಕ್ಕಂಥ ಘಟನೆ ನಡೆದದ್ದು 1967ನೆಯ ಇಸವಿಯ ನಂತರ 1968 ನೆಯ ಇಸವಿಯ ಮಧ್ಯದಲ್ಲಿ. ಸನ್ಮಾನ್ಯ ವಾಟಾಳ್ ನಾಗರಾಜ್‌ರವರು ಈ ಸದನದ ಸದಸ್ಯರಾಗಿದ್ದರು, ಎಸ್.ಡಿ. ಕೊತಾವಳೆಯವರು ಅಧ್ಯಕ್ಷರಾಗಿದ್ದರು. ಯಾವ ವಿಷಯಕ್ಕೆ ಎನ್ನುವುದನ್ನು ಮರೆತಿದ್ದೇನೆ, ಹೌಸ್‌ನಲ್ಲಿ ವಿಪರೀತ ಗಲಾಟೆಯಾಗಿ ದಿವಂಗತ ದಯಾನಂದ ಸಾಗರ್‌ರವರು, ಅಜೀಜ್‌ಸೇಠ್‌ರವರು, ರಾಯಚೂರಿನ ನಾಗಪ್ಪನವರು ಮತ್ತು ಉಳಿದ ಎಲ್ಲ ವಿರೋಧ ಪಕ್ಷದವರು ಅಲ್ಲಿಯವರೆವಿಗೆ ಹೋಗುತ್ತಾರೆ, ಅಜೀಜ್‌ಸೇಠ್‌ರವರು ಛೇರ್‌ನಲ್ಲಿಯೇ ಕುಳಿತುಬಿಡುತ್ತಾರೆ. ಆಮೇಲೆ ಅವರನ್ನು ಸಿದ್ದವೀರಪ್ಪನವರು ಮತ್ತು ಇನ್ನೂ ಕೆಲವರು ಹೋಗಿ ಇದು

ಸರಿಯಲ್ಲವೆಂದು ಹೇಳಿ ಅವರನ್ನು ಕರೆದುಕೊಂಡು ಬರುತ್ತಾರೆ. ಅದು ಮೊದಲನೆಯದಾಗಿ ನಡೆದ ಘಟನೆ. ಅದು ಆದನಂತರ 1978ರಿಂದ 1980ರ ಅವಧಿಯಲ್ಲಿ ದಿವಂಗತ ಪಿ. ವೆಂಕಟರಮಣನವರು ಅಧ್ಯಕ್ಷರಾಗಿ ಅವರು ಅಲ್ಲಿ ಕುಳಿತಿದ್ದರು. ಮಾನ್ಯ ಅರಸುರವರು ಮುಖ್ಯಮಂತ್ರಿಗಳಾಗಿದ್ದರು. Delhi Special Police Establishment Act ಪ್ರಕಾರ ಕರ್ನಾಟಕ ಸರ್ಕಾರ ಏನು ದೆಹಲಿಯವರಿಗೆ ಪೋಲಿಸ್‌ನವರಿಗೆ ಅನುಮತಿ ಕೊಟ್ಟಿರುತ್ತಾರೋ ಅದನ್ನು ವಿತ್‌ಡ್ರಾ ಮಾಡಿಕೊಳ್ಳುವುದಕ್ಕೆ ಇಲ್ಲಿ ಬಿಲ್ ಇಂಟ್ರಡ್ಯೂಸ್ ಮಾಡಿದ್ದರು. ಆಗ ಜನತಾ ಪಕ್ಷ ವಿರೋಧ ಪಕ್ಷವಾಗಿತ್ತು. ಬಹು ದೊಡ್ಡ ವಿರೋಧ ಪಕ್ಷ ಇತ್ತು. ಶ್ರೀಮಾನ್ ಬಿ.ವಿ. ರಾಮಚಂದ್ರರೆಡ್ಡಿಯವರು ವರ್ತೂರಿನಿಂದ ಆರಿಸಿ ಬಂದಿದ್ದವರಿದ್ದರು. ಮೈಕೇಲ್ ಫರ್ನಾಂಡೀಸ್‌ರವರು, ದಿವಂಗತ ಜೀವರಾಜ್ ಆಳ್ವರವರು ಹಾಗೂ ಸಿ.ಎಂ. ಇಬ್ರಾಹಿಂ ಅವರು ಅವತ್ತು ಜನತಾ ಪಕ್ಷದಲ್ಲಿದ್ದರು. ಅವತ್ತು ವೆಂಕಟರಮಣ ಅವರನ್ನು physically handle ಮಾಡಿದರು. Man handle ಮಾಡಿದರು ಎಂದು ಹೇಳುವುದಕ್ಕೆ ಇಷ್ಟಪಡುವುದಿಲ್ಲ. ಆನಂತರ ಮಾರ್ಷಲ್ ಅವರು ಇವರು ಬಂದು ಹೊರಗೆ ಕಳುಹಿಸುವಂತಹ ವ್ಯವಸ್ಥೆಯಾಯಿತು. ಆ ಘಟನೆ ದಿವಸ ಇಲ್ಲಿ furniture ಎಲ್ಲಾ complete ಮುರಿದು ಬಿದ್ದು ಹೋಗಿತ್ತು. ತಾವು ಬೇಕಾದರೆ record ತೆಗೆಸಿ ನೋಡಿ. ಕ್ರಾಂತಿ ಪೇಪರ್‌ನ ವಿಚಾರ ಬಂದಾಗ....

(ಗೊಂದಲ)

ಶ್ರೀ ಕೆ.ಆರ್. ರಮೇಶ್ ಕುಮಾರ್: ಏಕಪ್ಪ facts ಹೇಳಬಾರದೆ?

ಶ್ರೀ ಎಂ.ಪಿ. ವೆಂಕಟೇಶ್: ತಾವು ದೊಡ್ಡವರು, ಅವತ್ತು ಏಕೆ ಮಾಡಿದರು? ಇವತ್ತು ಅದನ್ನು ಹೇಳಿಬಿಡಿ ಸ್ವಲ್ಪ ದಯಮಾಡಿ. ಕೇಳಿಬಿಡುತ್ತೇವೆ.

ಶ್ರೀ ಸಿ.ಬಿ. ಕೃಷ್ಣ ಬೈರೇಗೌಡ: ಒಬ್ಬೊಬ್ಬರಿಗೆ ಒಂದೊಂದು ನ್ಯಾಯವಾಗಬಾರದು, ಅವರಿಗೆ ಹೇಳಿ ಅವರು ಮಾತನಾಡುವಾಗ ಅವರಿಗೆ ಅವಕಾಶ ಕೊಡಲಿ. ತಾವು ದಯವಿಟ್ಟು ಅವರಿಗೆ ಸೂಚನೆ ಕೊಡಬೇಕು.

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ನಾನು ಬೆಳಿಗ್ಗೆಯಿಂದ ಎಲ್ಲೂ interfere ಆಗಲಿಲ್ಲ. ಮಾನ್ಯ ಸಂಸದೀಯ ವ್ಯವಹಾರ ಸಚಿವರು ಕೆಲವು ಘಟನೆಗಳನ್ನು ಹೇಳಿದರು. ಇಂತಿಂಥ ಸಂದರ್ಭದಲ್ಲಿ ನಡೆದದ್ದು ಎಂದು ಅಷ್ಟೇ ಹೇಳುತ್ತಿದ್ದೇನೆ. ಕ್ರಾಂತಿ ಪೇಪರ್‌ನ ಸಂಪಾದಕ ಸಿದ್ದರಾಮೇಶ್ವರರವರ ಕೊಲೆ ಪ್ರಕರಣದಲ್ಲಿ ಮಾನ್ಯ ಹೆಗಡೆಯವರು ಮುಖ್ಯಮಂತ್ರಿಗಳಾಗಿದ್ದಾಗ, ಮಾನ್ಯ ಚಂದ್ರೇಗೌಡರು ಸಭಾಧ್ಯಕ್ಷರಾಗಿದ್ದಾಗ

ಕಾಂಗ್ರೆಸ್ ವಿರೋಧ ಪಕ್ಷದಲ್ಲಿದ್ದಾಗಲೂ ಕೂಡ ಸ್ವಲ್ಪ ಹೆಚ್ಚುಕಡಿಮೆ ಅದೇ ಸ್ಥಿತಿಗೆ ಹೋಗಿತ್ತು. ದಿವಂಗತ ಗುಂಡೂರಾಯರು ಮುಖ್ಯಮಂತ್ರಿಗಳಾಗಿದ್ದಾಗ, ಜನತಾ ಪಕ್ಷ, ಅರಸುರವರು ಕಾಂಗ್ರೆಸ್, ನಾವೆಲ್ಲ ವಿರೋಧಪಕ್ಷದಲ್ಲಿದ್ದಾಗ ಮಾತುಮಾತಿಗೆ ಬಂದು ಸಭಾನಾಯಕರಾಗಿದ್ದಂತಹ ಗುಂಡೂರಾಯರು ಮತ್ತು ಮಾನ್ಯ ಜೆ.ಹೆಚ್. ಪಟೇಲರು ಇಬ್ಬರು ಸ್ಥಾನಗಳನ್ನು ಮರೆತು ಪರಸ್ಪರ ಕೈ ಕೈ ಮಿಲಾಯಿಸುವ ಹಂತಕ್ಕೂ ಹೋಗಿತ್ತು. ಇದನ್ನೆಲ್ಲಾ ಸಮರ್ಥಿಸಿಕೊಂಡು ನಿನ್ನೆ ಆಗಿದ್ದು ಸರಿ ಎಂದು ಹೇಳುವುದಕ್ಕೆ ನಾನು ಖಂಡಿತ ನಿಂತಿಲ್ಲ. ಮನುಷ್ಯ ಭಾವೋದ್ವೇಗಕ್ಕೆ ಒಳಗಾದಾಗ ಆ ತರಹ ಆಗುತ್ತದೆ. ನನಗೂ ಕೂಡ ಅಂಥಾದ್ದೆ ಘಟನೆ ಇಲ್ಲಿ ನಡೆದುಹೋಯಿತು. ನಾನು ಜೀವಂತ ಇರುವವರೆಗೂ ಆ ಘಟನೆ ನಡೆದಿದ್ದಕ್ಕೆ ನಾನು ಕೊರಗಲೇಬೇಕಾಗಿದೆ. ನನ್ನ ಆತ್ಮದಲ್ಲಿ ನಾನು ಅನುಭವಿಸಲೇಬೇಕಾಗಿದೆ. ನನಗೆ ನಾನೇ ಎಷ್ಟು ಶಿಕ್ಷೆ ತೆಗೆದುಕೊಂಡರೂ ಸಾಕಾಗುವುದಿಲ್ಲ. ನನ್ನ ಕೈ ಮೀರಿ ಘಟನೆ ನಡೆದುಹೋಯಿತು. ನಾನು ಎಷ್ಟು ಪಶ್ಚಾತಾಪಪಟ್ಟರೂ ನನ್ನನ್ನು ಶುದ್ದೀಕರಣ ಮಾಡಿಕೊಳುವುದಕ್ಕೆ ಆಗುತ್ತಿಲ್ಲ. ಕೆಲವೊಮ್ಮೆ ಆಗಿಹೋಗಿಬಿಡುತ್ತದೆ. ಅದು ಸರಿ ಎಂದು ನಾನು ಸಮರ್ಥನೆ ಮಾಡಿಕೊಳ್ಳುವುದಿಲ್ಲ. ಹಿಂದೆ ಇಂತಹ ಘಟನೆಗಳು ನಡೆದಿವೆ. ಆ ಮಟ್ಟಕ್ಕೆ ನಮ್ಮ ಸದನದ ಕಲಾಪಗಳು ಹೋಗುವುದಕ್ಕೆ ನಾವೂ ಯಾರೂ ಕೂಡ ಅವಕಾಶ ಕೊಡಬಾರದು. ಇದು ಏಕಪಕ್ಷೀಯವಾಗಿ ಆಗುವುದಿಲ್ಲ. ಪ್ರೇರಣೆ, ಪ್ರಚೋದನೆ, ಪ್ರಚೋದನೆಗೆ ಪ್ರತಿಕ್ರಿಯೆ, ಇವು ಯಾವುದಕ್ಕೂ ಕೂಡ ಸಾಧ್ಯವಾದಷ್ಟು ಮಟ್ಟಿಗೆ ನಾವು ಅವಕಾಶ ಕೊಡದಂತೆ ಗೌರವಯುತವಾಗಿ ಸದನವನ್ನು ನಡೆಸಿಕೊಂಡು ಹೋಗತಕ್ಕಂಥ ಜವಾಬ್ದಾರಿ ಒಬ್ಬಿಬ್ಬರ ಮೇಲೆ ಅಲ್ಲ, ಎಲ್ಲರ ಮೇಲೂ ಸಮಾನವಾಗಿ ಇದೆ. ನಿನ್ನೆ ನಡೆದಿದ್ದು ಸರಿ ಎಂದು ನಾವು ಹೇಳುವುದಕ್ಕೆ ಆಗುತ್ತದೆಯೆ? ಹೇಳುವುದಿಲ್ಲ. ತಾವು ಘಟನೆಗಳ ವಿಚಾರ ಹೇಳಿದ್ದಕ್ಕೆ ಇಂತಿಂಥ ಸನ್ನಿವೇಶದಲ್ಲಿ ಇಂತಹ ಘಟನೆಗಳು ನಡೆದಿದ್ದವು ಎಂದು ಹೇಳುವುದಕ್ಕೆ ಮಾತ್ರ ನಾನು ನಿಂತೆ. ನಿನ್ನೆ ನಡೆದಿದ್ದು ಸಮರ್ಥನೆ ಮಾಡಿಕೊಳ್ಳುವುದಕ್ಕೆ ಇವನ್ನೆಲ್ಲಾ ಹೇಳಿದೆ ಎಂದು ಮಾತ್ರ ತಾವು ದಯವಿಟ್ಟು ತಿಳಿದುಕೊಳ್ಳುವುದು ಬೇಡ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ಪ್ರಶ್ನೆ ಬಂದಿರತಕ್ಕಂಥಾದ್ದು ಇಷ್ಟೆ. ಪ್ರತಿಯೊಂದು ವಿಚಾರಗಳಿಗೆ ಮನುಷ್ಯನ ಸಹಜವಾದಂತಹ ದೌರ್ಬಲ್ಯಗಳಿರುತ್ತವೆ. ಅದಕ್ಕೆ ಕ್ಷಮೆ ಮತ್ತು ಮರೆತು ಬಿಡುವುದೆ ಸರಿಯಾದಂತಹ ಉತ್ತರ. ಆದರೆ ಆ ಉತ್ತರ ನಿಜವಾದಂತಹ ಪ್ರಾಂಜಲ ಮನಸ್ಸಿನಿಂದ ಬರತಕ್ಕಂತಾದ್ದಾಗಬೇಕು. ನಾವು ಅದನ್ನು

ಔಪಚಾರಿಕವಾಗಿ ವಿಷಾದಿಸುತ್ತೇವೆ ಎಂದು ಹೇಳಿ ಮತ್ತೆ ಅದನ್ನೆ ಮಾತನಾಡತಕ್ಕಂಥಾದ್ದರಲ್ಲಿ ಅರ್ಥವಿಲ್ಲ. ಎಲ್ಲ ಪ್ರಶ್ನೆಗಳು, ಎಲ್ಲಾ ಇಂತಹ ಸನ್ನಿವೇಶಗಳು ಬಂದಾಗ ಅದರ ಉತ್ತರದಾಯತ್ವವನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಅದರ ಬಗ್ಗೆ ಈಗ ವಿಷಾದ ವ್ಯಕ್ತ ಮಾಡಿ ಅದು ಮುಕ್ತಾಯ ಆಯಿತು. ಅದರ ಬಗ್ಗೆ ನಾವು ಪದೇಪದೇ ಏಕೆ ಹೀಗಾಯಿತು ಎಂದು ಹೇಳಬೇಕಾದಂತಾದ್ದು ಇಲ್ಲ. ಆದರೆ ನಾವು ಒಂದು ಸಂಪ್ರದಾಯವನ್ನು ಇಟ್ಟುಕೊಳ್ಳಬೇಕಾಗುತ್ತದೆ. ಅದು ನನಗೆ ಸಂಪ್ರದಾಯವಾಗಬಾರದು, ಮಾರ್ಗದರ್ಶನವಾಗಬಾರದು. ಅವತ್ತಿನ ಕಾಲಕ್ಕೆ ಮಾನ್ಯ ರಾಮಕೃಷ್ಣ ಹೆಗಡೆಯವರನ್ನು ಇಲ್ಲಿ ಬಂದು ಸುತ್ತುವರೆದು ಮೈಕನ್ನು ಕಸಿದುಕೊಳ್ಳುವುದಕ್ಕೆ ಹೋದವರಲ್ಲಿ ಇಂದಿನ ಒಬ್ಬ ಸದಸ್ಯರು ಇದ್ದರು. ಅದನ್ನು ನಾವ್ಯಾರು ಸಮರ್ಥಿಸಲಿಲ್ಲ. ಮತ್ತೆ ಅದನ್ನು ಸಮರ್ಥಿಸಬೇಕಾದಂತಹ ಅಗತ್ಯ ಕೂಡ ಇರುವುದಿಲ್ಲ. ಆದರೆ ಇಂತಹ ಸನ್ನಿವೇಶಗಳು ಬಂದಾಗ ನಾವು ಸ್ವಲ್ಪಮಟ್ಟಿಗೆ ವಿದುರನ ಉಪದೇಶ ಆದಂತೆ ಆದರೆ ಅಸಹಾಯಕರಾಗಿಬಿಡುತ್ತೇವೆ.

ಶ್ರೀ ಸಿದ್ದರಾಮಯ್ಯ: ಅದು ಕೆಟ್ಟ ಸಂಪ್ರದಾಯಕ್ಕೆ ದಾರಿ ಮಾಡಿಕೊಡುತ್ತದೆ. ಅಲ್ಲಿ ಆದಂತಹ ಕೆಟ್ಟ ಸಂಪ್ರದಾಯ ಇಲ್ಲಿ ಆಗುವಂತಹ ಪರಿಸ್ಥಿತಿ ನಿರ್ಮಾಣವಾಗುತ್ತದೆ.

ಶ್ರೀ ಎಂ.ಪಿ. ಪ್ರಕಾಶ್: ಅದಕ್ಕೆ ನಾವು ಕೂಡ ಮೊದಲೇ ಒಪ್ಪಿಕೊಂಡು ಕಾಂಗ್ರೆಸ್ ಪಕ್ಷದ 120 ವರ್ಷದ ಇತಿಹಾಸದಲ್ಲಿ, ಅದಕ್ಕೆ ಬಹಳ ದೊಡ್ಡ ಬಹುಮತ ಇರುವಂತಹ ಪಕ್ಷ, ದೊಡ್ಡ ದೊಡ್ಡ ನಾಯಕರು ಇರುವಂತಹ ಒಂದು ಪಕ್ಷ , ಆ ಪಕ್ಷ ಕೆಟ್ಟ ಸಂಪ್ರದಾಯವನ್ನು ಮೂರು ಬಾರಿ ಮಾಡಿದ್ದರಿಂದ ನಾಲ್ಕನೆ ಬಾರಿ ಚಿಕ್ಕ ಪಕ್ಷವಾದ ನಾವು ತಪ್ಪು ಮಾಡಿದ್ದೇವೆ. ಒಂದು ಕೆಟ್ಟ ಸಂಪ್ರದಾಯ ಮತ್ತೊಂದು ಸಂಪ್ರದಾಯಕ್ಕೆ...

ಶ್ರೀ ಸಿದ್ದರಾಮಯ್ಯ: 120 ವರ್ಷಗಳಿಂದ ಇರುವಂತಹ ಪಕ್ಷಗಳಿಗೆ ಒಂದು ಸಂಪ್ರದಾಯ 25 ವರ್ಷಗಳಿಂದ ಇರುವಂತಹ ಫಕ್ಷಕ್ಕೆ ಒಂದು ಸಂಪ್ರದಾಯ ಎಂದು ಆ ರೀತಿಯ ಸಂಪ್ರದಾಯಗಳು ಇಲ್ಲವೇ ಇಲ್ಲ. ಪ್ರಜಾಪ್ರಭುತ್ವದ ಮೌಲ್ಯಗಳು, ಪ್ರಜಾಪ್ರಭುತ್ವದ basic principles ಎಂದರೆ ಎಲ್ಲರಿಗೂ ಒಂದೇ.

ಶ್ರೀ ಎಂ.ಪಿ. ಪ್ರಕಾಶ್: ನಿಜ ಅದು. ಇಲ್ಲ ಅಂತ ಅಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಧನ್ಯವಾದಗಳು, ನಿಮ್ಮದು ಚಿಕ್ಕ ಪಕ್ಷ 10 ವರ್ಷದ ಪಕ್ಷ ಅದಕ್ಕೆ ಒಂದು ತಪ್ಪು ಮಾಡಿದೆ. 120 ವರ್ಷದ ಪಕ್ಷ ಮೂರು ತಪ್ಪು ಮಾಡಿದೆ ಎಂದಿರಿ...

ಶ್ರೀ ಎಂ.ಪಿ. ಪ್ರಕಾಶ್: ಆಯಿತು, ತಾವು ಇಷ್ಟು ಧೈರ್ಯದಿಂದ .....

ಶ್ರೀ ಕೆ.ಆರ್. ರಮೇಶ್ ಕುಮಾರ್: ಮಾನ್ಯ ಅಧ್ಯಕ್ಷರೆ, ಒಂದು interesting episode ಹೇಳುತ್ತೇನೆ. ಮಾನ್ಯ ಜೆ.ಹೆಚ್. ಪಟೇಲರು industries minister ಆಗಿದ್ದರು. ಮಾನ್ಯ ಕೆ.ಹೆಚ್. ಶ್ರೀನಿವಾಸರು ಕಾಂಗ್ರೆಸ್‌ನ opposition member ಆಗಿದ್ದರು. ಅವರು ಜೆ.ಹೆಚ್. ಪಟೇಲರ ಮೇಲೆ ಒಂದು ಆಪಾದನೆ ಮಾಡಿದರು. ನೀವು industries minister ಆಗಿದ್ದು ನಿಮ್ಮ ಮಗನಿಗೆ NGEF ನಲ್ಲಿ ancillary unit ಕೊಟ್ಟಿದ್ದೀರಿ ಎಂದು. ಅದಕ್ಕೆ ಪಟೇಲರು, ನಿಮ್ಮ ಇಂದಿರಾಗಾಂಧಿ ಅವರ ಮಗನಿಗೆ ದೇಶಾನೆ ಕೊಟ್ಟಿದ್ದಾರಲ್ಲಪ್ಪ, ನಾನು ಮಗನಿಗೆ ಒಂದು ancillary unit ಕೊಟ್ಟರೆ ಏನು ಎಂದು ಉತ್ತರ ಹೇಳಿದರು. ನಾನು ಪಕ್ಷಪಾತ ಮಾಡಿದ್ದೇನೆ ಎಂದು ಹೇಳಿ ಆಪಾದನೆಯನ್ನು ನಿರಾಕರಣೆ ಮಾಡುವುದಕ್ಕೆ ಹೋಗಲಿಲ್ಲ, ಅದನ್ನು justify ಮಾಡಿಕೊಂಡರು. ಅದಕ್ಕೆ humour type ಮಾಡಿ ಅದನ್ನು ಅಷ್ಟಕ್ಕೆ ನಿಲ್ಲಿಸಲಿಲ್ಲ, ನೀನು ಹೀಗೆಲ್ಲಾ ಕೇಳುತ್ತೀಯಾ ಎಂದರೆ ಶ್ರೀಮತಿ ಇಂದಿರಾಗಾಂಧಿಗೆ ನಿನ್ನ ವಿಚಾರವನ್ನೆಲ್ಲಾ ತಿಳಿಸಬೇಕಾಗುತ್ತದೆ ಎಂದು ಹೇಳಿದರು.

ಶ್ರೀ ಎಂ.ಪಿ. ಪ್ರಕಾಶ್: ಹೊಸದಾಗಿ ಪರಿವರ್ತನೆಯಾಗಿ ಬೇರೆ ಮತಾಂತರ ಆದವರು ಮೂಲ ಮತದ ಅನುಯಾಯಿಗಳಿಗಿಂತ ಬಹಳ ಗಟ್ಟಿಯಾಗಿ ನಿಂತುಕೊಂಡಿರುತ್ತಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಅವರ ಮೂಲನೇ ಕಾಂಗ್ರೆಸ್. ನಮ್ಮಿಂದನೆ ಅವರು ಮೊದಲು ಎಂಎಲ್ಎ ಆಗಿದ್ದು. ನೀವು ಮಧ್ಯದಲ್ಲಿ ತೆಗೆದುಕೊಂಡಿದ್ದು...

ಶ್ರೀ ಎಂ.ಪಿ. ಪ್ರಕಾಶ್: ನಾನು ಈ context ನಲ್ಲೇ ಹೇಳಿದೆ. ನೀವು ಅದನ್ನು ಬಿಡಿ, ಯಾರ್ಯಾರು ಹೇಗೇಗೆ ತೆಗೆದುಕೊಳ್ಳುತ್ತಾರೋ ತೆಗೆದುಕೊಳ್ಳಲಿ.

ಶ್ರೀ ಕೆ.ಆರ್. ರಮೇಶ್ ಕುಮಾರ್: ನೀವು ಹೇಳಿದ್ದು ಸರಿ, ಅದು ಸಿದ್ದರಾಮಯ್ಯನವರಿಗೆ ಅನ್ವಯಿಸುತ್ತದೆ ಎಂದು .....

ಶ್ರೀ ಸಿದ್ದರಾಮಯ್ಯ: ನನಗೆ ಅರ್ಥವಾಗುವುದಿಲ್ಲ ಎಂದು ಏನಿಲ್ಲ.

ಶ್ರೀ ಎಂ.ಪಿ.ಪ್ರಕಾಶ್: ನಾನು ಆ ತರಹ ಹೇಳಲಿಲ್ಲ.

ಶ್ರೀ ಸಿದ್ದರಾಮಯ್ಯ: ನನಗೆ ಅರ್ಥವಾಗುವುದಿಲ್ಲ ಎಂದು ಏನಿಲ್ಲ. ನೀವು ಮಾಡಿದ್ದರಿಂದ ಈ ಪರಿಸ್ಥಿತಿಗೆ ಬರಬೇಕಾಗಿ ಬಂತು.

ಶ್ರೀ ಎಂ.ಪಿ. ಪ್ರಕಾಶ್: ಒಪ್ಪಿಕೊಂಡೆ.

ಶ್ರೀ ಸಿದ್ದರಾಮಯ್ಯ: ನೀವು 25 ವರ್ಷ ಯಾವ ಪಕ್ಷವನ್ನು ಬಯ್ದಿದ್ದಿರಿ, ಅ ಪಕ್ಷದ ಜೊತೆ ನೀವು ಸೇರಿಕೊಂಡಾಗ ಅಲ್ಲೆ ಇರಬೇಕಾ? ನೀವು ಮಾಡಿದ ತಪ್ಪನ್ನು ಇನ್ನೊಬ್ಬರ ಮೇಲೆ ಏಕೆ ಹೊರಿಸುವುದಕ್ಕೆ ಹೋಗುತ್ತೀರಿ? ಅವರು ಬಿಜೆಪಿ ಜೊತೆ ಅವತ್ತು ಹಿಂದೆ ಹೇಳಿದಾಗೆಲ್ಲ ಮಾಡಿದ್ದೀರಿ ಅಲ್ಲ. ನೀವು ಎಲ್ಲಾನೂ ಯಾರಿಗೆ ಹೇಳುವುದಕ್ಕೆ ಹೋಗುತ್ತೀರಿ?

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಾವು ಅದನ್ನು ಸಮರ್ಥಿಸಿಕೊಳ್ಳಲಿಲ್ಲ.

(ಗೊಂದಲ)

ಶ್ರೀ ಆರ್. ಅಶೋಕ್: ಕಾಂಗ್ರೆಸ್ ನವರನ್ನು ಜೈಲಿಗೆ ಹಾಕುತ್ತೇವೆ ಎಂದಿರಿ, ಅದೇ ಪಕ್ಷದ ಜೊತೆ ಕುಳಿತಿದ್ದೀರಿ. ನಿಮಗೆ ನಾಚಿಕೆಯಾಗಬೇಕು. ನಮ್ಮ ಬಿಜೆಪಿ ಯವರನ್ನು ಏಕೆ ಬಯ್ಯುತ್ತೀರಾ? ನಿಮಗೆ ನಾಚಿಕೆಯಾಗಬೇಕು. ನೀವು ಕಾಂಗ್ರೆಸ್‌ನ ಜೈಲಿಗೆ ಹಾಕುತ್ತೇವೆ ಎಂದಿರಿ. ಅವರ ಜೊತೆ ಹೋಗಿದ್ದೀರಿ, ನಾಚಿಕೆಯಾಗಬೇಕು ನಿಮಗೆ. ನಾವು ಧೈರ್ಯವಾಗಿ ಹೊಂದಾಣಿಕೆ ಮಾಡಿಕೊಂಡಿದ್ದೇವೆ.

ಶ್ರೀ ಸಿದ್ದರಾಮಯ್ಯ: ಕುಳಿತುಕೊಳ್ಳಿರಿ ಸಾಕು.

ಶ್ರೀ ಆರ್. ಅಶೋಕ್: ಜಾತಿ ಪಕ್ಷ ನಿಮ್ಮದು.

(ಗೊಂದಲ)

ಶ್ರೀ ಆರ್. ಅಶೋಕ್: ಬಿಜೆಪಿಯವರನ್ನು ಬಯ್ಯುವುದಕ್ಕೆ ನಿಮಗೆ ಏನೂ ಅಧಿಕಾರ ಇಲ್ಲ.

ಶ್ರೀ ಡಿ.ಟಿ. ಜಯಕುಮಾರ್: ವೇದಿಕೆಯಲ್ಲೆಲ್ಲಾ ನೀವು ಹೇಳಿದ್ದು ಏನು? ನಮಗೆ ಅಧಿಕಾರ ಕೊಡಿ, ಕಾಂಗ್ರೆಸ್‌ನವರನ್ನು ಜೈಲಿಗೆ ಕಳುಹಿಸುತ್ತೇವೆ ಎಂದು. ಈಗ ಅದೇ ಜೈಲಿಗೆ ಹೋಗಿ ಕುಳಿತ್ತಿದ್ದೀರಿ ಅಲ್ಲ. ನಿಮಗೆ ಯಾವ ನೈತಿಕತೆ ಇದೆ? ನೈತಿಕತೆ ಬಗ್ಗೆ ಮಾತನಾಡುತ್ತಾರೆ.

ಶ್ರೀ ಕೆ.ಎಸ್. ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಮಾನ್ಯ ರಾಮಕೃಷ್ಣ ಹೆಗಡೆಯವರು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ 18 ಜನ ಬಿಜೆಪಿ ಯವರ ಬೆಂಬಲವನ್ನು ತೆಗೆದುಕೊಂಡು ಮುಖ್ಯಮಂತ್ರಿಯಾಗಿದ್ದಂತಹ ಸಂದರ್ಭದಲ್ಲಿ ಅದೇ ಮಂತ್ರಿಮಂಡಲ ಮುಂದುವರೆದಾಗ ನಮ್ಮ ಬೆಂಬಲದಿಂದಲೇ ಸಿದ್ದರಾಮಯ್ಯನವರು ಮಂತ್ರಿಗಳಾಗಿದ್ದರು. ಅದನ್ನು ಅವರು ಮರೆತುಬಿಟ್ಟರು.

ಶ್ರೀ ಸಿದ್ದರಾಮಯ್ಯ: ಆಗ ನಾನು ಮಂತ್ರಿಯಾಗಿರಲಿಲ್ಲ. ನಾನು independent ಆಗಿ ಗೆದ್ದು ಬಂದಿದ್ದೆ, ನಾನು ನಿಮ್ಮಿಂದ ಏನೂ ಮಂತ್ರಿಯಾಗಿರಲಿಲ್ಲ. ನೀವು ನಿಮಗೆ ಬೇರೆ ದಾರಿ ಇಲ್ಲದೆ ನೀವೆ ಬೆಂಬಲ ಕೊಟ್ಟಿದ್ದೀರಿ, ನಿಮ್ಮನ್ನು ಏನೂ ಅವತ್ತು ಕರೆಯುವುದಕ್ಕೆ ಬಂದಿರಲಿಲ್ಲ. 1983 ರಲ್ಲಿ ಇವರಿಗೆ ಯಾರು ಅರ್ಜಿ ಕೊಟ್ಟುಕೊಂಡು ಬನ್ನಿ ಎಂದು ಬಂದಿದ್ದರು? ನೀವು ಚುನಾವಣೆಗೆ ಹೋಗುವುದಕ್ಕೆ ಧೈರ್ಯ ಇಲ್ಲದೆ ಅವತ್ತು ಬಂದಿದ್ದೀರಿ. ಆಗ ಇವರು ಇನ್ನು ಬಾಬ್ರಿ ಮಸೀದಿ ಒಡೆದು ಹಾಕಿರಲಿಲ್ಲ. 1983 ರಲ್ಲಿ ನೀವು ಬಾಬ್ರಿ ಮಸೀದಿ ಒಡೆದು ಹಾಕಿರಲಿಲ್ಲ. Supreme Courtಗೆ undertaking ಬರೆದುಕೊಟ್ಟುಬಿಟ್ಟು, constitution ಒಪ್ಪಿಕೊಂಡು ಗೌರವ ಕೊಡುತ್ತೇವೆ ಎಂದು ಹೇಳಿ constitutionಗೆ ವಿರುದ್ದವಾಗಿ, Supreme Courtಗೆ ಬರೆದುಕೊಟ್ಟ undertakingಗೆ ವಿರುದ್ದವಾಗಿ ನೀವು ಯಾವಾಗ ಬಾಬ್ರಿ ಮಸೀದಿ ಒಡೆದು ಹಾಕಿದಿರಿ, ಅವತ್ತಿನಿಂದ ಈಚೆಗೆ ನೀವು ರಾಜಕೀಯವಾಗಿ ಅಸ್ಪೃಶ್ಯರ ಆದರೆ ಹೊರತು.....

ಶ್ರೀ ಅಮರೇಗೌಡ ಸಿದ್ದನಗೌಡ ಬಯ್ಯಾಪುರ: ಮಾನ್ಯ ನರಸಿಂಹರಾವ್ ರವರು ಅದನ್ನು ಮಾಡಿದ್ದು. ಅದನ್ನು ಒಡೆದು ಹಾಕಿದ್ದು ನರಸಿಂಹರಾವ್‌ರವರು ಮಾಡಿದ್ದು. ಅವರೇ ಪ್ರಧಾನ ಮಂತ್ರಿಗಳಾಗಿದ್ದಾಗ ನರಸಿಂಹರಾವ್‌ರವರು ಒಡೆದು ಹಾಕಿದ್ದು. ಅವರ ಕುಮ್ಮಕ್ಕಿನಿಂದ ಆಗಿರುವುದು, ಕಾಂಗ್ರೆಸ್‌ನವರ ಕುಮ್ಮಕ್ಕಿನಿಂದ ಆಗಿರುವುದು.

(ಗೊಂದಲ)

ಶ್ರೀ ಸಿದ್ದರಾಮಯ್ಯ: Fascist ಗಳಿಗೆ ಕಾನೂನಿನ ಬಗ್ಗೆ ಗೌರವ ಎಲ್ಲಿ ಇದೆ? Supreme Court ಬಗ್ಗೆ ನಿಮಗೆ ಗೌರವ ಎಲ್ಲಿದೆ? ಏಕೆ ಇವೆಲ್ಲಾ ಹೇಳುತ್ತೀರಿ ನೀವು?

(ಗೊಂದಲ)

ನಿಮಗೆ ಸುಪ್ರೀಂ ಕೋರ್ಟ್ ಬಗ್ಗೆ ಗೌರವ ಎಲ್ಲಿ ಇದೆ? ನೀವು ಏಕೆ ಇವೆಲ್ಲವನ್ನು ಹೇಳುತ್ತೀರಿ?

ಶ್ರೀ ಕೆ.ಎಸ್.ಈಶ್ವರಪ್ಪ: ಮಾನ್ಯ ಅಧ್ಯಕ್ಷರೆ, ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲಾ ಜಾತಿಗಳು ಕೂಡ ಒಟ್ಟಿಗೆ ಕನ್ನಡಾಂಬೆ ಎಂದು ಮಾಡುತ್ತಿರಬೇಕಾದರೆ, ಜಾತಿ ಜಾತಿಗೆ ವಿಷ ಬೀಜವನ್ನು ಬಿತ್ತಿ, ಆ ಜಾತಿಯನ್ನು ಇಡೀ ಕರ್ನಾಟಕ ರಾಜ್ಯದಲ್ಲಿ ಉದ್ಭವ ಮಾಡಿದಂತಹ ಮೊದಲನೆಯ ವ್ಯಕ್ತಿಯೇ ಸಿದ್ಧರಾಮಯ್ಯನವರು.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ನಿಮಗೆ ಏನೂ ಗೊತ್ತಿಲ್ಲ, ಕುಳಿತುಕೊಳ್ಳಿ. ನಿಮಗೆ ಸಾಮಾಜಿಕ ನ್ಯಾಯವೆಂದರೆ ಗೊತ್ತಿಲ್ಲ. ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವಂಥ ಬಿ.ಜೆ.ಪಿ.ಯವರು. ಯಾವ ಜಾತಿಯವರು ಎಂಬುದು ನಮಗೆ ಗೊತ್ತಿಲ್ಲ. ನಾನು ಏನು ಹೆದರಿಕೊಳ್ಳುವುದಿಲ್ಲ. ಯಾವ ಜಾತಿಗಳಿಗೆ ನ್ಯಾಯ ಸಿಕ್ಕಿಲ್ಲವೊ, ಯಾವ ಜಾತಿಯವರಿಗೆ constitutionನಲ್ಲಿ ಅವಕಾಶ ಸಿಕ್ಕಿಲ್ಲ, ಆ ಜಾತಿಗಳು ಸಂಘಟನೆಯಾಗಿ ಹೋರಾಟ ಮಾಡಿದರೆ ತಪ್ಪಲ್ಲ. ಇವತ್ತು ಬಡವರಿಗೆ, ಹಿಂದುಳಿದವರಿಗೆ, ದಲಿತರಿಗೆ, ಮೋಸ ಮಾಡಿರುವಂಥವರು. ಇವರಿಗೆ ನಾಚಿಕೆಯಾಗಬೇಕು, ನಾವು ಜಾತಿ ಮಾಡುತ್ತೇವಂತೆ; ನೀವು ಮಾಡುವುದೇ ಜಾತಿ. ನೀವು ಹುಟ್ಟಿರುವುದೇ ಜಾತಿಗೋಸ್ಕರ, ನೀವು ಜಾತಿ ಮಾಡುವುದಕ್ಕೋಸ್ಕರವೇ ಆರ್.ಎಸ್.ಎಸ್. ಅನ್ನು ಹುಟ್ಟು ಹಾಕಿರುವುದು. ಜಾತಿಯನ್ನು ಗಟ್ಟಿ ಮಾಡುವುದಕ್ಕೋಸ್ಕರವೇ ಆರ್.ಎಸ್.ಎಸ್. ಮಾಡಿರುವುದು. ಇವರು ಯಾರಿಗೆ ಹೇಳುತ್ತಾರೆ? ಇವರಿಗೆ ಮಾತನಾಡುವುದಕ್ಕೆ ಯೋಗ್ಯತೆ ಇಲ್ಲ.

(ಗೊಂದಲ)

ಅಧ್ಯಕ್ಷರು: ಈಗ ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ನಮ್ಮ ಹಳ್ಳಿಯಲ್ಲಿ ಏನು ಹೇಳುತ್ತಾರೆಂದರೆ, ಎಲ್ಲಾ ವಾಂತಿ ಮಾಡಿಕೊಂಡು ಬಿಟ್ಟರೆ, ಎಲ್ಲಾ ಕ್ಲಿಯರ್ ಆಗಿಬಿಡುತ್ತದೆಂದು ಹೇಳುತ್ತಾರೆ. ಆ ರೀತಿಯಲ್ಲಿ ಈಗ ಎಲ್ಲಾ ವಾಂತಿಯನ್ನು ಮಾಡಿಕೊಂಡು ಬಿಟ್ಟಿದ್ದೀರಿ. ಇದುವರೆಗೂ ಎಲ್ಲವನ್ನು ಹೇಳಿಬಿಟ್ಟಿದ್ದೀರಿ. ಇನ್ನು ಮೇಲಾದರೂ ಸಮಾಧಾನವಾಗಿ ಇರಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ನೀವು ಏನು ಹೇಳುತ್ತೀರಿ? ಒಬ್ಬ ದಲಿತರನ್ನು ನೀವು ಮಂತ್ರಿ ಮಾಡುವುದಕ್ಕೆ ಆಗಿಲ್ಲ, ಜಾತಿ ಬಿಟ್ಟು ಏನು ಮಾಡುತ್ತಿದ್ದೀರಿ?

(ಗೊಂದಲ)

ಶ್ರೀ ಸಿದ್ಧರಾಮಯ್ಯ: ತಾವು ಜಾತಿ ಬಿಟ್ಟು ಏನು ಮಾಡುತ್ತಿದ್ದೀರಿ? ನಮಗೆ ಹೇಳಿಕೊಡುವುದಕ್ಕೆ ಬರುತ್ತಾರೆ. ಹಿಂದುಳಿದವರ ಹೆಸರಿನಲ್ಲಿ, ದಲಿತರ ಹೆಸರಿನಲ್ಲಿ, ಹೋರಾಟ ಹಮ್ಮಿಕೊಂಡಿದ್ದೇವೆ.

(ಗೊಂದಲ)

ಅಧ್ಯಕ್ಷರು: ದಯಮಾಡಿ ಎಲ್ಲರೂ ಕುಳಿತುಕೊಳ್ಳಿ. ಆಯಿತು, ದಯಮಾಡಿ ಮಾನ್ಯ ಕೆ.ಎಸ್.ಈಶ್ವರಪ್ಪನವರೆ, ಮಾನ್ಯ ವಿಶ್ವೇಶ್ವರ ಹೆಗಡೆ ಕಾಗೇರಿಯವರೆ, ಕುಳಿತುಕೊಳ್ಳಿ. ಮೊದಲು ನೀವು ಕುಳಿತುಕೊಳ್ಳಿ. ನಾನು

ಎದ್ದು ನಿಂತಿರುವಾಗ ನೀವು ಕುಳಿತುಕೊಳ್ಳುವುದಿಲ್ಲವೇ? ಮಾನ್ಯ ಕೆ.ಎಂ.ಕೃಷ್ಣಮೂರ್ತಿಯವರೆ, ಕುಳಿತುಕೊಳ್ಳಿ. ಈಗ ಎಲ್ಲಾ ವಿಚಾರಗಳನ್ನು ಅವರು, ಇವರು, ಏನು ಮಾಡಿದ್ದಾರೆಂದರೆ, ನಮ್ಮ ಹಳ್ಳಿಯಲ್ಲಿ xx xx xx ಆಯಿತು, ಈಗ ಬಿಸಿನೆಸ್‌ಗೆ ಹೋಗೋಣ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಮಾನ್ಯ ಕೆ.ಎಸ್.ಈಶ್ವರಪ್ಪನವರು..

ಅಧ್ಯಕ್ಷರು: ಹೆಂಗಸರೆಂದರೆ, ನಮ್ಮ ಹಳ್ಳಿಯ ಹೆಂಗಸರು. ಆಯಿತು, ದಯಮಾಡಿ ಕುಳಿತುಕೊಳ್ಳಿ. ನೀವು ನಿಮ್ಮ ವಿಚಾರವನ್ನು, ಅವರು ಅವರ ವಿಚಾರವನ್ನು ಹೇಳಿ ಆಯಿತಲ್ಲಾ, ಕುಳಿತುಕೊಳ್ಳಿ. ದಯಮಾಡಿ ಕುಳಿತುಕೊಳ್ಳಿ. ಹೆಣ್ಣು ಮಕ್ಕಳು ನಿಂತಿದ್ದೀರಲ್ಲಾ, ದಯಮಾಡಿ ಹೆಣ್ಣು ಮಕ್ಕಳು ಅರ್ಥ ಮಾಡಿಕೊಳ್ಳಬೇಕು. ನೀವೆಲ್ಲರೂ ಅಧುನಿಕ ಮಹಿಳೆಯರು. ಕೆಲವು ಸಾರಿ ಹಳ್ಳಿಗಳಲ್ಲಿ ಜಗಳವಾದಾಗ ಗಂಡಸರು ಏನೂ ಮಾಡುವುದಕ್ಕೆ ಆಗುವುದಿಲ್ಲ. ಆ ರೀತಿ ಅವರ ಪದಸಂಪತ್ತು ಇರುತ್ತದೆ. ಅದನ್ನು ನಾನು ಉದಾಹರಣೆಯಾಗಿ ಆ ರೀತಿಯಾಗಿ ಇದು ಆಯಿತಲ್ಲಾ, ಎಂದು ನಾನು ಹೇಳಿದೆ. ಆದುದರಿಂದ ಇಲ್ಲಿ ಹೆಂಗಸರಿಗೆ ಹೇಳಿದ್ದು ಎಂದು ಅಲ್ಲ. ದಯಮಾಡಿ ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಬಿ.ಜೆ.ಪಿ.ಯವರು ಸಾಮಾಜಿಕ ನ್ಯಾಯ ಹೇಳುತ್ತಿದ್ದಾರೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ಇವತ್ತು ಕೂಡ ನಾನು ಈ ಸದನದಲ್ಲಿ ಕೂಡ ಹೇಳುತ್ತೇನೆ, ಇಡೀ ರಾಜ್ಯಕ್ಕೆ ಹೇಳುತ್ತೇನೆ. ಆಹಿಂದಾ ಬಗ್ಗೆ..

(ಗೊಂದಲ)

ಅಧ್ಯಕ್ಷರು: ನಾನು ಹೇಳಿದ್ದು ಹಳ್ಳಿಗಳಲ್ಲಿ ಆಗುವಂಥಾದ್ದು ಹೇಳಿದ್ದು, ಆಯಿತು, ಅವರು ಹೇಳಿದ್ದು ಆಯಿತು, ನೀವು ಹೇಳಿದ್ದು ಆಯಿತು.

ಶ್ರೀ ಕೆ.ಎಸ್.ಈಶ್ವರಪ್ಪ: ಅಧಿಕಾರವನ್ನು ಮಾತ್ರ ತೆಗೆದುಕೊಂಡಿದ್ದಾರೆಯೇ ವಿನಾ ಹಿಂದುಳಿದವರು, ದಲಿತರು ಉದ್ಧಾರವಾಗಿಲ್ಲ.

(ಗೊಂದಲ)

ಶ್ರೀ ಸಿದ್ಧರಾಮಯ್ಯ: ಸಾಮಾಜಿಕ ನ್ಯಾಯಕ್ಕೆ ವಿರುದ್ಧವಾಗಿರುವಂಥ, ಜಾತಿ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟುಕೊಂಡಿರುವಂಥ, ಜಾತಿ ವ್ಯವಸ್ಥೆ ಮುಂದುವರೆಯಬೇಕೆಂಬ ಬಿ.ಜೆ.ಪಿ.ಯವರು ಸಾಮಾಜಿಕ ನ್ಯಾಯದ ಬಗ್ಗೆ

---

x x ಈ ಪದಗಳನ್ನು ಸಭಾಧ್ಯಕ್ಷರ ಆದೇಶದ ಮೇರೆಗೆ ಕಡತದಿಂದ ತೆಗೆದು ಹಾಕಲಾಗಿದೆ

ಮಾತನಾಡುವುದಕ್ಕೆ ಯಾವ ಹಕ್ಕಿದೆ? ಇವರು ಜಾತಿವಾದಿಗಳು, ನಮಗೆ ಇವರು ಹೇಳುತ್ತಾರೆ, ನಾಚಿಕೆಯಾಗಬೇಕು.

(ಈ ಹಂತದಲ್ಲಿ ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡ ಅವರು ಧರಣಿ ಮಾಡಲು ಸದನದ ಬಾವಿಗೆ ಬಂದರು)

(ಗೊಂದಲ)

ಅಧ್ಯಕ್ಷರು: ಮಾನ್ಯ ಕೆ.ಎಸ್.ಈಶ್ವರಪ್ಪನವರೆ, ನಿಮ್ಮ ವಿಚಾರವನ್ನು ನೀವು ಹೇಳಿದ್ದೀರಿ, ಅವರ ವಿಚಾರಗಳನ್ನು ಅವರು ಹೇಳಿದ್ದಾರೆ. ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನಗೌಡರವರೆ, ನಾನು ಹೆಣ್ಣು ಮಕ್ಕಳಿಗೆ ಅಗೌರವ ಮಾಡಬೇಕೆಂದು ಹೇಳಿಲ್ಲ. ನಮ್ಮ ಹಳ್ಳಿಗಳಲ್ಲಿ ಹೆಣ್ಣು ಮಕ್ಕಳು ಪರಸ್ಪರ ಜಗಳಕ್ಕೆ ನಿಂತುಕೊಂಡರೆ, ಅವರ ಶಬ್ಧ ಸಂಪತ್ತು ಇದೆಯಲ್ಲಾ, ಅದು ಯಾರಿಗೂ ಇಲ್ಲವೇನೋ ಎಂದು ಅನ್ನಿಸುತ್ತದೆ. ಆ ರೀತಿಯಲ್ಲಿ ಅವರು ಜಗಳವನ್ನು ಮಾಡುತ್ತಾರೆ. ಅದನ್ನು ನಾನು ಇಲ್ಲಿ ಉದಾಹರಣೆಯನ್ನು ಕೊಟ್ಟು ಆ ರೀತಿಯಾಗುತ್ತದೆಂದು ಹೇಳಿದೆ, ತಪ್ಪು ಏನೂ ಹೇಳಿಲ್ಲ. ಆದುದರಿಂದ ಅಗೌರವ ಮಾಡಬೇಕೆಂಬ ದೃಷ್ಟಿ ಏನೂ ಇಲ್ಲ, ತಾವು ದಯಮಾಡಿ ತಮ್ಮ ಸ್ಥಳಕ್ಕೆ ಹೋಗಿ. ನಾನು ನಡೆಯುತ್ತಿರುವಂಥಾದ್ದನ್ನು ಹೇಳಿದೆ, ಅಗೌರವ ಮಾಡಬೇಕೆಂದು ಏನೂ ಇಲ್ಲ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ತಾವು ನೇರವಾಗಿ ಹೇಳಿದ್ದೀರಿ. ಹೆಣ್ಣು ಮಕ್ಕಳ ಬಗ್ಗೆ ಹೇಳಿದಾಗ naturally ಅವರು ಹೇಳುತ್ತಾರೆ . ನಮ್ಮನ್ನು ಅವಮಾನ ಮಾಡುವ ದೃಷ್ಟಿಯಿಂದ ತಾವು.....

ಅಧ್ಯಕ್ಷರು: ಅವಮಾನವೆಂದು ಅಲ್ಲ, ಅಗೌರವ ಮಾಡುವಂಥಾದ್ದು ಅಲ್ಲ. ನಾನು ಅದನ್ನು ಉದಾಹರಣೆಯಾಗಿ ಕೊಟ್ಟಿದ್ದೇನೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ: ಮಾನ್ಯ ಅಧ್ಯಕ್ಷರೆ, ಆ ಪದಗಳನ್ನು ಕಡತದಿಂದ ತೆಗೆಸಿ ಹಾಕಿ.

ಅಧ್ಯಕ್ಷರು: ಆಯಿತು, ಅದನ್ನು ಕಡತದಿಂದ ತೆಗೆಸುತ್ತೇನೆ. ನಾನು ಹಳ್ಳಿಗಳಲ್ಲಿ ಏನು ನಡೆಯುತ್ತದೆಂಬ ಬಗ್ಗೆ ಉದಾಹರಣೆಯಾಗಿ ಕೊಟ್ಟಿದ್ದು. ಈಗ ಬಿಸಿನೆಸ್ ಅನ್ನು ತೆಗೆದುಕೊಳ್ಳೋಣ.

ಶ್ರೀಮತಿ ಜೆ. ಸುನೀತಾ ವೀರಪ್ಪಗೌಡ: ಮಾನ್ಯ ಅಧ್ಯಕ್ಷರೆ, ಈ ರೀತಿ ಯಾವ ಮಹಿಳೆಯೂ ನಡೆದುಕೊಳ್ಳುವುದಿಲ್ಲ.

(ಗೊಂದಲ)

(ಈ ಹಂತದಲ್ಲಿ ಧರಣಿನಿರತರಾಗಿದ್ದ ಶ್ರೀಮತಿ ಭಾಗೀರಥಿ ಟಿ. ಮರುಳಸಿದ್ಧನ ಗೌಡ ಅವರು ಸದನದ ಬಾವಿಯಿಂದ ತಮ್ಮ ಆಸನಕ್ಕೆ ತೆರಳಿದರು)

(ಗೊಂದಲ)

ಶ್ರೀ ವಾಟಾಳ್ ನಾಗರಾಜ್: ಮಾನ್ಯ ಅಧ್ಯಕ್ಷರೆ, ನಾನು ಒಂದು ನಿಮಿಷ ಮಾತನಾಡುತ್ತೇನೆ. ಇಲ್ಲಿ ಚರ್ಚೆಗಳು ದೀರ್ಘವಾಗಿ ನಡೆದು, ಒಂದು ಹಂತಕ್ಕೆ ತಲುಪುವ ಸಂದರ್ಭ ಬಂದಾಗ, ಒಂದು ವಿಚಾರ ನನಗೆ ಜ್ಞಾಪಕಕ್ಕೆ ಬಂತು. ಮಾನ್ಯ ಸಿದ್ಧರಾಮಯ್ಯನವರು ಈ ಕಡೆಗೆ ಹೋಗಿದ್ದಾರೆಂದು ಹೇಳುತ್ತಿದ್ದಾರೆ. ಮಾನ್ಯ ಸಿದ್ಧರಾಮಯ್ಯನವರು ಪಕ್ಷವನ್ನು ಬಿಟ್ಟು ಈ ಕಡೆ ಬಂದರು. ಅವರು ಆ ಪಕ್ಷವನ್ನು ಬಿಡುವಾಗ ಏಕೆ ಬಿಟ್ಟರು, ಹೇಗೆ ಬಿಟ್ಟರು, ಎಂಬ ಬಗ್ಗೆ ನಾವು ಬಹಳ ಒತ್ತಾಯವನ್ನು ಮಾಡಿದೆವು. ಅವರು ಬಂದಾದ ಮೇಲೆ, ಮತ್ತೆ ಅವರು ಚುನಾವಣೆಯಲ್ಲಿ ಗೆದ್ದು ಈ ಕಡೆಗೆ ಬಂದರು. ಮಾನ್ಯ ಸಿದ್ಧರಾಮಯ್ಯನವರು ಈ ಕಡೆಗೆ ಬರದೇ ಇದ್ದಿದ್ದರೆ, ಇವರು ಯಾರೂ ಮುಖ್ಯಮಂತ್ರಿಗಳಾಗುತ್ತಿರಲ್ಲಿಲ್ಲ, ಮಂತ್ರಿಗಳು ಒಬ್ಬರೂ ಆಗುತ್ತಿರಲಿಲ್ಲ. ಅದುದರಿಂದ ನನಗೆ ಏನು ಅನಿಸುವುದೆನೆಂದರೆ, ಮಾನ್ಯ ಸಿದ್ದರಾಮಯ್ಯನವರನ್ನು ಬೈಯುವ ಬದಲು ಈ ಕಡೆ ಬಂದುದ್ದರಿಂದ ಕದ್ದಾದರೂ ಫೋಟೋವನ್ನು ಇಟ್ಟುಕೊಂಡು ಪೂಜೆ ಮಾಡುವುದು, ಒಳ್ಳೆಯದೆಂದು ನನಗನಿಸುತ್ತದೆ.

ಶ್ರೀ ಸಿದ್ಧರಾಮಯ್ಯ: ಮಾನ್ಯ ಅಧ್ಯಕ್ಷರೆ, ನಾನು ಯಾವತ್ತು ಕೂಡ ಒಂದು ಸಿದ್ಧಾಂತವನ್ನು ನಂಬಿರುವಂಥಾದ್ದಕ್ಕೆ ದ್ರೋಹವನ್ನು ಮಾಡುವಂಥಾದ್ದು ಇವತ್ತಿನವರೆಗೂ ಗೊತ್ತಿಲ್ಲ. ನಾನು ಮಾಡುವುದೂ ಇಲ್ಲ, ಎಲ್ಲಿಯವರೆಗೆ ರಾಜಕಾರಣದಲ್ಲಿ ಇರುತ್ತೇನೆ, ಸಾರ್ವಜನಿಕ ಜೀವನದಲ್ಲಿ ಇರುತ್ತೇನೆ. ಅಲ್ಲಿಯವರೆಗೆ ನಾವು ಯಾವ ಸಿದ್ಧಾಂತವನ್ನು ಪ್ರತಿಪಾದನೆ ಮಾಡಿಕೊಂಡು ಬಂದಿದ್ದೇವೆ. ಆ ಸಿದ್ಧಾಂತದ ಚೌಕಟ್ಟಿನಲ್ಲೇ ಕೆಲಸವನ್ನು ಮಾಡುತ್ತೇವೆ. ನಾನು ಯಾವ ಪಕ್ಷದಿಂದ ಗೆದ್ದಿದ್ದೆ, ಯಾವ symbol ನಿಂದ ಗೆದ್ದಿದ್ದೆ. ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದೇನೆ. ಹಾಗೆ ಮಾಡುವುದಕ್ಕಿಂತ ಮುಂಚಿತವಾಗಿ, ಆ ಪಕ್ಷ ನಡೆದುಕೊಂಡ ರೀತಿಯಿಂದ, ಅವರು ಬಿ.ಜೆ.ಪಿ.ಯವರೊಡನೆ ಸೇರಿಕೊಂಡಿದ್ದರಿಂದ ನಾವು ರಾಜೀನಾಮೆಯನ್ನು ಕೊಡಬೇಕಾಗಿ ಬಂತು. ಆ ಪಕ್ಷಕ್ಕೆ ರಾಜೀನಾಮೆಯನ್ನು ಕೊಟ್ಟು, ಕಾಂಗ್ರೆಸ್ ಪಕ್ಷದಲ್ಲಿ ನಿಂತು ಗೆದ್ದು ಬಂದಿರುವಂಥಾದ್ದು.

ಯಾವಾಗ ಜಾತ್ಯಾತೀತ ತತ್ವಕ್ಕೆ ಕೊಡಲಿ ಪೆಟ್ಟು ಬಿತ್ತೋ ಆಗ ನಾನು ಆ ಪಕ್ಷಕ್ಕೆ ರಾಜೀನಾಮೆ ಕೊಟ್ಟು, ಕಾಂಗ್ರೆಸ್ ಪಕ್ಷಕ್ಕೆ ಸೇರಿ, ಕಾಂಗ್ರೆಸ್‌ನಿಂದ ಗೆದ್ದು ಬಂದು ಈಗ ಕಾಂಗ್ರೆಸ್ ಪಕ್ಷದ ಸದಸ್ಯನಾಗಿದ್ದೇನೆ. ಈಗ ನಾನು ಆ ಪಕ್ಷದ ಸದಸ್ಯನಾಗಿ ಉಳಿದಿಲ್ಲ. ನಾನು ಇನ್ನೊಂದು ಪಕ್ಷಕ್ಕೆ defect ಮಾಡಿಲ್ಲ, ನಾನು ಪಕ್ಷಾಂತರ ಮಾಡಿಲ್ಲ. ಸ್ವಾರ್ಥಕ್ಕೋಸ್ಕರ ಅಧಿಕಾರದಲ್ಲಿರುವವರು ನೀವು. ಅಧಿಕಾರಕ್ಕಾಗಿ ಬಿ.ಜೆ.ಪಿ.ಯವರ ಜೊತೆ ಸೇರಿಕೊಂಡಿರುವವರು ನೀವು. ನಮಗೆ ಹೇಳುತ್ತೀರಾ? ನಮಗೆ ಸ್ವಾರ್ಥವಿದೆಯಂತೆ. ನಾನು ಅಧಿಕಾರ ಬಿಟ್ಟು ಬಂದಿರುವವನು. ಯಾರಿಗೆ ಹೇಳುತ್ತಾರೆ ಇವರು.

ಅಧ್ಯಕ್ಷರು: ಈಗ ಮಾನ್ಯ ಯಡಿಯೂರಪ್ಪನವರು. D.C.M. ಮಾತನಾಡುತ್ತಾರೆ.

(ಗೊಂದಲ)

ಒಬ್ಬ ಮಾನ್ಯ ಸದಸ್ಯರು: ಈ ಕಡೆ ಕುಳಿತುಕೊಂಡು ಮಾತನಾಡುವ ಇವರೆಲ್ಲ ರಾಜೀನಾಮೆ ಕೊಡಬೇಕು. ನೀವೂ ಹೋಗಿ. ಸಾಮಾಜಿಕ ನ್ಯಾಯಕ್ಕೋಸ್ಕರ ನೀವೂ ಕೊಡಬೇಕು.

ಶ್ರೀ ಕೆ.ಎಂ.ಕೃಷ್ಣಮೂರ್ತಿ: ಅವರು ಮತ್ತೆ ಕಾಂಗ್ರೆಸ್ ಪಕ್ಷದಿಂದ ಗೆದ್ದು ಬಂದಿಲ್ಲವೇ?

ಒಬ್ಬ ಮಾನ್ಯ ಸದಸ್ಯರು: ಮಾನ್ಯ ಕೃಷ್ಣಮೂರ್ತಿಯವರೇ, ನೀವೂ ಆ ಕಡೆ ಹೋಗಿ.

ಅಧ್ಯಕ್ಷರು: ಯಾರೂ ಕುಳಿತುಕೊಂಡು ಮಾತನಾಡಬೇಡಿ. D.C.M. ಅವರು ಮಾತನಾಡಲು ಎದ್ದು ನಿಂತಿದ್ದಾರೆ. ನಾನು ಅವರಿಗೆ ಅವಕಾಶ ಮಾಡಿಕೊಟ್ಟಿದ್ದೇನೆ. ಏಕೆ ಮಧ್ಯೆ ಮಾತನಾಡುತ್ತೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ (ಉಪ ಮುಖ್ಯ ಮಂತ್ರಿ ಹಾಗೂ ಹಣಕಾಸಿನ ಸಚಿವರು): ಮಾನ್ಯ ಅಧ್ಯಕ್ಷರೇ, ಒಂದು ಸಂತೋಷವೆಂದರೆ, ನಮ್ಮ ಕಾಂಗ್ರೆಸ್ಸಿನ ಸ್ನೇಹಿತರು ಮತ್ತೆ ವಾಪಸ್ಸು ಬಂದು ಕಾರ್ಯಕಲಾಪ ನಡೆಯಲು ಅವಕಾಶ ಮಾಡಿಕೊಟ್ಟಿದ್ದಾರೆ. ಅವರಿಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಕಳೆದ 20 ವರ್ಷಗಳಿಂದ ಈ ಮನೆಯಲ್ಲಿ ಬಿ.ಜೆ.ಪಿ.ಯವರ ಬಗ್ಗೆ ಅನೇಕ ಟೀಕೆ ಟಿಪ್ಪಣಿಗಳನ್ನು ಮಾಡುತ್ತಿದ್ದೀರಿ. ಪ್ರಜಾತಂತ್ರ ವ್ಯವಸ್ಥೆಯಲ್ಲಿ ಮಾಲೀಕರು ಈ ನಾಡಿನ ಜನರು. ಯಾರು ಜಾತಿವಾದಿಗಳು, ಯಾರು ಅಲ್ಪಸಂಖ್ಯಾತರ ವಿರೋಧಿಗಳು, ಯಾರು ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ಪರವಿರುವಂಥವರು, ಯಾರು ಹಿಂದುಳಿದ ವರ್ಗದ ಪರವಿರುವವರು,

ವಿರೋಧಿಗಳ್ಯಾರು ಎನ್ನುವುದನ್ನೆಲ್ಲಾ ಚುನಾವಣೆಯ ಸಮಯದಲ್ಲಿ ಈ ರಾಜ್ಯದ ಜನ, ನಾವು ಮಾಡಿದಂಥ ಕೆಲಸಗಳನ್ನು ನೋಡಿಕೊಂಡು ತೀರ್ಮಾನ ಮಾಡುತ್ತಾರೆ. ನಿಮ್ಮ ನಡವಳಿಕೆಯಿಂದ . . . .

ಶ್ರೀ ಸಿದ್ದರಾಮಯ್ಯ: ನನ್ನ ಕಡೆಗೆ ಕೈತೋರಿಸಿಕೊಂಡು ಹೇಳುತ್ತಿದ್ದೀರಿ.

ಶ್ರೀ ಬಿ.ಎಸ್. ಯಡಿಯೂರಪ್ಪ: ನಿಮ್ಮ ಎಂದರೆ, ಕಾಂಗ್ರೆಸ್ಸಿನವರು. ನೀವು ಕಾಂಗ್ರೆಸ್ಸಿನವರು ಸ್ವಾಮಿ ಈಗ. ನಿಮ್ಮೆಲ್ಲರ ನಡವಳಿಕೆಯಿಂದ . . . . .

ಅಧ್ಯಕ್ಷರು: ಮಾನ್ಯ ಸಿದ್ದರಾಮಯ್ಯನವರೇ, ನಿಮ್ಮ ಎಂದರೆ, ಅಲ್ಲಿ ನಿಮ್ಮನ್ನು ನಾಯಕರನ್ನಾಗಿ ಮಾಡಿದ್ದಾರೆ. ನೀವು ಏಕೆ ಹೀಗೆ ಹೇಳುತ್ತೀರಿ.

ಶ್ರೀ ಅಮರೇಗೌಡ ಲಿಂಗನಗೌಡ ಬಯ್ಯಾಪುರ: ಮಾನ್ಯ ಸಿದ್ದರಾಮಯ್ಯನವರು ಇನ್ನೂ ಮಾನಸಿಕವಾಗಿ ಕಾಂಗ್ರೆಸ್ಸಿನಲ್ಲಿ ಇಲ್ಲ. ಅವರು ಸುಮ್ಮನೆ ದೈಹಿಕವಾಗಿ ಅಲ್ಲಿದ್ದಾರೆ. ಅದಕ್ಕಾಗಿ ಹಾಗೆ ಹೇಳುತ್ತಿದ್ದಾರೆ.

ಒಬ್ಬ ಮಾನ್ಯ ಸದಸ್ಯರು: ಬಯ್ಯಾಪುರ್‌ರವರೇ, ನೀವೂ ಸಹ ಮಾನಸಿಕವಾಗಿ ಜೆ.ಡಿ.(ಎಸ್)ನಲ್ಲಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ಇಷ್ಟನ್ನಾದರೂ ಒಪ್ಪುತ್ತೀರಲ್ಲವೇ? ನಿಮ್ಮೆಲ್ಲರ ಟೀಕೆ ಟಿಪ್ಪಣಿಗಳು, ಆರೋಪಗಳು, ನಮ್ಮ ಮೇಲೆ ಇಲ್ಲಸಲ್ಲದ ಆರೋಪದಿಂದ ಈ ರೀತಿಯ ಜಾತಿವಾದಿಗಳು ಎಂದು ನಮ್ಮನ್ನು ಕರೆದ ಮೇಲೂ ಸಹ, ಕರ್ನಾಟಕದಲ್ಲಿ ಶಾಸಕರ ಸಂಖ್ಯೆಯನ್ನು ತೆಗೆದುಕೊಂಡರೆ, ಲೋಕಸಭಾ ಸದಸ್ಯರ ಸಂಖ್ಯೆಯನ್ನು ತೆಗೆದುಕೊಂಡರೆ, ಭಾರತೀಯ ಜನತಾ ಪಕ್ಷದವರಾದ ನಾವು, we are in No.1 place. ಎರಡನೆಯದಾಗಿ, ಭಗವಂತನ ದಯೆಯಿಂದ ಮತ್ತು ಜನರ ಅದೃಷ್ಟದಿಂದ, ಮಾನ್ಯ ಕುಮಾರಸ್ವಾಮಿಯವರು ಮತ್ತು ನಾವು ಸೇರಿ ಸಮ್ಮಿಶ್ರ ಸರ್ಕಾರವನ್ನು ರಚನೆ ಮಾಡಿದೆವು. ಅದು ಕೆಲವರಿಗೆ ಹಿಡಿಸಿರಬಹುದು, ಕೆಲವರಿಗೆ ಹಿಡಿಸದೇ ಇರಬಹುದು. ನಾನು ಆಯವ್ಯಯವನ್ನು ಮಂಡನೆ ಮಾಡಿದೆ. ಅವಕಾಶಗಳಿದ್ದಾಗ ಒಬ್ಬ ವ್ಯಕ್ತಿಯ ನಡೆ, ನುಡಿ, ಕೃತಿಯಲ್ಲಿ ಹೇಗೆ ಎನ್ನುವುದನ್ನು ಜನತೆ ಪರೀಕ್ಷೆ ಮಾಡಬೇಕು. ಆ ಪಕ್ಕದಲ್ಲಿ ಕುಳಿತಿರುವ ನಮ್ಮ ಕಾಂಗ್ರೆಸ್ಸಿನ ಸ್ನೇಹಿತರನ್ನೂ ಪರೀಕ್ಷೆ ಮಾಡಬೇಕು.

ಶ್ರೀ ವಾಟಾಳ್ ನಾಗರಾಜ್: ಜನರ ಅದೃಷ್ಟದಿಂದ ಅಲ್ಲ, ಅವರ ಆಶೀರ್ವಾದದಿಂದ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆಯಿತು, ಜನರ ಆಶೀರ್ವಾದದಿಂದಲೇ ಎಂದು ಒಪ್ಪುತ್ತೇನೆ, ಅದನ್ನು ನಾನು ತಿದ್ದಿಕೊಳ್ಳುತ್ತೇನೆ. ನಾನು ಬಜೆಟ್ಟನ್ನು

ಮಂಡನೆ ಮಾಡಿದೆ. ಚರ್ಚೆಯಾಗಲಿ, ಯಾರಾದರೊಬ್ಬರು ಎದ್ದು ನಿಂತುಕೊಂಡು, ಈ ನಾಡಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಜನರಿಗೆ, ಹಿಂದುಳಿದ ವರ್ಗದ ಜನರಿಗೆ, ಅಲ್ಪಸಂಖ್ಯಾತರಿಗೆ, ಯಡಿಯೂರಪ್ಪನವರೇ ನಿಮಗೆ ಅವಕಾಶ ಸಿಕ್ಕಾಗ, ಬಜೆಟ್ ಮಂಡನೆ ಮಾಡುವ ಕಾಲದಲ್ಲಿ, ಕುಮಾರಸ್ವಾಮಿಯವರು ನೀವು ಸೇರಿರುವ ಈ ಸಮ್ಮಿಶ್ರ ಸರ್ಕಾರದಲ್ಲಿ ಅವರಿಗೆ ಅನ್ಯಾಯ ಮಾಡಿದ್ದೀರಿ, ದ್ರೋಹ ಮಾಡಿದ್ದೀರಿ ಎನ್ನುವುದಕ್ಕೆ ಒಂದು ಉದಾಹರಣೆಯನ್ನು ತೋರಿಸಿ.

ಶ್ರೀ ಸಿದ್ದರಾಮಯ್ಯ: ಬಜೆಟ್ ಮೇಲೆ ಚರ್ಚೆ ಬರಲಿ. ಬಜೆಟ್ ಮೇಲೆ ಚರ್ಚೆ ಬಂದಾಗ ಏನು ಮಾಡಿದ್ದೀರಿ ಎಂದು ಹೇಳೋಣ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮಾತನಾಡುತ್ತೇನೆ ಬಿಡಿ. ಎರಡನೆಯದು, ನನಗೆ ಸಮಾಧಾನವಿದೆ.

ಶ್ರೀ ಎನ್. ಧರ್ಮಸಿಂಗ್: ಯಡಿಯೂರಪ್ಪನವರೇ, ಒಂದು ನಿಮಿಷ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಪೂರ್ತಿ ಮಾತನಾಡಿದ ಮೇಲೆ ನೀವು ಮಾತನಾಡಿ Sir.

ಶ್ರೀ ಎನ್. ಧರ್ಮಸಿಂಗ್: ಜನಾಭಿಪ್ರಾಯ ನಮ್ಮ ಪಕ್ಷದ ಕಡೆ ಇದೆ, ಇಲ್ಲಿ 80 ಜನ ಸದಸ್ಯರಿದ್ದೇವೆ, 18 ಜನ ಲೋಕಸಭಾ ಸದಸ್ಯರಿದ್ದಾರೆ ಎಂದು ಇವರು ಹೇಳುತ್ತಿದ್ದಾರೆ. ಕಳೆದ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ನೀವು ಒಂದು ಜಿಲ್ಲೆಯಲ್ಲಿ, ಒಂದು ತಾಲ್ಲೂಕಿನಲ್ಲಿಯೂ ಬರಲಿಲ್ಲ. ಅಲ್ಲಿ ನಿಮ್ಮವರು ಆರಿಸಿ ಬಂದರೇ? ಜನತಾದಳದವರು ಹಾಸನ ಮತ್ತು ಗ್ರಾಮಾಂತರವನ್ನು ಬಿಟ್ಟು ಬೇರೆ ಕಡೆಗಳಲ್ಲಿ ಬರಲಿಲ್ಲ. ತಾವೂ ಆರಿಸಿ ಬರಲಿಲ್ಲ. ಜನರು ನಿಮ್ಮನ್ನು ತಿರಸ್ಕಾರ ಮಾಡಿದ್ದಾರೆ. ಬಜೆಟ್‌ನ ಮೇಲೆ ಚರ್ಚೆಗೆ ಬಂದಾಗ, ಈ ರಾಜ್ಯದ ಜನತೆಗೆ, ಪರಿಶಿಷ್ಟ ಜನರಿಗೆ ತಾವು ಏನು ಕೊಡುತ್ತೀರಿ, ಇಲ್ಲಿಯವರೆಗೆ ಏನು ಮಾಡಿದ್ದೀರಿ, ಎನ್ನುವುದೆಲ್ಲವನ್ನು ನಾವು ಕೇಳುತ್ತೇವೆ. ಅದರ ಬಗ್ಗೆ ಈಗ ಏಕೆ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮಾತನಾಡುವುದಕ್ಕೆ ಬಿಡಿ, ವಿಷಯಾಂತರವನ್ನು ಏಕೆ ಮಾಡುತ್ತೀರಿ?

ಶ್ರೀ ಎನ್. ಧರ್ಮಸಿಂಗ್: ಇವತ್ತಿನ ಚರ್ಚೆ ಲಿಮಿಟೆಡ್ ಆಗಿ, ನಾವು ಯಾವ ವಿಷಯದ ಬಗ್ಗೆ ಪ್ರತಿಭಟನೆ ಮಾಡಿದ್ದೇವೆ, ಅದರ ಬಗ್ಗೆ ರಾಜ್ಯಪಾಲರು ಏನು ಹೇಳಿದ್ದಾರೆ ಎನ್ನುವ ಬಗ್ಗೆ ಮುಖ್ಯಮಂತ್ರಿಗಳು ಏನು ಹೇಳುತ್ತಾರೆ ಎನ್ನುವುದರ ಬಗ್ಗೆ ಮಾತ್ರ ನಾವು ಈಗ ಕೇಳಲಿಕ್ಕೆ ಇಷ್ಟಪಡುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಆಯಿತು, ಚರ್ಚೆ ಮಾಡೋಣ.

ಶ್ರೀ ಎನ್. ಧರ್ಮಸಿಂಗ್: ರಾಜ್ಯಪಾಲರ ಆದೇಶವನ್ನು ಪಾಲನೆ ಮಾಡುತ್ತೀರೋ, ಇಲ್ಲವೋ ಎನ್ನುವುದು ಈಗಿರುವ ಪ್ರಶ್ನೆ.

ಶ್ರೀ ಕೆ.ಎಸ್.ಈಶ್ವರಪ್ಪ: ಇಷ್ಟು ವರ್ಷ ತಾಲ್ಲೂಕು ಪಂಚಾಯಿತಿಯಿಂದ ಹಿಡಿದು ಆಳಿದಿರಲ್ಲ ನೀವು, ಏನು ಮಾಡಿದಿರಿ?

ಶ್ರೀ ಸಿದ್ದರಾಮಯ್ಯ: ನೀವು ಕೇಂದ್ರದಲ್ಲಿ ಆರು ವರ್ಷ ಸರ್ಕಾರ ಮಾಡಿದಿರಲ್ಲ. "India is Shining" ಎಂದು ಘೋಷಣೆ ಮಾಡಿದ್ದಿರಲ್ಲ, ಈಗ ನಿಮ್ಮ ಕತೆ ಏನಾಯಿತು?

ಶ್ರೀ ಆರಗ ಜ್ಞಾನೇಂದ್ರ: ಇಷ್ಟು ವರ್ಷ ತಾಲ್ಲೂಕು ಪಂಚಾಯಿತಿಯಿಂದ ಹಿಡಿದು ಎಲ್ಲ ಕಡೆ ಆಳಿದಿರಲ್ಲ ನೀವು, 120 ಇದ್ದವರು 65ಕ್ಕೆ ಬಂದಿದ್ದೀರಲ್ಲ, ಇದು ಏಕೆಂದು ಹೇಳಿ. ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಹರಿಜನ ಗಿರಿಜನರು ನಿಮಗೆ ಓಟು ಕೊಟ್ಟರೇ? ಅವರು ನಿಮ್ಮನ್ನು ಸೋಲಿಸಲಿಲ್ಲವೇ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆಂದರೆ, ಈ ನಾಡಿನ ಇತಿಹಾಸದಲ್ಲಿ, ಸ್ವಾತಂತ್ರ್ಯ ನಂತರ ಮೊದಲ ಬಾರಿಗೆ, ಕುಮಾರಸ್ವಾಮಿಯವರು ಯಡಿಯೂರಪ್ಪನವರು ಸೇರಿಕೊಂಡು, ಬಿ.ಜೆ.ಪಿ. ಮತ್ತು ಜೆ.ಡಿ.(ಎಸ್)ನ ಸಮ್ಮಿಶ್ರ ಸರ್ಕಾರದವರು ಕೊಟ್ಟಂಥ ಆಯವ್ಯಯದಲ್ಲಿ ಅಲ್ಪಸಂಖ್ಯಾತರಿಗಾಗಲೀ, ಹಿಂದುಳಿದ ವರ್ಗದವರಿಗೆ ಆಗಲೀ, ಪರಿಶಿಷ್ಟ ಜನಾಂಗದವರಿಗಾಗಲೀ ಮೂಗಿಗೆ ತುಪ್ಪ ಹಚ್ಚುವಂಥ ಕೆಲಸವನ್ನು ನಾವು ಮಾಡಲಿಲ್ಲ.

(ಗೊಂದಲ)

ಶ್ರೀ ಬಿ.ಎಸ್.ಯಡಿಯೂರಪ್ಪ: ನನಗೆ ಐದು ನಿಮಿಷ ಮಾತನಾಡಲು ಬಿಡಿ.

ಶ್ರೀ ಧರ್ಮಸಿಂಗ್: ಜನ ಉಗುಳುತ್ತಾರೆ. ಅಲ್ಪಸಂಖ್ಯಾತರು, ಹಿಂದುಳಿದ ಜನಾಂಗದವರಿಗೆ ನೀವು ಏನು ಮಾಡಿದ್ದೀರಿ? ಯಾರಿಗೆ ಪ್ರಾತಿನಿಧ್ಯ ಕೊಟ್ಟಿದ್ದೀರಿ?

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮಾತನಾಡುವುದಕ್ಕೆ ಬಿಡಿ. Too much ಇದು. This is too much. ನನ್ನ ಮಾತನ್ನೇ ಕೇಳುವುದಕ್ಕೆ ರೆಡಿ ಇಲ್ಲವಲ್ಲ ಇವರು. ಯಾಕೆ ಹೀಗೆ ಮಾಡುತ್ತೀರೋ ಗೊತ್ತಿಲ್ಲ. ನೀವು ಹಿರಿಯರಿದ್ದೀರಿ. ನಾನು ಯೀಲ್ಡ್ ಆಗಿಲ್ಲ.

ಶ್ರೀ ಸಿದ್ದರಾಮಯ್ಯ: ಮಾನ್ಯ ಯಡಿಯೂರಪ್ಪನವರೇ ಕೇಳಿ. ನೀವು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ, ಇಲ್ಲ ಎಂದು ಹೇಳುವುದಿಲ್ಲ. ಆದರೆ,

ಚರ್ಚೆಗೆ ಅವಕಾಶವಿಲ್ಲದಿರುವಾಗ ನೀವು ಸುಮ್ಮನೆ ಸ್ಟೇಟ್‌ಮೆಂಟ್ ಮಾಡಿದರೆ ಏನು ಪ್ರಯೋಜನ? ಬಜೆಟ್ ಬಗ್ಗೆ ಚರ್ಚೆಯಾಗಲಿಲ್ಲ, Governor's address ಮೇಲೆ ಚರ್ಚೆಯಾಗಲಿಲ್ಲ. ಚರ್ಚೆಯಾಗಲು ಬಿಡಲಿಲ್ಲ. ಈಗ ನೀವು ಇದನ್ನೆಲ್ಲ ಹೇಳಲು ಹೊರಟರೆ, ಏನು ಹೇಳಬೇಕೋ ಅದನ್ನು ನಾವೂ ಹೇಳುತ್ತೇವೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ಮಾನ್ಯ ಸಿದ್ಧರಾಮಯ್ಯನವರೇ ನಾನು ನಿಮ್ಮ ಬಗ್ಗೆ ಗೌರವ ಇಟ್ಟುಕೊಂಡಿದ್ದೇನೆ. ಎರಡು ನಿಮಿಷ ನನಗೆ ಮಾತನಾಡಲು ಬಿಡಿ. ಅವರು ಬಹಳ ಮಾತನಾಡಿದ್ದಾರೆ. ನಮ್ಮನ್ನು ಜಾತಿವಾದಿಗಳು ಎಂದು ಕರೆದಿದ್ದಾರೆ.

ಶ್ರೀ ದಿನೇಶ್ ಗುಂಡೂರಾವ್: ಜಾತಿವಾದಿಗಳು ಎಂದು ಅವರು ಹೇಳಿದ್ದು. ಅದನ್ನು ಹೇಳಿದ್ದು ಈಶ್ವರಪ್ಪನವರು, ನಾವಲ್ಲ.

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲು ಬಿಡಿ.

ಶ್ರೀ ದಿನೇಶ್ ಗುಂಡೂರಾವ್: ನೀವು ಯಾರು, ಏನು ಎನ್ನುವುದನ್ನು ಮತದಾರರು ಹೇಳಿದ್ದಾರೆ.

ಶ್ರೀ ಎನ್. ಧರ್ಮಸಿಂಗ್: ನೀವು ಹಿಂದೂ ಸಮಾವೇಶಗಳನ್ನು ಮಾಡುತ್ತಿದ್ದೀರಲ್ಲ, ನಿಮಗೆ ಮತದಾರರು ತೀರ್ಪು ಕೊಡುತ್ತಾರೆ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಮಾತನಾಡುವುದನ್ನು ಕೇಳುವುದಕ್ಕೇ ನಿಮಗೆ ಸ್ಥೈರಣೆ ಇಲ್ಲವಲ್ಲ. ನಾನು ಮಾತನಾಡುವುದಕ್ಕೆ ಬಿಡಬೇಕಲ್ಲ. ನಾನು ಯೀಲ್ಡ್ ಆಗಿಲ್ಲ. This is too much. ನಾನು ಹೇಳುವುದು ಇಷ್ಟೇ, ಬೇಕಾದ್ದ ಆರೋಪಗಳನ್ನು ಭಾರತೀಯ ಜನತಾ ಪಾರ್ಟಿಯ ಮೇಲೆ ಮಾಡಿದಿರಿ. ತಾಲ್ಲೂಕು ಪಂಚಾಯಿತಿಯಲ್ಲಿ ನೀವು ಎಲ್ಲಿದ್ದೀರಿ, ಜಿಲ್ಲಾ ಪಂಚಾಯಿತಿಯಲ್ಲಿ ಎಲ್ಲಿದ್ದೀರಿ, ಗ್ರಾಮ ಪಂಚಾಯಿತಿಯಲ್ಲಿ ಎಲ್ಲಿದ್ದೀರಿ, ಎಂದು ನೀವು ಹೇಳಿದಿರಿ. ಎಲ್ಲಿದ್ದೇವೆ ಎನ್ನುವುದನ್ನು ಮುಂದೆ ಬರುವಂಥ ಚುನಾವಣೆಯಲ್ಲಿ ತೋರಿಸುತ್ತೇವೆ, ಆಗ ಕುಮಾರಸ್ವಾಮಿಯವರು ಯಡಿಯೂರಪ್ಪನವರು ನಿಮ್ಮನ್ನು ನೆಲ ಕಚ್ಚುವ ಹಾಗೆ ಮಾಡುತ್ತೇವೆ. ಕರ್ನಾಟಕ ರಾಜ್ಯದಲ್ಲಿ ನಿಮ್ಮ address ಇರುವುದಿಲ್ಲ. ಅದನ್ನು ಮಾಡಿ ತೋರಿಸುತ್ತೇವೆ, wait ಮಾಡಿ. ಸ್ವಲ್ಪ ಕಾದು ನೋಡಿ.

(ಗೊಂದಲ)

ಶ್ರೀ ದಿನೇಶ್ ಗುಂಡೂರಾವ್: ಚುನಾವಣೆಯನ್ನೇ ಮಾಡುತ್ತಿಲ್ಲ. ಮೊದಲು ಮೇಲ್ಮನೆಯ ಅಧ್ಯಕ್ಷರ election ಮಾಡುವುದಕ್ಕೆ ಹೇಳಿ. Election ಮಾಡುವುದಕ್ಕೇ ಅವರಿಗೆ ಧೈರ್ಯವಿಲ್ಲ.

ಶ್ರೀ ಬಿ.ಎಸ್.ಯಡಿಯೂರಪ್ಪ: ನಾನು ಹೇಳುವುದನ್ನು ಕೇಳುವುದಕ್ಕೇ ರೆಡಿ ಇಲ್ಲವಲ್ಲ. ಅವರಿಗೆ ಏನಾಗಿದೆ ಎಂದು ಕೇಳಿ Sir. ನೀವು ಏಕೆ ಒದ್ದಾಡುತ್ತಿದ್ದೀರಿ?

(ಗೊಂದಲ)

ಅಧ್ಯಕ್ಷರು: ಅವರು ಮಾತನಾಡಲಿ ಬಿಡಿ. I have allowed him to speak. ಎಲ್ಲರೂ ಕುಳಿತುಕೊಳ್ಳಿ.

ಶ್ರೀ ಬಿ.ಎಸ್.ಯಡಿಯೂರಪ್ಪ: ಚರ್ಚೆ ಮಾಡಲು ಬಿಡಲಿಲ್ಲ ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದರು. ಮಾಜಿ ಮುಖ್ಯಮಂತ್ರಿಗಳು ಮತ್ತು ಪ್ರತಿಪಕ್ಷದ ನಾಯಕರಾದಂಥ ಧರ್ಮಸಿಂಗ್‌ರವರೂ ಹೇಳುತ್ತಾರೆ. ಚರ್ಚೆ ಮಾಡಬೇಡಿ ಎಂದು ನಾವು ಹೇಳಿದ್ದೇವೆಯೇ? ರಾಜ್ಯಪಾಲರ ಭಾಷಣದ ಮೇಲೆ ಚರ್ಚೆ ಮಾಡಬೇಡಿ ಎಂದು ಹೇಳಿದ್ದೇವೇಯೇ? ಅಥವಾ ಬಜೆಟ್ ಅಧಿವೇಶನದಲ್ಲಿ ನೀವು ಚರ್ಚೆ ಮಾಡಬೇಡಿ ಎಂದು ಹೇಳಿದ್ದೇವೆಯೇ? ಬೆಳಗಾಂ ಅಧಿವೇಶನದಲ್ಲಿ ಚರ್ಚೆ ಮಾಡಬೇಡಿ ಎಂದು ಹೇಳಿದ್ದೇವೆಯೇ? ನಾನು ಏನು ಹೇಳುವುದಕ್ಕೆ ಹೊರಟಿದ್ದೇನೆ ಎಂದರೆ, ನಿಜ, ಅಲ್ಪಸಂಖ್ಯಾತರು, ಹಿಂದುಳಿದ ವರ್ಗದವರು, ಪರಿಶಿಷ್ಟ ಜನಾಂಗದವರಿಗೆ ನಾವೇ ವಾರಸುದಾರರು ಎಂದು ನೀವು ಹೇಳಿಕೊಂಡಿದ್ದೀರಿ. ಆದರೆ, ನಾವು ಕೃತಿಯಲ್ಲಿ, ಸ್ವಾತಂತ್ರ್ಯ ಬಂದ ಈ 60 ವರ್ಷಗಳಲ್ಲಿ ನೀವು ಯಾವ ರೀತಿ ಆ ಜನರಿಗೆ ಅನ್ಯಾಯ ಮಾಡಿಕೊಂಡು ಬಂದಿರಿ ಎನ್ನುವುದನ್ನು ನಾವು ಆಯವ್ಯಯದಲ್ಲಿ ತೋರಿಸುವುದರ ಮೂಲಕ ಆ ಜನರಲ್ಲಿ ಈ ಸಮ್ಮಿಶ್ರ ಸರ್ಕಾರದ ಬಗ್ಗೆ ವಿಶ್ವಾಸ ಬರುವ ಹಾಗೆ ಮಾಡಿದ್ದೇವೆ. Vote Bank ರಾಜಕಾರಣವನ್ನು ನಾವು ಮಾಡಲಿಲ್ಲ. ಕೆಲವರು "ಗರೀಬಿ ಹಟಾವೋ" ಘೋಷಣೆ ಮಾಡಿದರು. ಆದರೆ ಗರೀಬರನ್ನು ಶ್ರೀಮಂತರನ್ನಾಗಿ ಮಾಡಿ, ಅವರ ಕಾಲ ಮೇಲೆ ಅವರು ಗೌರವದಿಂದ, ನೆಮ್ಮದಿಯಿಂದ, ಸ್ವಾಭಿಮಾನದಿಂದ ಬಾಳಿ ಬದುಕುವಂಥ ಕಾರ್ಯಕ್ರಮವನ್ನು ನಾವು ಕೊಟ್ಟಿದ್ದೇವೆ. ಇವತ್ತು "ಭಾಗ್ಯಲಕ್ಷ್ಮಿ" ಯೋಜನೆ ತಂದಿದ್ದೇವೆ. ಆ ರೀತಿ ನೀವು ಏಕೆ ಮಾಡಲಿಲ್ಲ? 4% ಬಡ್ಡಿಗೆ ಸಾಲವನ್ನು ನೀವು ಏಕೆ ಕೊಡಲಿಲ್ಲ? ಹಿಂದುಳಿದ ವರ್ಗದವರ ಬಗ್ಗೆ ನೀವು

ಮಾತನಾಡುತ್ತೀರಿ! ಅಲ್ಪಸಂಖ್ಯಾತರಿಗೆ ನೀವು ಕೊಟ್ಟಿದ್ದೆಷ್ಟು? ನೀವು 40 ಕೋಟಿ ರೂಪಾಯಿಗಳನ್ನು ಇಟ್ಟಿದ್ದರೆ ನಾನು 140 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇನೆ.

ಶ್ರೀ ಎನ್. ಧರ್ಮಸಿಂಗ್: ಮಾನ್ಯ ಯಡಿಯೂರಪ್ಪನವರೆ, Employment ಗೆ . . . .

(ಗೊಂದಲ)

ಶ್ರೀ ಸಿದ್ದರಾಮಯ್ಯ: ಲೆಕ್ಕ ಕೊಡುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ಆಮೇಲೆ ಲೆಕ್ಕ ನೋಡೋಣ. ನೀವೆಷ್ಟು... .

ಶ್ರೀ ಸಿದ್ದರಾಮಯ್ಯ: ಜನವರಿವರೆಗೆ ಎಷ್ಟು ಖರ್ಚು ಮಾಡಿದ್ದೀರೆಂದು ಲೆಕ್ಕ ಕೊಡುತ್ತೀರಾ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: . .. .ಏನು ಖರ್ಚು ಮಾಡಿದ್ದೀರಾ . . . . ಚರ್ಚೆ ಮಾಡೋಣವೆಂದೆ.

ಶ್ರೀ ಸಿದ್ದರಾಮಯ್ಯ: ಸ್ವಲ್ಪ ಆ ಲೆಕ್ಕವನ್ನು ಹೇಳಿ. (ಗೊಂದಲ) 140 ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದಿರಿ, ಜನವರಿವರೆಗೆ ಎಷ್ಟು ಖರ್ಚು ಮಾಡಿದ್ದೀರೆಂದು ಹೇಳುತ್ತೀರಾ?

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವೇನು ಹೇಳಿದಿರಿ? ನಾನು ಸಿದ್ಧಾಂತಕ್ಕೆ ಬದ್ಧ. . ..

ಶ್ರೀ ಸಿದ್ದರಾಮಯ್ಯ: Not even 20% you have spent.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: . . .ನೀವು ಸಿದ್ಧಾಂತಕ್ಕೆ ಬದ್ಧರಾಗಿದ್ದರೆ, ಯಾವ ದೇವೇಗೌಡರು ಇವರನ್ನು ಇಲ್ಲಿಯವರೆಗೆ ಬೆಳೆಸಿದರೋ ಅವರ ಜೊತೆಗೆ ನಿಂತು ಮುಖ್ಯಮಂತ್ರಿಗಿರಿ ಕೊಡಲಿಲ್ಲವೆಂದು ಪಕ್ಷಾಂತರ ಮಾಡಿಬಿಟ್ಟು ಕುರ್ಚಿಗಂಟಿಕೊಂಡವರು. : . .

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಮಗೆ ಹೇಳಿಕೊಳ್ಳೀ. ಹೌದು ರೀ. ಮುಖ್ಯಮಂತ್ರಿ ಪದವಿ ಕೇಳಲಿಕ್ಕೆ ನನಗೆ ಹಕ್ಕಿದೆ. (ಗೊಂದಲ) ಇದನ್ನು ಇಲ್ಲಿ ಕೇಳುವುದಕ್ಕೆ ನೀವ್ಯಾರು? ನನಗೆ ಕೇಳುವುದಕ್ಕೆ ಬಿ.ಜೆ.ಪಿ.ಯವರು ಯಾರು?

ಶ್ರೀ ಬಿ.ಎಸ್. ಯಡಿಯೂರಪ್ಪ: ಸ್ವಾಮಿ, ನೀವು ಪಕ್ಷಾಂತರ ಮಾಡಿ....

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಾನು ಆ ಪಕ್ಷದಲ್ಲಿ ಕೆಲಸ ಮಾಡಿದ್ದು ಕೇಳುವುದಕ್ಕೆ ನನಗೆ ಹಕ್ಕಿದೆ. ನೀವ್ಯಾರು ರೀ ಕೇಳುವುದಕ್ಕೆ? (ಗೊಂದಲ) ನಿಮ್ಮ ಪಕ್ಷ majority ಗೆ ಬರದಿದ್ದರೂ Chief Minister ಆಗಬೇಕೆಂದು ನೀವೇ ಒದ್ದಾಡುತ್ತಿದ್ದೀರಲ್ಲಾ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಹಿಂದುಳಿದ ವರ್ಗದವರಿಗೆ ನೀವು ವಾರಸುದಾರರಲ್ಲ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹೌದು. ನಿಮಗೆ ಹಿಂದುಳಿದವರು ಆಗಬಾರದೇ? ನಿಮಗೆ ಹಿಂದುಳಿದವರು ಮುಖ್ಯಮಂತ್ರಿ ಆಗಬಾರದೇ? ನೀವು ಮಾತ್ರ ಮುಖ್ಯಮಂತ್ರಿ ಆಗಬೇಕೇ?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ಕೂಗಿದರೆ, ಚೀರಿದರೆ ಆಗುವುದಿಲ್ಲರೀ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನೀವು ಒಡೆದುಹಾಕುವವರು. ನೀವು ಸಮಾಜವನ್ನು ಛಿದ್ರ ಛಿದ್ರ ಮಾಡುವವರು.

ಶ್ರೀ ಬಿ.ಎಸ್. ಯಡಿಯೂರಪ್ಪ: ಏಕೆ ಕೂಗುತ್ತೀರಾ? ಚೀರುತ್ತೀರಾ?

ಶ್ರೀ ಸಿದ್ದರಾಮಯ್ಯ: ನೀವು ಚೀರುವವರು. (ಗೊಂದಲ) ನೀವೂ ಮಾತನಾಡಿ, ನಾನೂ ಸಹ ಮಾತನಾಡುತ್ತೇನೆ. ನೀವು ಜೋರಾಗಿ ಮಾತನಾಡಿದರೆ ನನಗೂ ಸಹ ಮಾತನಾಡುವುದಕ್ಕೆ ಬರುವುದಿಲ್ಲವೇ? (ಗೊಂದಲ) ನಿಮಗಿಂತ ಜಾಸ್ತಿ ನನಗೆ ಮಾತನಾಡುವುದಕ್ಕೆ ಬರುತ್ತದೆ.

(ಗೊಂದಲ)

ಶ್ರಿ ಬಿ.ಎಸ್. ಯಡಿಯೂರಪ್ಪ: ನನ್ನ ಮಾತು ಕೇಳುವುದಕ್ಕೂ ನೀವು ಸಿದ್ಧವಿಲ್ಲವೆಂದರೆ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ಹೌದು. ನಿಮ್ಮ ಸಿದ್ಧಾಂತ ನಮಗೇನೂ ಹೇಳಬೇಕಾದ್ದಿಲ್ಲ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನಮ್ಮ ಮಾತು ಕೇಳುವುದಕ್ಕೆ ಸಿದ್ಧರಿರಬೇಕಲ್ಲವೇ?

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಿಮಗೆ ಸಿದ್ಧಾಂತವೇ ಇಲ್ಲ. ನನಗೇನು ನೀವು ಹೇಳಿಕೊಡುವುದು?

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ನೀವೇನು ಗುತ್ತಿಗೆ ತೆಗೆದುಕೊಂಡಿಲ್ಲ ರೀ. ನಾಳೆ ಬಂದಾಗ ತೋರಿಸುತ್ತೇವೆ ಯಾರ್ಯಾರ ಸ್ಥಾನ ಏನೆಂದು?

ಶ್ರೀ ಸಿದ್ದರಾಮಯ್ಯ: ಹೋಗೋಣ. ಬನ್ರೀ. ಈಗ ಹೋಗಿದ್ದು ಬರಲಿಲ್ಲವೇ ನಾನು?

(ಗೊಂದಲ)

ಅಧ್ಯಕ್ಷರು: ಎಲ್ಲರೂ ಕುಳಿತುಕೊಳ್ಳಿ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ನಾನು ವಿನಯಪೂರ್ವಕವಾಗಿ ತಮ್ಮಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ. ಸದನದಲ್ಲಿ ಪಟ್ಟಿಯಲ್ಲಿರುವಂತೆ ಕಾರ್ಯಕಲಾಪಗಳು ನಡೆಯಬೇಕಾಗಿದೆ.

(ಗೊಂದಲ)

ಶ್ರೀ ಬಿ.ಎಸ್. ಯಡಿಯೂರಪ್ಪ: ರಾಷ್ಟ್ರೀಯ ಪಕ್ಷ ಭಾರತೀಯ ಜನತಾ ಪಾರ್ಟಿ. ಭಾರತೀಯ ಜನತಾ ಪಾರ್ಟಿಯ ಬಗ್ಗೆ ನೀವು ಮಾತನಾಡಬೇಕಾದರೆ ಬಹಳ ಎಚ್ಚರಿಕೆಯಿಂದ ಮಾತನಾಡಬೇಕಾಗುತ್ತದೆ. (ಗೊಂದಲ) ರಾಷ್ಟ್ರೀಯ ಪಕ್ಷದ ಬಗ್ಗೆ ಮಾತನಾಡಬೇಕಾದರೆ ಎಚ್ಚರಿಕೆಯಿಂದ ಮಾತನಾಡಬೇಕಾಗುತ್ತದೆ. ಜವಾಬ್ದಾರಿಯಿಂದ ನೀವು ಮಾತನಾಡಬೇಕಾಗುತ್ತದೆ. ಏನು ಬೇಕೋ ಹಾಗೆ ಮಾತನಾಡುವುದಕ್ಕೆ ಬಿಡುವುದಿಲ್ಲ. (ಗೊಂದಲ) ನಾವೇ ಎಲ್ಲರಿಗೂ ವಾರಸುದಾರರೆಂದು ನೀವು ತಿಳಿದುಕೊಂಡಿದ್ದೀರಿ.

ಅಧ್ಯಕ್ಷರು: ಈಗ let us go to the business ಎಲ್ಲ ಆಗಿದೆ.

ಶ್ರೀ ಎಂ.ಪಿ. ಪ್ರಕಾಶ್: ಮಾನ್ಯ ಅಧ್ಯಕ್ಷರೆ, ಈಗ ನಿಯಮಾವಳಿಗಳ ಪ್ರಕಾರ ನಾವೆಲ್ಲರೂ ನಡೆದುಕೊಂಡರೆ ಈ ಒಂದು ಸದನಕ್ಕೆ ಘನತೆ ಬರುತ್ತದೆ.

(ಗೊಂದಲ)

ಶ್ರೀ ಎಂ.ಪಿ. ಪ್ರಕಾಶ್: ತಡೆಯಿರಿ. ಏನಿದು ಮಾತನಾಡುವುದು? (ಗೊಂದಲ) ಅದು ಬಿಡಿ. ಅಲ್ಲಿಗೆ ಬರುತ್ತೇವೆ. ಈಗ ಯಾರ ಮಾತನ್ನು ಯಾರೂ ಕೇಳದ ಹಾಗೆ ಇದ್ದರೆ ಸಭೆಯ ಘನತೆ ಏನು ಎನ್ನುವ ಪ್ರಶ್ನೆ ಬರುತ್ತದೆ. ಇಲ್ಲಿ ಏನು ವಿಷಯ ಬಂದಿತ್ತು, ಆ ವಿಷಯದ ಬಗ್ಗೆ ಬಿಟ್ಟು

ವಿಷಯಾಂತರ ಮಾಡಿದ ಕೂಡಲೆ ... ಅವರು ಹೇಳುವುದು, ಇವರು ಹೇಳುವುದು ಪ್ರಶ್ನೆ ಅಲ್ಲ ಸರ್. (ಗೊಂದಲ) ಈ ರೀತಿ ಸದನವನ್ನು ನಡೆಸಬೇಕೇ?

(ಗೊಂದಲ)

ಅಧ್ಯಕ್ಷರು: ಈಗ ಸದನವನ್ನು ಮಧ್ಯಾಹ್ನ 2-30 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು ಮಧ್ಯಾಹ್ನ 1 ಗಂಟೆ 24 ನಿಮಿಷಕ್ಕೆ ಮುಕ್ತಾಯಗೊಂಡು ಪುನ: ಮಧ್ಯಾಹ್ನ 2-30 ಗಂಟೆಗೆ ಸೇರಲು ನಿಶ್ಚಯಿಸಿತು)

(ಸದನವು 3 ಗಂಟೆ 10 ನಿಮಿಷಕ್ಕೆ ಮತ್ತೆ ಸಮಾವೇಶಗೊಂಡಿತ್ತು ಪ್ರಾರಂಭವಾಯಿತು, ಸನ್ಮಾನ್ಯ ಸಭಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದ್ದರು)

ಅಧ್ಯಕ್ಷರು: ಈಗ ಕಾಗದ ಪತ್ರ ಲೇ ಮಾಡುವುದು ಇದೆ. ಅಪರ ಕಾರ್ಯದರ್ಶಿಗಳು ಸಭೆಯ ಮುಂದಿಡಲಾಗುವ ಕಾಗದ ಪತ್ರಗಳನ್ನು ಮಂಡಿಸಬೇಕು.

2 ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಅಪರ ಕಾರ್ಯದರ್ಶಿಗಳು:ಗೌರವಾನ್ವಿತ ಸಭಾಧ್ಯಕ್ಷರೆ, ಉಭಯ ಸದನಗಳಿಂದ ಅಂಗೀಕಾರವಾಗಿರುವಂತೆ ಹಾಗೂ ಘನತೆವೆತ್ತ ರಾಜ್ಯಪಾಲರ ಸಂದೇಶದೊಡನೆ ಪುನರ್ ಪರಿಗಣನೆಗಾಗಿ ಹಿಂದಿರುಗಿಸಲಾಗಿರುವ 2005ನೇ ಸಾಲಿನ ಕರ್ನಾಟಕ ಭೂ ಕಂದಾಯ (ಎರಡನೇ ತಿದ್ದುಪಡಿ) ವಿಧೇಯಕವನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು: ಮಂಡಿಸಲಾಯಿತು.

ಶ್ರೀ ಜೆ.ಸಿ.ಮಾಧುಸ್ವಾಮಿ:.ಮಾನ್ಯ ಹಂಪನಗೌಡ ಬಾದರ್ಲಿಯವರೆ ತಾವು ಮಾತನಾಡಿ,

ಶ್ರೀ ಹಂಪನಗೌಡ ಬಾದರ್ಲಿ: ಮಾನ್ಯ ಅಧ್ಯಕ್ಷರೆ, ...

ಶ್ರೀ ಜೆ.ಸಿ.ಮಾಧುಸ್ವಾಮಿ: ಮಾನ್ಯ ಅಧ್ಯಕ್ಷರೆ, ತುಂಗಭದ್ರಾ ನದಿ ಆಣೆಕಟ್ಟಿನ ಬಗ್ಗೆ ಅವರು ಪ್ರಸ್ತಾಪ ಮಾಡುತ್ತಾರೆ.

ಶ್ರೀ ಎನ್.ಧರ್ಮಸಿಂಗ್: ಇನ್ನು ಮುಕ್ತಾಯವಾಗಿಲ್ಲ.

ಶ್ರೀ ಜೆ.ಸಿ.ಮಾಧುಸ್ವಾಮಿ: ಏನು ಮುಕ್ತಾಯವಾಗಬೇಕು ಸಾರ್?

ಶ್ರೀ ಎನ್.ಧರ್ಮಸಿಂಗ್: ಅದರ ಬಗ್ಗೆ ಉತ್ತರವನ್ನು ಕೊಡಬೇಕಾಗುತ್ತದೆ.

ಶ್ರೀ ಜೆ.ಸಿ.ಮಾಧುಸ್ವಾಮಿ: ಬಿಡಿ ಸಾರ್. ಸಾಕು, ಬೆಳಿಗ್ಗೆಯಿಂದ ಅದನ್ನೆ ಮಾತನಾಡಿಕೊಂಡು ಇನ್ನು ಮುಕ್ತಾಯವಾಗಿಲ್ಲ. ತುಂಗಭದ್ರಾ ನದಿಯು ಒಣಗಿ